# ಉಡುಪಿ ಜಿಲ್ಲಾ ಮಕ್ಕಳ ಹಕ್ಕುಗಳ ರಕ್ಷಣಾ ನಿಯಮಾವಳಿಗಳು

# UDUPI DISTRICT
# CHILD RIGHTS PROTECTION PROTOCOL



**<u>ಉಡುಪಿ ಜಿಲ್ಲಾ ಮಕ್ಕಳ ಹಕ್ಕುಗಳ ರಕ್ಷಣಾ ನಿಯಮಾವಳಿ ರಚನೆಯಲ್ಲಿ ಪ್ರಮುಖ ಪಾತ್ರವಹಿಸಿದವರು:</u>** ಶ್ರೀಮತಿ ಪ್ರಿಯಾಂಕಾ ಮೇರಿ ಫ್ರಾನ್ಸಿಸ್, ಜಿಲ್ಲಾಧಿಕಾರಿ, ಉಡುಪಿ ಜಿಲ್ಲೆ; ಶ್ರೀ ಶಿವಾನಂದ ಕಾಪಶಿ, ನಿಕಟಪೂರ್ವ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್ ಉಡುಪಿ; ಶ್ರೀಮತಿ ಶಿಲ್ಪಾ ನಾಗ್, ನಿಕಟಪೂರ್ವ ಸಹಾಯಕ ಆಯುಕ್ತರು, ಕುಂದಾಪುರ ಉಪವಿಭಾಗ ಮತ್ತು ಶ್ರೀ ಭೂಬಾಲನ್, ಸಹಾಯಕ ಆಯುಕ್ತರು ಕುಂದಾಪುರ

**<u>ಈ ನಿಯಮಾವಳಿಯು ಜಾರಿಗೆ ಬಂದ ದಿನಾಂಕ:</u> 26ನೇ ಡಿಸೆಂಬರ್, 2018**

**<u>ಕರಡು ಸಮಿತಿಯ ಸದಸ್ಯರು</u>**

1. ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಉಡುಪಿ ಜಿಲ್ಲೆ
2. ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಉಡುಪಿ ಜಿಲ್ಲೆ
3. ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಉಡುಪಿ ಜಿಲ್ಲೆ
4. ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಉಡುಪಿ ಜಿಲ್ಲೆ
5. ಜಿಲ್ಲಾ ಕಾರ್ಮಿಕ ಅಧಿಕಾರಿಗಳು ಕಾರ್ಮಿಕ ಇಲಾಖೆ, ಉಡುಪಿ ಜಿಲ್ಲೆ
6. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಉಡುಪಿ ಜಿಲ್ಲೆ
7. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಅಧಿಕಾರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಅಧಿಕಾರಿ, ಇಲಾಖೆ, ಉಡುಪಿ ಜಿಲ್ಲೆ
8. ಶ್ರೀ ಬಿ. ಕೆ. ನಾರಾಯಣ್, ಮಾಜಿ ಅಧ್ಯಕ್ಷರು, ಮಕ್ಕಳ ಕಲ್ಯಾಣ ಸಮಿತಿ, ಉಡುಪಿ ಜಿಲ್ಲೆ
9. ಶ್ರೀಮತಿ ನಂದನ ರೆಡ್ಡಿ, ನಿರ್ದೇಶಕರು, ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್
10. ಶ್ರೀ ದಾಮೋದರ ಆಚಾರ್ಯ, ಕಾರ್ಯಕಾರಿ ನಿರ್ದೇಶಕರು, ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್
11. ಶ್ರೀಮತಿ ಕವಿತಾ ರತ್ನ, ನಿರ್ದೇಶಕರು, ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್
12. ಶ್ರೀಮತಿ ಕೃಪಾ ಎಂ. ಎಂ, ಸಂಯೋಜಕರು, ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್
13. ಶ್ರೀ ಶ್ರೀನಿವಾಸ್ ಗಾಣಿಗ, ಸಂಯೋಜಕರು ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್
14. ಶ್ರೀ ಬಿಪ್ಲವ್ ಸಿಂಗ್, ಸಂಯೋಜಕರು, ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್
15. ಶ್ರೀ ಪ್ರಭಾಕರ ನಾಯ್ಕ, ಸಂಯೋಜಕರು, ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್
16. ಶ್ರೀ ಚೆನ್ನವೀರಪ್ಪ, ಸಂಯೋಜಕರು, ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್
17. ಶ್ರೀಮತಿ ಐಡಾ ಡಿಸೋಜ, ಉಪನ್ಯಾಸಕರು, ಪ್ರಸನ್ನ ಸ್ಕೂಲ್ ಆಫ್ ಪಬ್ಲಿಕ್ ಹೆಲ್ತ್, ಮಾಹೆ
18. ಡಾ ಸತೀಶ್ ನಾಯಕ್, ಮಾಹೆ, ಮಣಿಪಾಲ
19. ಶ್ರೀ ಜನಾರ್ದನ ಮರವಂತೆ, ಮಾಜಿ ಅಧ್ಯಕ್ಷರು, ಮರವಂತೆ ಗ್ರಾಮ ಪಂಚಾಯತ್ ಮತ್ತು ಪಂಚಾಯತ್ ರಾಜ್ ಸಂಪನ್ಮೂಲ ವ್ಯಕ್ತಿ

**<u>ನಮ್ಮ ಕೃತಜ್ಞತೆಗಳು:</u>**

ಮಕ್ಕಳು, ಮಕ್ಕಳ ಮಿತ್ರ ಹಾಗೂ ಸಂಬಂಧಪಟ್ಟ ಇಲಾಖಾ ಸಿಬ್ಬಂದಿ ವರ್ಗ ಹಾಗೂ ಪ್ರತ್ಯಕ್ಷ–ಪರೋಕ್ಷವಾಗಿ ಸಹಕರಿಸಿದವರಿಗೆ

**ಲಾಂಛನದ ಮೂಲಕಲ್ಪನೆ:** ಶ್ರೀರಾಮ ಮಕ್ಕಳ ಸಂಘದ ಸದಸ್ಯರು, ಉಪ್ಪುಂದ ಗ್ರಾಮ ಪಂಚಾಯತ್, ಕುಂದಾಪುರ ತಾಲೂಕು.

**ಅನುವಾದ:** ಶ್ರೀಮತಿ ಕೃಪಾ ಎಂ. ಎಂ, ಸಂಯೋಜಕರು ಮತ್ತು ತಂಡ, ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್

ಪ್ರೊಫೆಸರ್ ಕೊಕ್ಕರ್ಣೆ ಸುರೇಂದ್ರನಾಥ ಶೆಟ್ಟಿ, ಮುಖ್ಯಸ್ಥರು, ರಾಜ್ಯಶಾಸ್ತ್ರ ವಿಭಾಗ, ಎಂ.ಜಿ.ಎಂ ಕಾಲೇಜು, ಉಡುಪಿ.

**ಡಾ. ಜಯಮಾಲ** ಎಂ.ಎ, ಪಿ.ಹೆಚ್.ಡಿ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ
ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ
ಹಾಗೂ ಕನ್ನಡ ಮತ್ತು ಸಂಸ್ಕೃತಿ ಹಾಗೂ
ಉಡುಪಿ ಜಿಲ್ಲಾ ಉಸ್ತುವಾರಿ ಸಚಿವರು

ದೂರವಾಣಿ ಕಛೇರಿ: 22255282
22033469
ಕೊಠಡಿ ಸಂಖ್ಯೆ: 252, 2ನೇ ಮಹಡಿ
ವಿಧಾನಸೌಧ, ಬೆಂಗಳೂರು-01
Email: ministerforwcd@gmail.com
28/NOV/2018



# ಸಂದೇಶ

ಒಂದು ರಾಷ್ಟ್ರದ ಪ್ರಗತಿಯನ್ನು ಅವಲೋಕಿಸಬೇಕಾದರೆ ಆ ರಾಷ್ಟ್ರದಲ್ಲಿರುವ ಮಹಿಳೆಯರ ಮತ್ತು ಮಕ್ಕಳ ಸ್ಥಿತಿಗತಿ, ಆರೋಗ್ಯ, ಶೈಕ್ಷಣಿಕ ಮಟ್ಟಗಳನ್ನು ಗಮನಿಸಿದರೆ ಸಾಕು. ಈ ಹಿನ್ನೆಲೆಯಲ್ಲಿ ನಮ್ಮ ರಾಜ್ಯ ಸರ್ಕಾರವೂ ಸಾಕಷ್ಟು ಅಭಿವೃದ್ಧಿಪರ ಕಾರ್ಯಕ್ರಮಗಳನ್ನು ಮತ್ತು ಯೋಜನೆಗಳನ್ನು ಜಾರಿಗೊಳಿಸಿದೆ. ಇವುಗಳಿಂದಾಗಿ ಮಕ್ಕಳ ಮತ್ತು ಮಹಿಳೆಯರ ಸರ್ವಾಂಗೀಣ ಪ್ರಗತಿಗೆ ಸಹಾಯಕವಾಗಿದೆ ಎಂಬುದು ಸಾಬೀತಾಗಿದೆ.

ಮಹಿಳೆಯರ ಮತ್ತು ಮಕ್ಕಳ ಅನೈತಿಕ ಸಾಗಾಣಿಕೆಯನ್ನು ತಡೆಗಟ್ಟಲು ಈಗಾಗಲೇ ನಮ್ಮ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಮೂಲಕ ಹಲವಾರು ಕಾರ್ಯಕ್ರಮಗಳನ್ನು ಮತ್ತು ಜಾಗೃತಿ ಶಿಬಿರಗಳನ್ನು ರಾಜ್ಯಾದ್ಯಂತ ನಡೆಸಲಾಗಿದೆ.

ಚಿಣ್ಣರ ಸುರಕ್ಷತೆಯ ಬಗ್ಗೆ ನಮ್ಮೆಲ್ಲರ ಆದ್ಯ ಕಾಳಜಿ ಇದೆ. ಈ ನಿಟ್ಟಿನಲ್ಲಿ ಶಿಕ್ಷಕರ ಮತ್ತು ಶಿಕ್ಷಣ ಸಂಸ್ಥೆಗಳ ಜವಾಬ್ದಾರಿಯೂ ಹೆಚ್ಚಿದೆ. ಎಲ್ಲೋ ಮಾಧ್ಯಮಗಳಲ್ಲಿ ವರದಿಯಾಗುವ ಮಕ್ಕಳ ಶೋಷಣೆ ಮತ್ತು ಲೈಂಗಿಕವಾಗಿ ಅವರನ್ನು ದುರ್ಬಳಕೆ ಮಾಡಿಕೊಳ್ಳುವ ಘಟನೆಗಳನ್ನು ಗಮನಿಸುವಾಗ ನಮ್ಮ ಮನಸ್ಸಿಗೆ ತುಂಬಾ ಘಾಸಿಯಾಗುತ್ತದೆ. ನಮ್ಮ ನಾಗರಿಕತೆಯು ಹಿಮ್ಮುಖವಾಗಿ ಚಲಿಸುತ್ತಿದೆಯೋ ಎಂಬ ಆತಂಕ ಎದುರಾಗುತ್ತದೆ. ಇವುಗಳನ್ನು ತಪ್ಪಿಸಬೇಕೆಂದರೆ ಸರ್ಕಾರ, ಸರ್ಕಾರೇತರ ಸಂಘ-ಸಂಸ್ಥೆಗಳು, ಸ್ವಯಂ ಸೇವಾ ಸಂಸ್ಥೆಗಳು ಒಟ್ಟೊಟ್ಟಿಗೆ ಸೇರಿ ಕೆಲಸ ಮಾಡುವುದು ಅಗತ್ಯ ಈ ಹಿನ್ನೆಲೆಯಲ್ಲಿ ಲೈಂಗಿಕ ಅಪರಾಧಗಳ ವಿರುದ್ಧ ಮಕ್ಕಳ ರಕ್ಷಣಾ ಕಾಯ್ದೆಯನ್ನು ಸಮರ್ಪಕವಾಗಿ ಎಲ್ಲರೂ ಪಾಲಿಸುವುದು ಅಗತ್ಯ

"ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್" (ಸಿ.ಡಬ್ಲ್ಯೂಸಿ) ಅತ್ಯಂತ ಅರ್ಥಪೂರ್ಣವಾಗಿ ಮಕ್ಕಳ ಹಿತರಕ್ಷಣೆಯ ನಿಟ್ಟಿನಲ್ಲಿ ಸೇವಾಭಾವದಿಂದ ಕೆಲಸ ಮಾಡುತ್ತಿದೆ ಎಂಬುದು ಗಮನಾರ್ಹ. ನಾನು ಉಸ್ತುವಾರಿ ವಹಿಸಿಕೊಂಡಿರುವ ಉಡುಪಿ ಜಿಲ್ಲೆಯಲ್ಲಿ ಸಿ.ಡಬ್ಲ್ಯೂಸಿ ಸಂಸ್ಥೆಯು ಅತ್ಯಂತ ಸಕ್ರಿಯವಾಗಿ ಮಕ್ಕಳ ಶ್ರೇಯೋಭಿವೃದ್ಧಿಗೆ ಉತ್ತಮ ಕೆಲಸ ನಿರ್ವಹಿಸುತ್ತಿರುವುದು ಅಭಿನಂದನಾರ್ಹ. ದೇಶದಲ್ಲೇ ಅತ್ಯಂತ ಅಪರೂಪವಾದ "ಮಕ್ಕಳ ಪಂಚಾಯತ್"ಗಳನ್ನು ಉಡುಪಿ ಜಿಲ್ಲೆಯಲ್ಲಿ ಪ್ರಾರಂಭಿಸಿ ಮಕ್ಕಳ ಹಕ್ಕು ಮತ್ತು ಯೋಗಕ್ಷೇಮದ ಕುರಿತು ಹೊಸ ಸಂಚಲನ ಮೂಡಿಸುವಲ್ಲಿ ಸಿ.ಡಬ್ಲ್ಯೂಸಿ ಯಶಸ್ವಿಯಾಗಿರುವುದು ಶ್ಲಾಘನೀಯ. ಅದೇ ರೀತಿ ಮಕ್ಕಳ ಗ್ರಾಮಸಭಾಗಳನ್ನು ಏರ್ಪಡಿಸಿದ್ದು ಹಾಗೂ ಇನ್ನೂ ಅನೇಕ ಹೊಸತನಗಳಿಂದ ಕೂಡಿದ ಹಲವು ಕಾರ್ಯಕ್ರಮಗಳನ್ನು ಪ್ರಾರಂಭಿಸಿ ಮಕ್ಕಳ ಸರ್ವಾಂಗೀಣ ಪ್ರಗತಿ ಸಾಧಿಸುವಲ್ಲಿ ಹೊಸ ಅರಿವು ಮೂಡಿಸಲು ನೆರವಾಗಿದೆ. ಇದು ಇಡೀ ದೇಶದಲ್ಲೇ ಮಾದರಿಯಾದ ಪ್ರಯತ್ನ ಎಂದು ಪ್ರಶಂಸೆಗೆ ಪಾತ್ರವಾಗಿದೆ.

ಈ ಕೆಲಸಕ್ಕೆ ಕೈಜೋಡಿಸಿರುವ ಸರ್ವರಿಗೂ ನಾನು ಅಭಿನಂದನೆ ಸಲ್ಲಿಸಬಯಸುತ್ತೇನೆ. ಅಷ್ಟೇ ಅಲ್ಲ ನಮ್ಮ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಜಿಲ್ಲಾಡಳಿತವೂ ಮಕ್ಕಳ ಹಿತರಕ್ಷಣೆಗೆ ಅಗತ್ಯ ಸಹಕಾರ ನೀಡಲು ಸದಾಸಿದ್ಧವಾಗಿದೆ ಎಂಬುದನ್ನು ಮತ್ತೊಮ್ಮೆ ತಿಳಿಸಬಯಸುತ್ತೇನೆ.

(ಡಾ. ಜಯಮಾಲ)

**ಪ್ರಿಯಾಂಕ ಮೇರಿ ಫ್ರಾನ್ಸಿಸ್,** ಭಾ.ಆ.ಸೇ.
ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ

ರಜತಾದ್ರಿ, ಮಣಿಪಾಲ, ಉಡುಪಿ– 576 104
☎: (0820) 2574925, 2574924 (ಕ)
ಫ್ಯಾಕ್ಸ್ : 2574926
ಇ–ಮೈಲ್ : deo.udupi@gmail.com, dcudu-rd-ka@nic.in
ವೆಬ್‌ಸೈಟ್ : udupi.nic.in

ಉಜಿಅ ಆಶಾ 01/2018 ದಿನಾಂಕ: 24-11-2018



# ಮುನ್ನುಡಿ

ಪ್ರತಿಯೊಬ್ಬ ಪ್ರಜೆಗೂ ತನಗೆ ಸಂಬಂಧಿಸಿದ ವಿಷಯದಲ್ಲಿ ಆಗುವ ತೀರ್ಮಾನಗಳಲ್ಲಿ ಭಾಗವಹಿಸುವ ಹಕ್ಕಿದೆ. ಈ ನಿಟ್ಟಿನಲ್ಲಿ ಮಕ್ಕಳ ಭಾಗವಹಿಸುವಿಕೆಯ ಹಕ್ಕನ್ನು ಪ್ರೋತ್ಸಾಹಿಸಿ, 2002ರಲ್ಲಿಯೇ ಪ್ರಪ್ರಥಮ ಮಕ್ಕಳ ಗ್ರಾಮಸಭೆ ನಡೆಸಿ ದೇಶಕ್ಕೇ ಮಾದರಿ ಸೃಷ್ಟಿಸಿದ ಹೆಗ್ಗಳಿಕೆ ಉಡುಪಿ ಜಿಲ್ಲೆಯದ್ದಾಗಿದೆ.

ಮಕ್ಕಳಿಗೆ ಹಕ್ಕಿದೆ; ಅದೇ ಸಮಯದಲ್ಲಿ ಹಿರಿಯರಾದ ನಮಗೆ ಜವಾಬ್ದಾರಿ ಇದೆ. ಅವರಿಗೆ ಸುಭದ್ರ, ಸುರಕ್ಷಿತ, ಆರೋಗ್ಯಕರ, ಹಿತಕರ ವಾತಾವರಣ ನಿರ್ಮಿಸುವ, ಅವರಿಗೆ ನಾಳಿನ ನಮ್ಮ ವಯಸ್ಕ ಸಮಾಜದಲ್ಲಿ ಸಕ್ರೀಯ ಸದಸ್ಯರಾಗಿ ಮುನ್ನಡೆಯಲು ಅಗತ್ಯವಿರುವ ಜ್ಞಾನ, ಕೌಶಲ್ಯ, ನಡವಳಿಕೆ ಪಡೆಯಲು ಹಕ್ಕಿದೆ. ಅದನ್ನು ಅವರು ಪಡೆಯುವಂತೆ ಮಾಡುವ ಗುರುತರ ಜವಾಬ್ದಾರಿ ನಮಗಿದ್ದರೆ, ಅದನ್ನು ಪಡೆಯುವ ಪ್ರಕ್ರಿಯೆಯಲ್ಲಿ ಭಾಗವಹಿಸುವ ಹಕ್ಕು ಮಕ್ಕಳಿಗಿದೆ. ಆದ್ದರಿಂದಲೇ ನಾವು **'ಮಕ್ಕಳು ಇಂದೇ ಪ್ರಜೆಗಳು'**ಎನ್ನುವ ನುಡಿಯನ್ನು ಅಂಗೀಕರಿಸಿದ್ದೇವೆ. ಅದಕ್ಕೆ ಬದ್ಧತೆಯನ್ನು ಘೋಷಿಸಿದ್ದೇವೆ.

ಉಡುಪಿ ಜಿಲ್ಲೆಯನ್ನು ಮಕ್ಕಳ ಸ್ನೇಹಿ ಜಿಲ್ಲೆಯಾಗಿ ರೂಪಿಸಿ, ಅವರ ಸರ್ವತೋಮುಖ ಅಭಿವೃದ್ಧಿಗೆ ಪೂರಕ ವಾತಾವರಣ, ಸಹಕಾರ, ವ್ಯವಸ್ಥೆ ಒದಗಿಸಿ, ಅವರನ್ನು ದೇಶದ ಸಕ್ರೀಯ ಪ್ರಜೆಯಾಗಿ ರೂಪಿಸುವ ಆಶಯದಿಂದ ಉಡುಪಿ ಜಿಲ್ಲಾಡಳಿತವು, ಮಕ್ಕಳ ಅಭ್ಯುದಯದತ್ತ ಕೆಲಸ ಮಾಡುತ್ತಿರುವ ಸಂಸ್ಥೆಗಳೊಂದಿಗೆ, ಮಕ್ಕಳ ಬಗ್ಗೆ ಕಾಳಜಿಪೂರ್ವಕ ಗೌರವವಿರುವ ವ್ಯಕ್ತಿಗಳೊಂದಿಗೆ ಸೇರಿ ಈ ನಿಯಮಾವಳಿಯನ್ನು ರೂಪಿಸಿದೆ. ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆ, ರಾಷ್ಟ್ರೀಯ ಮತ್ತು ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ನೀತಿಯ ಆಶಯಕ್ಕೆ, ಉದ್ದೇಶಕ್ಕೆ ಅನುಗುಣವಾಗಿ ಈ ನಿಯಮಾವಳಿಗಳನ್ನು ರೂಪಿಸಲಾಗಿದೆ. ಇಡೀ ನಿಯಮಾವಳಿಯು ಮಕ್ಕಳ ಹಕ್ಕುಗಳ ರಕ್ಷಣೆಗೆ, ಅವರ ಸಕ್ರೀಯ ಭಾಗವಹಿಸುವಿಕೆಗೆ ಪೂರಕ ವ್ಯವಸ್ಥೆಗಳನ್ನು ರೂಪಿಸುವತ್ತ ಮಾರ್ಗದರ್ಶಿ ಸೂಚಕಗಳನ್ನು ನಿರ್ದೇಶಿಸುತ್ತದೆ. ಮಕ್ಕಳಿಗೆ ಎಲ್ಲೆಡೆ ಸುರಕ್ಷಿತ, ಭಯಮುಕ್ತ, ಅಪ್ಯಾಯಮಾನ ಮತ್ತು ಹಿತಕರ ಭಾವನೆ ಉಂಟಾಗುವುದನ್ನು ಖಾತ್ರಿಪಡಿಸಿಕೊಳ್ಳಲು ವಿವಿಧ ಹಂತಗಳಲ್ಲಿ ರಚನೆಯಾಗುವ ಕಾರ್ಯಪಡೆಗಳಲ್ಲಿ ಸಮತೆಯ ತತ್ವದ ಆಧಾರದ ಮೇಲೆ ಶೇಕಡಾ ಅರವತ್ತು ಭಾಗ ಮಕ್ಕಳ ಪ್ರತಿನಿಧಿತ್ವವನ್ನು ಈ ನಿಯಮಾವಳಿ ಎತ್ತಿಹಿಡಿಯುತ್ತದೆ. ಈ ವ್ಯವಸ್ಥೆಗಳ ಅನುಷ್ಠಾನಕ್ಕೆ, ಪರಿಣಾಮಕಾರಿ ಆಚರಣೆಗಳಿಗೆ ವಿವಿಧ ಸರ್ಕಾರಗಳ, ವಲಯಗಳ, ಇಲಾಖೆಗಳ, ಸಮುದಾಯಗಳ, ಸಂಘ–ಸಂಸ್ಥೆಗಳ ಜವಾಬ್ದಾರಿಯನ್ನು ಇದು ಸ್ಪಷ್ಟಪಡಿಸುತ್ತದೆ.

ಮಕ್ಕಳ ವಿಷಯಗಳಲ್ಲಿ ಆಗುವ ತೀರ್ಮಾನಗಳನ್ನು ಅವರ ಸಕ್ರೀಯ ಪಾಲ್ಗೊಳ್ಳುವಿಕೆಯಲ್ಲಿ, ಅವರ ದೃಷ್ಟಿಕೋನದಿಂದ ನೋಡಬೇಕಾದುದು ಅತ್ಯಂತ ಮುಖ್ಯವಾದುದು. ಉಡುಪಿ ಜಿಲ್ಲೆಯಲ್ಲಿ ಮಕ್ಕಳ ಸಕ್ರೀಯ ಪಾಲ್ಗೊಳ್ಳುವಿಕೆಯೊಂದಿಗೆ, ಅವರ ಎಲ್ಲಾ ಹಕ್ಕುಗಳ ರಕ್ಷಣೆಯನ್ನು ಖಾತ್ರಿಪಡಿಸುವ ಆಶಯ ನಮ್ಮದು. ಈ ನೆಲೆಯಲ್ಲಿ, ಮಕ್ಕಳ ಪಾಲುದಾರಿಕೆಯಲ್ಲಿ, ಸಮುದಾಯದ ಸಹಭಾಗಿತ್ವದಲ್ಲಿ, ಎಲ್ಲಾ ಹಂತದ ಸರ್ಕಾರಗಳ ಹಾಗೂ ಅವುಗಳ ಇಲಾಖೆಗಳ ಒಗ್ಗೂಡುವಿಕೆಯಲ್ಲಿ ಮಕ್ಕಳು ತಮ್ಮೆಲ್ಲಾ ಹಕ್ಕುಗಳನ್ನು ಆರಾಮದಾಯಕವಾದ ವಾತಾವರಣದಲ್ಲಿ ಯಾವುದೇ ಒತ್ತಡ, ಮುಜುಗರವಿಲ್ಲದೇ ಅನುಭವಿಸುವಂತೆ ವಾತಾವರಣವನ್ನು ನಿರ್ಮಿಸುವತ್ತ ಜಿಲ್ಲಾಡಳಿತದ ಮಹತ್ತರ ಹೆಜ್ಜೆ ಇದಾಗಿದೆ.

ಮಕ್ಕಳ ಸಕ್ರೀಯತೆಯಲ್ಲಿ, ಸಮುದಾಯದ ಹಾಗೂ ಸ್ಥಳೀಯ ಸರ್ಕಾರಗಳ ಸಹಭಾಗಿತ್ವದಲ್ಲಿ, ಸಂಘ–ಸಂಸ್ಥೆಗಳ ತೊಡಗಿಸಿಕೊಳ್ಳುವಿಕೆಯಲ್ಲಿ ಮಕ್ಕಳ ಹಕ್ಕುಗಳನ್ನು ಎತ್ತಿಹಿಡಿಯುವತ್ತ ಇದೊಂದು ಜಂಟಿ ಪ್ರಯತ್ನವಾಗಿದೆ. ಮಕ್ಕಳ ಅತ್ಯುತ್ತಮ ಹಿತಾಸಕ್ತಿಯನ್ನು ಪರಿಗಣಿಸಿ, ಅವರ ಹಕ್ಕುಗಳನ್ನು ಎತ್ತಿಹಿಡಿಯುವಲ್ಲಿ ಪ್ರತಿಯೊಬ್ಬರೂ ತಮ್ಮ ಬದ್ಧತೆಯನ್ನು ತೋರಿಸುವಲ್ಲಿ ಈ ನಿಯಮಾವಳಿಯನ್ನು ಒಂದು ಮಾದರಿ ಮಾರ್ಗದರ್ಶಿಯಾಗಿ ಅನುಸರಿಸಿ,ಉಡುಪಿ ಜಿಲ್ಲೆಯನ್ನು ಮಕ್ಕಳ ಹಕ್ಕುಗಳ ಸ್ನೇಹಿ ಜಿಲ್ಲೆಯಾಗಿ ರೂಪಿಸುವ ಆಶಯದೊಂದಿಗೆ, ಎಲ್ಲರ ಸಹಭಾಗಿತ್ವವನ್ನು ಎದುರು ನೋಡುತ್ತಾ

ಪ್ರಿಯಾಂಕ ಮೇರಿ ಫ್ರಾನ್ಸಿಸ್
ಜಿಲ್ಲಾಧಿಕಾರಿ, ಉಡುಪಿ ಜಿಲ್ಲೆ



# ಸಂದೇಶ

ಮಕ್ಕಳ ಕಲ್ಯಾಣದ ಆಧಾರದ ಮೇಲೆ ಗ್ರಾಮದ, ಜಿಲ್ಲೆಯ, ರಾಜ್ಯದ ಮತ್ತು ರಾಷ್ಟ್ರದ ಭವಿಷ್ಯ ನಿರ್ಧಾರವಾಗುತ್ತದೆ. ಮಕ್ಕಳು ತಾವು ವಾಸಿಸುವಲ್ಲಿನ ಬೇರೆ ಬೇರೆ ಪರಿಸ್ಥಿತಿಯಿಂದಾಗಿ ವಯಸ್ಕರಿಗಿಂತ ಹೆಚ್ಚಾಗಿ ಬೇಗ ಪರಿಣಾಮಕ್ಕೆ ಒಳಗಾಗುತ್ತಾರೆ. ವಿಶ್ವಸಂಸ್ಥೆಯು ಮಕ್ಕಳ ಹಕ್ಕುಗಳ ಬಗೆಗಿನ ಸಮಾವೇಶದಲ್ಲಿ ಎಲ್ಲಕ್ಕಿಂತ ಪ್ರಾಮುಖ್ಯವಾದ ಗಮನವನ್ನು ನೀಡುವ ಮೂಲಕ ಮಕ್ಕಳ ಹಕ್ಕುಗಳಿಗೆ ಚ್ಯುತಿ ಬರದ ಹಾಗೆ ಮತ್ತು ಕಾಲಕಾಲಕ್ಕೆ ಮಕ್ಕಳ ಹಕ್ಕುಗಳ ರಕ್ಷಣೆಯ ಬಗ್ಗೆ ಪ್ರಭಾವ ಬೀರುವ ಕೆಲಸಗಳನ್ನು ಮಾಡುತ್ತಿದೆ. ಹದಿನೆಂಟು ವಯೋಮಾನದ ಕೆಳಗಿನ ಪ್ರತೀ ವ್ಯಕ್ತಿಯೂ ಮಗು. ಮಗುವಿನ ಪಾಲನೆ ಹಾಗೂ ಪೋಷಣೆ ತಂದೆ ತಾಯಿಯರ ಪ್ರಾಥಮಿಕ ಜವಾಬ್ದಾರಿಯಾಗಿರುತ್ತದೆ. ದೇಶವು ಮಗುವಿನ ಹಕ್ಕುಗಳನ್ನು ಗೌರವಿಸುವುದಲ್ಲದೆ ಸಂರಕ್ಷಿಸಬೇಕಾಗಿದೆ.

ಮಕ್ಕಳ ಹಕ್ಕುಗಳನ್ನು ಸಂರಕ್ಷಿಸುವ ಕಾರ್ಯವನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯೊಂದಿಗೆ ಪಂಚಾಯಿತ್‌ರಾಜ್ ಇಲಾಖೆಯು ಗ್ರಾಮ ಮಟ್ಟದಲ್ಲಿ ಮಕ್ಕಳ ಗ್ರಾಮ ಸಭೆ ಆಯೋಜಿಸುವ ಮೂಲಕ ಮಕ್ಕಳ ಹಕ್ಕುಗಳನ್ನು ಎತ್ತಿ ಹಿಡಿಯುವ ಮೂಲಕ, ಮಕ್ಕಳ ಬೇಡಿಕೆಯನ್ನು ಸ್ವೀಕರಿಸಿ ಗ್ರಾಮ ಮಟ್ಟದಲ್ಲಿ ಅದನ್ನು ಅನುಷ್ಠಾನಕ್ಕೆ ತರುತ್ತಿರುವುದು ಸ್ವಾಗತಾರ್ಹ ಬೆಳವಣಿಗೆ.

ಉಡುಪಿ ಜಿಲ್ಲೆಯಲ್ಲಿ ಮಾದರಿಯಾಗಿ **"ಮಕ್ಕಳ ಹಕ್ಕುಗಳ ಕಾರ್ಯಪಡೆಯ ನಿಯಮಾವಳಿಗಳು"** ಎಂಬ ಶೀರ್ಷಿಕೆಯ ಹೊತ್ತಿಗೆಯನ್ನು ಅನಾವರಣಗೊಳಿಸುವ ಮೂಲಕ ಮಕ್ಕಳ ಹಕ್ಕುಗಳ ರಕ್ಷಣೆಯ ಬಗ್ಗೆ ಇನ್ನಷ್ಟು ಪರಿಣಾಮಕಾರಿಯಾಗಿ ಜನಮಾನಸದಲ್ಲಿ ಮೂಡಿಬರಲಿ. ಮಕ್ಕಳ ಸ್ನೇಹಿ ಕೆಲಸವನ್ನು ಮಾಡುವ ಮೂಲಕ ಇಲಾಖಾ ಅಧಿಕಾರಿಗಳು ಮತ್ತು ಸರ್ಕಾರೇತರ ಸಂಘ ಸಂಸ್ಥೆಗಳು ಮಕ್ಕಳ ಸಾವಿಂಧಾನಿಕ ಹಕ್ಕು ಮತ್ತು ಇತರೆ ಮಕ್ಕಳ ಹಕ್ಕುಗಳ ಕಾಯ್ದೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಬೇಕಾಗಿದೆ. ಅಲ್ಲದೆ ಈ ಮೂಲಕ ಮಕ್ಕಳ ರಕ್ಷಣೆ ಮತ್ತು ಅವರಿಗೆ ನ್ಯಾಯವನ್ನು ಒದಗಿಸಿಕೊಡುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ.

ಮಕ್ಕಳ ಅಮೂಲ್ಯ ಬದುಕಿನಲ್ಲಿ ನಾವೆಲ್ಲರೂ ಪ್ರೇರಣೆಯಾಗಿ ಈ ಜಿಲ್ಲೆಯ ಮಾದರಿಯಾದ ಈ ನಿಯಮಾವಳಿಯನ್ನು ಪಾಲಿಸುವ ಮೂಲಕ ಜಿಲ್ಲೆಯಲ್ಲಿ ಮಕ್ಕಳ ಮೇಲಿನ ದೌರ್ಜನ್ಯ ತಡೆಯುವಲ್ಲಿ ಶ್ರಮಿಸೋಣ. ಈ ಪುಸ್ತಕ ಬಿಡುಗಡೆಗೆ ಶ್ರಮಿಸಿರುವ ಜಿಲ್ಲಾಡಳಿತ ಉಡುಪಿ,ಮಹಿಳಾ ಮತ್ತು ಅಭಿವೃದ್ಧಿ ಇಲಾಖೆ ಮತ್ತು ದಿ ಕನ್ಸರ್ನ್ ಫಾರ್ ವರ್ಕಿಂಗ್ ಚಿಲ್ಡ್ರನ್ ಸಂಸ್ಥೆಯವರಿಗೆ ಅಭಿನಂದನೆಯನ್ನು ಸಲ್ಲಿಸುತ್ತಾ **"ಮಕ್ಕಳ ಹಕ್ಕುಗಳ ಕಾರ್ಯಪಡೆಯ ನಿಯಮಾವಳಿ"**ಯು ರಾಜ್ಯಕ್ಕೆ ಮಾದರಿಯಾಗಲಿ.

**ಶ್ರೀಮತಿ ಹೆಚ್.ಎನ್. ಲಾವಣ್ಯ**
**ಹಿರಿಯ ಸಿವಿಲ್ ನ್ಯಾಯಾಧೀಶರು**
**ಹಾಗೂ ಹೆಚ್ಚುವರಿ ಮುಖ್ಯ ನ್ಯಾಯಿಕ ದಂಢಾಧಿಕಾರಿಗಳು**
**ಮತ್ತು ಅಧ್ಯಕ್ಷರು ಬಾಲ ನ್ಯಾಯ ಮಂಡಳಿ ಉಡುಪಿ ಜಿಲ್ಲೆ.**

**ಸಂದೇಶ**



ಮಕ್ಕಳ ಹಕ್ಕು ಮತ್ತು ಮಕ್ಕಳ ರಕ್ಷಣಾ ವಿಷಯದಲ್ಲಿ ಕಾರ್ಯೋನ್ಮುಖರಾಗುವಲ್ಲಿ ಕಂಡುಬರುವ ವಿಳಂಬ ಮತ್ತು ಮುಜುಗರವನ್ನು ತಡೆಯುವ ನಿಟ್ಟಿನಲ್ಲಿ ಮಕ್ಕಳ ರಕ್ಷಣೆ ಹಾಗೂ ಪುನರ್ವಸತಿಗೆ ಸಹಕಾರಿಯಾಗಿ ಪ್ರಕಟಿಸುತ್ತಿರುವ ಸದ್ರಿ ಪುಸ್ತಕ ಪ್ರಕಟಣೆಗೆ ಉಡುಪಿ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯ ಸದಸ್ಯರೆಲ್ಲರ ಪರವಾಗಿ ಶುಭ ಕೋರುತ್ತೇನೆ, ಸದ್ರಿ ಪುಸ್ತಕವು ಮಕ್ಕಳ ಕ್ಷೇತ್ರದಲ್ಲಿ ದುಡಿಯುವ ಹಾಗೂ ಮಕ್ಕಳ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಸಹಕರಿಸುವ ಎಲ್ಲರಿಗೂ ಉಪಕಾರಿಯಾಗಲಿ ಎಂದು ಹಾರೈಸುತ್ತೇನೆ.

ಇತೀ

ರೊನಾಲ್ಡ್. ಬಿ. ಫುರ್ಟಾಡೊ
ಅಧ್ಯಕ್ಷರು
ಉಡುಪಿ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ
ಉಡುಪಿ ಜಿಲ್ಲೆ

## ಸಂದೇಶ



***"ಮಕ್ಕಳು ಇಂದೇ ಪ್ರಜೆಗಳು"*** *ಎಂಬುದನ್ನು ಪರಿಗಣಿಸಿ ಮಕ್ಕಳ ಭಾಗವಹಿಸುವಿಕೆಯನ್ನು ಸಾಧಿಸುವಲ್ಲಿ, ಮಕ್ಕಳ ಹಕ್ಕುಗಳನ್ನು ಎತ್ತಿಹಿಡಿಯುವಲ್ಲಿ ಮಾದರಿ ಸೃಷ್ಟಿಸಿದ ಜಿಲ್ಲೆ ಎಂಬ ಹೆಗ್ಗಳಿಕೆಗೆ ಉಡುಪಿ ಜಿಲ್ಲೆ ಪಾತ್ರವಾಗಿದೆ. ಮಕ್ಕಳ ಸರ್ವಾಂಗೀಣ ಬೆಳವಣಿಗೆಗೆ ಪೂರಕವಾಗಿ ಕಾರ್ಯನಿರ್ವಹಿಸಬೇಕಾದದ್ದು ಎಲ್ಲರ ಕರ್ತವ್ಯ. ಮಕ್ಕಳು ಪ್ರಜೆಗಳಾಗಿ ಸಹಜ ವಾತಾವರಣದಲ್ಲಿ ಎಲ್ಲಾ ಹಕ್ಕುಗಳನ್ನು ಅನುಭವಿಸಲು ಅನುಕೂಲವಾಗುವಂತೆ ಸೂಕ್ತವಾದ ಸ್ನೇಹಿ ವಾತಾವರಣವನ್ನು ಕಲ್ಪಿಸುವುದು ನಮ್ಮ ಪ್ರಮುಖ ಉದ್ದೇಶ. ಈ ನಿಟ್ಟಿನಲ್ಲಿ ಮಕ್ಕಳು ತಮ್ಮ ವಿಷಯಗಳನ್ನು ಚರ್ಚಿಸಲು ಪೂರಕವಾಗಿರುವ ವ್ಯವಸ್ಥೆ ರೂಪಿಸುವುದು, ಯಾವುದೇ ಸಂದರ್ಭದಲ್ಲಿ ಅವರ ಹಕ್ಕುಗಳಿಗೆ ಚ್ಯುತಿಯಾಗದಿರುವುದನ್ನು ಖಾತ್ರಿಪಡಿಸುವುದು, ಅವರಿಗೆ ಅಗತ್ಯವಿರುವ ರಕ್ಷಣೆ ಮತ್ತು ವ್ಯವಸ್ಥೆಯನ್ನು ಗೌರವಯುತವಾಗಿ, ಕಾಳಜಿಪೂರ್ವಕವಾಗಿ ಒದಗಿಸುವ ಆಶಯದೊಂದಿಗೆ ರೂಪಿತಗೊಂಡ ಈ ನಿಯಮಾವಳಿಯು ದೇಶಕ್ಕೇ ಮಾದರಿಯ ಸೃಷ್ಟಿ ಮಾಡುವತ್ತ ಉಡುಪಿ ಜಿಲ್ಲೆಯ ಮಹತ್ತರ ಹೆಜ್ಜೆ ಇದಾಗಿದೆ. ಕರ್ನಾಟಕ ಸರ್ಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಮಕ್ಕಳ ರಕ್ಷಣಾ ನೀತಿಯನ್ವಯ ರಚಿತವಾದ ಈ ನಿಯಮಾವಳಿಯನ್ನು ಮಕ್ಕಳ ರಕ್ಷಣೆ, ಪಾಲನೆ, ಪೋಷಣೆ ಮತ್ತು ಅಭಿವೃದ್ಧಿಗಾಗಿ ಇಲಾಖೆಯು ಕಾರ್ಯಗತಗೊಳಿಸುತ್ತಿರುವ ಯೋಜನೆಗಳನ್ನು, ಕಾರ್ಯಕ್ರಮಗಳನ್ನು ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವತ್ತ ಪ್ರಮುಖ ಸಾಧನವಾಗಿ ಬಳಸಬಹುದಾಗಿದೆ.*

*ಈ ಮಕ್ಕಳ ಹಕ್ಕುಗಳ ರಕ್ಷಣಾ ನಿಯಮಾವಳಿಯು ಮಕ್ಕಳ ಕುರಿತಾದ ಎಲ್ಲಾ ರೀತಿಯ ಸಂರಕ್ಷಣೆಯ ಕರ್ತವ್ಯಗಳು, ಅದನ್ನು ನಿರ್ವಹಿಸುವವರು ಮತ್ತು ಅವರ ಜವಾಬ್ದಾರಿಗಳನ್ನು ನಿರ್ದೇಶಿಸುತ್ತದೆ. ಅಲ್ಲದೇ ಮಕ್ಕಳ ಹಕ್ಕುಗಳ ರಕ್ಷಣೆಯಲ್ಲಿ ಉಡುಪಿ ಜಿಲ್ಲಾಡಳಿತವು ಮುನ್ನಡೆಯುವ ದಿಕ್ಕನ್ನು ಸೂಚಿಸುತ್ತದೆ. ಎಲ್ಲಾ ಇಲಾಖೆಗಳು, ಸರ್ಕಾರಗಳು, ಸಮುದಾಯ ಒಂದೇ ದಿಕ್ಕಿನಲ್ಲಿ ಒಗ್ಗೂಡಿ ಮಕ್ಕಳ ಹಕ್ಕುಗಳನ್ನು ಎತ್ತಿಹಿಡಿಯಬೇಕೆಂಬ ಉದ್ದೇಶ ನಮ್ಮದು. ಈ ನಿಟ್ಟಿನಲ್ಲಿ ಉಡುಪಿ ಜಿಲ್ಲೆಯನ್ನು ಮಕ್ಕಳ ಹಕ್ಕುಗಳ ಸ್ನೇಹಿ ಜಿಲ್ಲೆಯಾಗಿ ರೂಪಿಸುವ ನಮ್ಮ ಕನಸಿಗೆ ಪೂರಕವಾಗಿ ನಾವೆಲ್ಲರೂ ಜೊತೆಯಾಗಿ ಹೆಜ್ಜೆ ಇಡಬೇಕಾಗಿದೆ. ಈ ನಿಯಮಾವಳಿಯ ಆಶಯಗಳನ್ನು ಎಲ್ಲರ ಒಗ್ಗೂಡುವಿಕೆಯಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವಲ್ಲಿ ಎಲ್ಲಾ ಇಲಾಖೆಗಳು, ವಲಯಗಳು, ಸಂಘ-ಸಂಸ್ಥೆಗಳು ಸಮನ್ವಯ ಸಾಧಿಸಬೇಕಾಗಿದೆ. ಆ ಮೂಲಕ ಸಮತೆಯ ತತ್ವದ ಆಧಾರದಲ್ಲಿ ಅತ್ಯಂತ ಬದಿಗೊತ್ತಲ್ಪಟ್ಟ ಸಮುದಾಯದ ಮಕ್ಕಳನ್ನೂ ಒಳಗೊಂಡಂತೆ ಎಲ್ಲಾ ಮಕ್ಕಳ ಸಮಗ್ರ ಅಭಿವೃದ್ಧಿಗೆ ಕೈಜೋಡಿಸಬೇಕಾಗಿದೆ.*

**ಗ್ರೇಸಿ ಎಲ್. ಗೊನ್ಸಾಲ್ವಿಸ್**
**ಉಪನಿರ್ದೇಶಕರು,**
**ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,**
**ಉಡುಪಿ ಜಿಲ್ಲೆ.**

# ಪರಿವಿಡಿ

| | | |
|---|---|---|
| I. | ನಿರ್ವಹಣಾ ತತ್ವಗಳು ಮತ್ತು ಕನಿಷ್ಟ ಮಾನದಂಡ | 1 |
| II. | ಮಕ್ಕಳ ಹಕ್ಕುಗಳ ರಕ್ಷಣಾ ನಿಯಮಾವಳಿಯ ಅನುಷ್ಠಾನಕ್ಕೆ ಸಂಬಂಧಿಸಿದ ರಚನೆ | 2 |
| III. | ಮಕ್ಕಳ ಹಕ್ಕುಗಳ ರಕ್ಷಣಾ ಕಾರ್ಯಪಡೆ | 3 |
| IV. | ಮಕ್ಕಳ ಹಕ್ಕುಗಳ ರಕ್ಷಣಾ ಕಾರ್ಯಪಡೆಯ ರಚನೆ | 4 |
| V. | ಮಕ್ಕಳ ಹಕ್ಕುಗಳ ರಕ್ಷಣಾ ಕಾರ್ಯಪಡೆಯ ಸಂಯೋಜನೆ | 5 |
| VI. | ಕಾರ್ಯಪಡೆಯಲ್ಲಿ ಮಕ್ಕಳ ಪ್ರತಿನಿಧಿತ್ವದ ಸಂಯೋಜನೆ | 6 |
| VII. | ಮಕ್ಕಳ ಹಕ್ಕುಗಳ ರಕ್ಷಣಾ ವ್ಯವಸ್ಥೆಗಳ ಕಾರ್ಯಗಳು | 7 |
| VIII. | ಕೆಲಸ ನಿರ್ವಹಿಸುವ ಪರಿಸರದಲ್ಲಿರಬೇಕಾದ ಮಕ್ಕಳ ಹಕ್ಕುಗಳ ರಕ್ಷಣಾ ನಿಯಮಾವಳಿಗಳು | 11 |
| IX. | ಸರ್ಕಾರಿ ಸಂಸ್ಥೆಗಳಿಗೆ ಹಾಗೂ ಸೇವೆಗಳಿಗೆ ಅನ್ವಯವಾಗುವ ಮಕ್ಕಳ ಹಕ್ಕುಗಳ ರಕ್ಷಣಾ ನಿಯಮಾವಳಿ | 14 |
| X. | ವಿಕಲಚೇತನ ಮಕ್ಕಳಿಗಾಗಿ ಮಕ್ಕಳ ಹಕ್ಕುಗಳ ರಕ್ಷಣಾ ನಿಯಮಾವಳಿ | 15 |
| XI. | ಶಾಲೆಗಳಿಗೆ ಹಾಗೂ ಮಕ್ಕಳ ವಸತಿ ನಿಲಯಗಳಿಗೆ ಅನ್ವಯವಾಗುವ ಮಕ್ಕಳ ಹಕ್ಕುಗಳ ರಕ್ಷಣಾ ನಿಯಮಾವಳಿ | 18 |
| XII. | ಸಾರ್ವಜನಿಕ ಸಾರಿಗೆಗೆ ಅನ್ವಯವಾಗುವ ಮಕ್ಕಳ ರಕ್ಷಣಾ ನಿಯಮಾವಳಿ | 18 |
| XIII. | ವ್ಯಾಖ್ಯಾನಗಳು | 18 |

**<u>ಅನುಬಂಧಗಳು:–</u>**

i. ಎಲ್ಲಾ ಹಂತದ ಕಾರ್ಯಪಡೆಯ ಜವಾಬ್ದಾರಿ ನಕ್ಷೆ – ಗ್ರಾಮ ಪಂಚಾಯತ್, ತಾಲೂಕು ಮತ್ತು ಜಿಲ್ಲೆ
ii. ಮಕ್ಕಳ ಸಹಾಯವಾಣಿ ನಿಯಮಾವಳಿ
iii. ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ–2016ರ ಭಾಗವಾದ ಶೈಕ್ಷಣಿಕ ಸಂಸ್ಥೆಗಳಿಗೆ ಮಕ್ಕಳ ಸುರಕ್ಷಾ ಪರಿಶೀಲನಾ ಪಟ್ಟಿ

**ಉದ್ದೇಶಗಳು**

ಪ್ರತಿ ಮಗುವಿಗೂ ಬದುಕುವ ಹಕ್ಕಿದೆ ಎಂಬ ತತ್ವದ ಆಧಾರದ ಮೇಲೆ ಮಕ್ಕಳಿಗೆ ಬದುಕುವ ಮತ್ತು ಅಭಿವೃದ್ಧಿ ಹೊಂದುವ ಹಕ್ಕಿದೆ, ಇದು ಅವರ ಜೀವನಮಟ್ಟ, ಬದುಕಿನ ಗುಣಮಟ್ಟ ಮತ್ತು ಅವರ ಗರಿಷ್ಟ ಸಾಮರ್ಥ್ಯದ ಆಧಾರದ ಮೇಲೆ ಪ್ರತಿ ಮಗುವಿನ ಅಭಿವೃದ್ಧಿ ಹೊಂದುವ ಹಕ್ಕನ್ನು ಗಣನೆಗೆ ತೆಗದುಕೊಳ್ಳುತ್ತದೆ. ಎಲ್ಲಾ ಮಕ್ಕಳಿಗೂ ಸಮಾನತೆ, ಸಾರ್ವತ್ರಿಕತೆ, ತಾರತಮ್ಯರಹಿತ ಮತ್ತು ಅವರ ಪ್ರಸ್ತುತ ಹಾಗೂ ಭವಿಷ್ಯದ ಜೀವನದ ಗತಿಗೆ ಸಂಬಂಧಿಸಿದಂತೆ ತೀರ್ಮಾನ ತೆಗೆದುಕೊಳ್ಳುವ, ಭಾಗವಹಿಸುವ ಹಕ್ಕು ಹಾಗೂ ಅವರ ವಯೋಮಾನ ಮತ್ತು ಸಾಮರ್ಥ್ಯವನ್ನು ಗಮನದಲ್ಲಿಟ್ಟುಕೊಂಡು ಅವರಿಗೆ ಸಂಬಂಧಿಸಿದ ಎಲ್ಲಾ ವಿಷಯದಲ್ಲಿ ಅವರನ್ನು ಕೇಳಿಸಿಕೊಳ್ಳುವ ಹಕ್ಕಿದೆ.

ಈ ನಿಯಮಾವಳಿಯು ಜಿಲ್ಲೆಯ ಎಲ್ಲ ಮಕ್ಕಳು – ಅವರು ಕೆಲಸ ಮಾಡುವ ಸ್ಥಳಗಳು, ಶಾಲೆಗಳು, ಸಾರ್ವಜನಿಕ ಸ್ಥಳಗಳು, ಮನೆ ಮತ್ತು ಸಾರ್ವಜನಿಕ ಸಾರಿಗೆ ಮುಂತಾದ ಸವಲತ್ತು ಬಳಸಿಕೊಳ್ಳುವ ಸಂದರ್ಭದಲ್ಲಿ ಮಗುವಿನ ಪ್ರಾಯ, ಲಿಂಗ, ಸಾಮರ್ಥ್ಯ, ಜಾತಿ, ಉಪಜಾತಿ, ಧರ್ಮ, ಮತ್ತು ಭಾಷೆಗಳನ್ನು ಪರಿಗಣಿಸದೇ ಕಾಳಜಿ ಮತ್ತು ರಕ್ಷಣೆಯನ್ನು ಪಡೆದುಕೊಳ್ಳುತ್ತಾರೆ ಎಂಬುದನ್ನು ಖಚಿತಪಡಿಸಿಕೊಳ್ಳುತ್ತದೆ.

ಮಕ್ಕಳ ಹಕ್ಕುಗಳ ರಕ್ಷಣಾ ನಿಯಮಾವಳಿಯು ದುಡಿಯುವ ಮಕ್ಕಳಿಗೆ ಮತ್ತು ಹದಿಹರೆಯದ ಮಕ್ಕಳಿಗೆ[1] ವಿಶೇಷ ಗಮನ ನೀಡಿದೆ; ಪ್ರಮುಖವಾಗಿ ಲೈಂಗಿಕ, ದೈಹಿಕ, ಮಾನಸಿಕವಾಗಿ ಶೋಷಣೆಗೆ ಒಳಗಾದ ಮಕ್ಕಳು, ಮಕ್ಕಳ ಸಾಗಣೆಯಲ್ಲಿ ಸಿಲುಕಿಕೊಂಡ ಮಕ್ಕಳು, ಅಪಹರಿಸ್ಪಟ್ಟ ಅಥವಾ ಕಾಣೆಯಾದ ಮಕ್ಕಳು; ಬದಿಗೊತ್ತಲ್ಪಟ್ಟ ಮಕ್ಕಳು ಅದರಲ್ಲೂ ಪ್ರಾಚೀನ ಬುಡಕಟ್ಟುಗಳು ಹಾಗೂ ಉಡುಪಿ ಜಿಲ್ಲೆಯಲ್ಲಿರುವ ಕೊರಗ ಸಮುದಾಯದಂತಹ ಮಕ್ಕಳ ಬಗ್ಗೆ ವಿಶೇಷ ಗಮನ.

## I. ನಿರ್ವಹಣಾ ತತ್ವಗಳು ಮತ್ತು ಕನಿಷ್ಠ ಮಾನದಂಡ

ಮಕ್ಕಳ ಹಕ್ಕುಗಳ ರಕ್ಷಣಾ ನಿಯಮಾವಳಿಯು(CRPP) ಬದಲಾಯಿಸಲು ಸಾಧ್ಯವಿಲ್ಲದ ನಿರ್ದಿಷ್ಟವಾದ ಮೂಲಭೂತ ತತ್ವಗಳಿಂದ ರಚಿತವಾಗಿದೆ ಮತ್ತು ನಿರ್ದೇಶಿಸಲ್ಪಟ್ಟಿದೆ. ಈ ಕೆಳಗೆ ವ್ಯಾಖ್ಯಾನಿಸಿರುವಂತೆ ಈ ನಿರ್ಣಾಯಕ ತತ್ವಗಳು ಮಕ್ಕಳ ಹಕ್ಕುಗಳ ರಕ್ಷಣಾ ನಿಯಮವಳಿಗಳ ಅನ್ವಯಕ್ಕೆ ಹಾಗೂ ಜಾರಿಗೆ ಮೂಲಾಧಾರವಾಗಿವೆ.

1. **ಮಕ್ಕಳ ಅತ್ಯುತ್ತಮ ಹಿತಾಸಕ್ತಿಯ ತತ್ವ:** ಮಕ್ಕಳಿಗೆ ಸಂಬಂಧಿಸಿದ ಯಾವುದೇ ನಿರ್ಧಾರವನ್ನು ತೆಗೆದುಕೊಳ್ಳುವಾಗ ಮಕ್ಕಳ ಅತ್ಯುತ್ತಮ ಹಿತಾಸಕ್ತಿಯೇ ಎಲ್ಲಾ ಭಾಗಿದಾರರ ಪ್ರಥಮ ಆದ್ಯತೆಯಾಗಿರಬೇಕು ಎಂಬುದನ್ನು ಈ ತತ್ವವು ಕಡ್ಡಾಯಗೊಳಿಸುತ್ತದೆ. ಈ ತತ್ವವು ನಿರ್ದಿಷ್ಟವಾಗಿ ಸರ್ಕಾರದ, ಅಂತೆಯೇ ಮಕ್ಕಳ ಪಾಲಕರ, ಪೋಷಕರ, ಶಿಕ್ಷಣ ನೀಡುವವರ, ಮತ್ತು ಕಾನೂನಾತ್ಮಕವಾಗಿ ಮಕ್ಕಳ ರಕ್ಷಣೆಯ ಜವಾಬ್ದಾರಿಯಿರುವ ಎಲ್ಲಾ ವ್ಯಕ್ತಿಗಳ ಹಕ್ಕು ಮತ್ತು ಕರ್ತವ್ಯಗಳನ್ನು ಒತ್ತಿಹೇಳುತ್ತದೆ.
2. **ಸಮಾನತೆ, ಸಾರ್ವತ್ರಿಕತೆ ಮತ್ತು ತಾರತಮ್ಯರಹಿತ ತತ್ವ:** ಈ ತತ್ವದ ಅಡಿಯಲ್ಲಿ ಎಲ್ಲಾ ಮಕ್ಕಳಿಗೆ ಸಮಾನ ಅವಕಾಶ ಮತ್ತು ನಡೆಸಿಕೊಳ್ಳಬೇಕು. ಒಂದು ಮಗುವಿನ ಮೇಲೆ ಲಿಂಗ, ಧರ್ಮ, ಜಾತಿ, ವರ್ಗ, ಪ್ರಾದೇಶಿಕತೆ, ಅಸಮರ್ಥತೆ ಅಥವಾ ಬೇರಾವುದೇ ದರ್ಜೆಯನ್ನೂ ಒಳಗೊಂಡಂತೆ ಯಾವುದೇ ಆಧಾರದಲ್ಲಿ ಯಾವುದೇ ರೀತಿಯ ತಾರತಮ್ಯ ಮಾಡಬಾರದು. ಈ ತತ್ವದ ಆಧಾರದ ಮೇಲೆ, ಹೆಣ್ಣು ಮಕ್ಕಳಿಗೆ ಅಥವಾ ಯಾವುದೇ ಬದಿಗೊತ್ತಲ್ಪಟ್ಟ ಅಥವಾ ನಿರ್ದಿಷ್ಟ ಅಸುರಕ್ಷಿತ ವಲಯದ ಮಕ್ಕಳಿಗೆ ಮಾಡಿದ ವಿಶೇಷ ನಿಬಂಧನೆಗಳಿಗೆ ಒಳಪಟ್ಟು, ಮಕ್ಕಳ ಹಕ್ಕುಗಳ ರಕ್ಷಣಾ ನಿಯಮಾವಳಿಯು ಸೊನ್ನೆಯಿಂದ ಹದಿನೆಂಟು ವರ್ಷ ವಯೋಮಾನದ ನಡುವಿನ ಎಲ್ಲಾ ವ್ಯಕ್ತಿಗಳಿಗೆ ಸಮಾನವಾಗಿ ಅನ್ವಯಿಸುತ್ತದೆ.
3. **ಬದುಕುಳಿಯುವ ಮತ್ತು ಅಭಿವೃದ್ಧಿಯ ಹಕ್ಕಿನ ತತ್ವ:** ಬದುಕುಳಿಯುವ ಮತ್ತು ಅಭಿವೃದ್ಧಿಗೆ ಅನ್ವಯವಾಗುವ ಎಲ್ಲಾ ಹಕ್ಕುಗಳನ್ನು ಒಟ್ಟುಗೂಡಿಸಿ, ಪ್ರತಿ ಮಗುವಿಗೂ ಬದುಕುವ ಹಕ್ಕಿದೆ ಎಂಬ ತತ್ವದ ಆಧಾರದ ಮೇಲೆ ಈ ಮಕ್ಕಳ ಹಕ್ಕುಗಳ ರಕ್ಷಣಾ ನಿಯಮಾವಳಿಯು ರೂಪಿತವಾಗಿದ್ದು, ಇದು ಅವರ ಜೀವನಮಟ್ಟ, ಬದುಕಿನ ಗುಣಮಟ್ಟ ಮತ್ತು ಅವರ ಗರಿಷ್ಟ ಸಾಮರ್ಥ್ಯದ ಆಧಾರದ ಮೇಲೆ ಪ್ರತಿ ಮಗುವಿನ ಅಭಿವೃದ್ಧಿ ಹೊಂದುವ ಹಕ್ಕನ್ನು ಗಣನೆಗೆ ತೆಗದುಕೊಳ್ಳುತ್ತದೆ.
4. **ಭಾಗವಹಿಸುವ ಹಕ್ಕಿನ ತತ್ವ:** ಸಮಾಜದ ಬಹುತೇಕ ಎಲ್ಲಾ ಹಂತಗಳಲ್ಲಿ, ಪ್ರತಿ ಮಗುವಿಗೂ ಅದು ಹೇಳುವುದನ್ನು ಆಲಿಸುವ, ಕೇಳಿಸಿಕೊಳ್ಳುವ ಮತ್ತು ಅದರ ಮೇಲೆ ಪರಿಣಾಮ ಬೀರುವ ಎಲ್ಲಾ ವಿಷಯಗಳಲ್ಲಿ ಭಾಗವಹಿಸುವ ಹಕ್ಕಿದೆ. ಈ ತತ್ವದ


[1] ಬಾಲ ಮತ್ತು ಹದಿಹರೆಯದ ಕಾರ್ಮಿಕರ (ನಿಷೇಧ ಮತ್ತು ನಿಯಂತ್ರಣ) ಕಾಯಿದೆ, 1986 ರ ವ್ಯಾಖ್ಯಾನದಂತೆ: "ಮಗು" ಎಂದರೆ 14 ವರ್ಷ ಪ್ರಾಯವನ್ನು ಇನ್ನೂ ಪೂರ್ಣಗೊಳಿಸಿರದ ಅಥವಾ ಉಚಿತ ಮತ್ತು ಕಡ್ಡಾಯ ಶಿಕ್ಷಣ ಕಾಯಿದೆ, 2009ರಲ್ಲಿ ಮಕ್ಕಳ ಹಕ್ಕುಗಳಿಗೆ ಸಂಬಂಧಿಸಿದಂತೆ ನಿಗದಿಪಡಿಸಿದ ವಯೋಮಾನದ ಒಳಗಿರುವ ಒಬ್ಬ ವ್ಯಕ್ತಿ, ಇವುಗಳಲ್ಲಿ ಯಾವುದು ಹೆಚ್ಚೋ ಅದು; "ಹದಿಹರೆಯದವರು" ಎಂದರೆ 14 ವರ್ಷ ಪೂರ್ಣಗೊಳಿಸಿದ ಆದರೆ 18 ವರ್ಷ ತುಂಬಿರದ ಒಬ್ಬ ವ್ಯಕ್ತಿ.

ಆಧಾರದ ಮೇಲೆ ಮಕ್ಕಳ ಹಕ್ಕುಗಳ ರಕ್ಷಣಾ ನಿಯಮಾವಳಿಯು ಮಕ್ಕಳ ದೃಷ್ಟಿಕೋನಗಳನ್ನು ಕೇಳಿಸಿಕೊಳ್ಳಲು ಸಾಧ್ಯವಾಗುವಂತಹ ವಾತಾವರಣ ನಿರ್ಮಾಣ ಮಾಡುವಲ್ಲಿ (ಮಗುವಿನ ವಯೋಮಾನ ಮತ್ತು ಪ್ರಬುದ್ಧತೆಗೆ ಸಂಬಂಧಿಸಿದಂತೆ) ಮತ್ತು ವಯಸ್ಕರು ಹಾಗೂ ಮಕ್ಕಳ ನಡುವೆ ಪರಸ್ಪರ ಗೌರವಯುತವಾಗಿ ಸಂವಹನ ನಡೆಸಲು ಅವಕಾಶವನ್ನು ರೂಪಿಸುವಲ್ಲಿ ರಾಜ್ಯದ ಬಾಧ್ಯತೆಯನ್ನು (ಹೊಣೆಗಾರಿಕೆ) ಸ್ಪಷ್ಟವಾಗಿ ಗುರುತಿಸುತ್ತದೆ.

5. **ಘನತೆ ಮತ್ತು ಸ್ವಯಂ–ಮೌಲ್ಯದ ತತ್ವ:** ಎಲ್ಲಾ ಮಕ್ಕಳನ್ನೂ ಘನತೆ ಮತ್ತು ಮೌಲ್ಯದ ಮಗುವಿನ ಅರ್ಥಕ್ಕೆ ಸಂಬಂಧಿಸಿದಂತೆ ಗೌರವಯುತವಾಗಿ ನಡೆಸಿಕೊಳ್ಳಬೇಕು. ಮಕ್ಕಳ ಹಕ್ಕುಗಳ ರಕ್ಷಣಾ ನಿಯಮಾವಳಿಯು ಮಕ್ಕಳೊಂದಿಗೆ ನಡೆಸುವ ಎಲ್ಲಾ ತರದ ಮೌಖಿಕ ಹಾಗೂ ಅಮೌಖಿಕ ಸಂವಹನವು ಮಕ್ಕಳ ಪರವಾಗಿ ಮತ್ತು ಮಕ್ಕಳ ಸ್ವಯಂ–ಮೌಲ್ಯಕ್ಕೆ ಗೌರವಯುತವಾಗಿ ಇರುವುದನ್ನು ಖಚಿತಪಡಿಸಿಕೊಳ್ಳುವತ್ತ ಸಜ್ಜಾಗಿದೆ.
6. **ಗೌಪ್ಯತೆಯ ತತ್ವ:** ಮಕ್ಕಳ ರಕ್ಷಣೆಯು ಮಗುವಿನ ಖಾಸಗೀತನದ ಮತ್ತು ಗೌಪ್ಯತೆಯ ಹಕ್ಕನ್ನು ಒಳಗೊಂಡಿರುತ್ತದೆ ಮತ್ತು ಯಾವುದೇ ರೀತಿಯ ಶೋಷಣೆಯ ಬಗ್ಗೆ ಹೇಳುವಾಗ, ಕಾನೂನಿನಲ್ಲಿ ನಿರ್ದೇಶಿಸಿರುವುದನ್ನು ಹೊರತುಪಡಿಸದೇ, ಖಾಸಗೀತನದ ಮತ್ತು ಗೌಪ್ಯತೆಯ ಹಕ್ಕನ್ನು ನಿಭಾಯಿಸುವುದನ್ನು ಒಳಗೊಂಡಿರುತ್ತದೆ. ಈ ತತ್ವವು ಒಳಗೊಂಡ ಮಗುವಿನ ಗುರುತಿನ ಗೌಪ್ಯತೆಯನ್ನು ಕಟ್ಟುನಿಟ್ಟಾಗಿ ರಕ್ಷಿಸುವುದನ್ನು ಆದೇಶಿಸುತ್ತದೆ. ಮಗುವಿನ ಗುರುತು ಎಂದರೆ ಅವನ ಅಥವ ಅವಳ ಹೆಸರು, ವಿಳಾಸ, ಸಂಪರ್ಕ / ದೂರವಾಣಿ ಸಂಖ್ಯೆ, ಭಾವಚಿತ್ರ, ಕುಟುಂಬದ ವಿವರಗಳು, ಶಾಲೆ, ನೆರೆಹೊರೆಯವರು ಅಥವಾ ಅದರ ಗುರುತನ್ನು ಬಹಿರಂಗಪಡಿಸಲು ಕಾರಣವಾಗಬಹುದಾದ ಇತರ ಯಾವುದೇ ವಿವರಗಳನ್ನು ಒಳಗೊಂಡಿರುತ್ತದೆ. ಮಾಧ್ಯಮವು ಒಂದು ಭಾಗಿದಾರರಾಗಿ ಈ ಗೌಪ್ಯತೆಯ ನಿರ್ಣಾಯಕ ತತ್ವ ಮತ್ತು ಮಕ್ಕಳ ರಕ್ಷಣೆಯ ಹಕ್ಕಿಗೆ ವಿಶೇಷವಾಗಿ ಬದ್ಧವಾಗಿರುತ್ತದೆ.
7. **ಸಂವಿಧಾನ ಮತ್ತು ಕಾಯಿದೆಯಲ್ಲಿರುವ ಮಕ್ಕಳ ಹಕ್ಕುಗಳ ನಿಬಂಧನೆಯ ಅನುಸರಣೆ:** ಈ ಮಕ್ಕಳ ಹಕ್ಕು ರಕ್ಷಣಾ ನಿಯಮಾವಳಿಯು ಭಾರತ ಸಂವಿಧಾನದ ಮಕ್ಕಳ ಹಕ್ಕುಗಳ ನಿಬಂಧನೆಗಳಿಗೆ, ಬಾಲ್ಯವಿವಾಹ ನಿಷೇಧ (ಕರ್ನಾಟಕ ತಿದ್ದುಪಡಿ) ಕಾಯಿದೆ 2016, ಬಾಲಕಾರ್ಮಿಕ ಮತ್ತು ಕಿಶೋರ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯಿದೆ 1986 ಮತ್ತು ಅವುಗಳ ಅನುಸೂಚಿಗಳು ಹಾಗೂ ತಿದ್ದುಪಡಿ ನಿಯಮಗಳು, 2017 ಇವುಗಳಿಗೆ ಅನುಗುಣವಾಗಿದೆ. ಅನುಸೂಚಿ [ಭಾಗ II 3.(2)(ಎ)]ರಲ್ಲಿ ಪಟ್ಟಿಮಾಡಿದ ಯಾವುದೇ ಉದ್ಯೋಗದಲ್ಲಿ ಅಥವಾ ಪ್ರಕ್ರಿಯೆಲ್ಲಿ ಮಗು ತೊಡಗಿಕೊಂಡಿಲ್ಲ ಎಂಬುದನ್ನು ಖಚಿತಪಡಿಸಿಕೊಂಡು, ಆ ಮಗುವು 'ಕುಟುಂಬಕ್ಕೆ ಸಹಾಯ' ಅಥವಾ 'ಕುಟುಂಬದ ಉದ್ಯಮಗಳಲ್ಲಿ' ಕೆಲಸ ಮಾಡುವುದಕ್ಕೆ 14 ವರ್ಷ ಪ್ರಾಯದ ಒಳಗಿನ ಮಕ್ಕಳಿಗೆ ಅನುಮತಿ ನೀಡಲಾಗಿದೆ. ಕಾಯಿದೆಯಲ್ಲಿ ವ್ಯಾಖ್ಯಾನಿಸಿರುವಂತೆ [ಭಾಗ II 3.(2)(ಬಿ)]ಮಕ್ಕಳು 'ಕಲಾವಿದ'ರಾಗಿ ಕೆಲಸ ಮಾಡಬಹುದು.

   ಅಂಗವೈಕಲ್ಯತೆ ಹೊಂದಿರುವ ವ್ಯಕ್ತಿಗಳ ಹಕ್ಕುಗಳ ಕಾಯಿದೆ, 2016ರ ಅಡಿಯಲ್ಲಿ ನಮೂದಿಸಿರುವ ಎಲ್ಲಾ ನಿಬಂಧನೆಗಳು, ಮಾರ್ಗಸೂಚಿಗಳು ಮತ್ತು ನಿಯಮಗಳೂ ಸಹ ಅಂಗವೈಕಲ್ಯತೆ ಹೊಂದಿರುವ ಮಕ್ಕಳಿಗೆ ಅನ್ವಯವಾಗುತ್ತವೆ.

## II. ಮಕ್ಕಳ ಹಕ್ಕುಗಳ ರಕ್ಷಣಾ ನಿಯಮಾವಳಿಯ ಅನುಷ್ಠಾನಕ್ಕೆ ಸಂಬಂಧಿಸಿದ ರಚನೆ



ಆಯಾ ಹಂತಗಳಿಗೆ ಸಂಬಂಧಿಸಿದಂತೆ [ಗ್ರಾಮ, ತಾಲೂಕು ಮತ್ತು ಜಿಲ್ಲೆ], ಅವರ ಹಂತದ ಭಾಗವಹಿಸುವಿಕೆ ಮತ್ತು ಅವರ ಪಾತ್ರ ಮತ್ತು ಜವಾಬ್ದಾರಿಗೆ ಅನುಗುಣವಾಗಿ ವಿವಿಧ ಗುಂಪುಗಳ ಸಂಬಂಧ ಮತ್ತು ಪ್ರತಿನಿಧಿತ್ವದಲ್ಲಿ ವ್ಯತ್ಯಾಸವಾಗುತ್ತದೆ.

## III. ಮಕ್ಕಳ ಹಕ್ಕುಗಳ ರಕ್ಷಣಾ ಕಾರ್ಯಪಡೆ

**ಕನಸು:**

ಮಕ್ಕಳು, ವಿಶೇಷವಾಗಿ ಬದಿಗೊತ್ತಲ್ಪಟ್ಟ ಸಮುದಾಯದ ಮಕ್ಕಳು, ಅವರ ನೇರ ಭಾಗವಹಿಸುವಿಕೆಯಿಂದಾಗಿ ಸ್ಥಳೀಯ ಸರ್ಕಾರಗಳ ನೀತಿ ಮತ್ತು ಕಾರ್ಯಕ್ರಮಗಳಿಗೆ ರೂಪುಕೊಡುವ ಅವರ ಹಕ್ಕನ್ನು ಅರ್ಥೈಸಿಕೊಂಡು ಚಲಾಯಿಸುತ್ತಾರೆ.


**ದಾರಿ:**

ಸ್ಥಳೀಯ ಸರ್ಕಾರದ ನೀತಿ ರೂಪಿಸುವವರ, ಅಧಿಕಾರಿಗಳ ಮತ್ತು ಪ್ರತಿನಿಧಿಗಳ ಜೊತೆ ಮಕ್ಕಳು ನೇರವಾಗಿ ಚರ್ಚಿಸುವುದನ್ನು ಮತ್ತು ಪಂಚಾಯತ್ ರಾಜ್‌ನ ಎಲ್ಲಾ ಸ್ಥರದಲ್ಲಿ ಮಕ್ಕಳ ಹಕ್ಕುಗಳ ಕಾರ್ಯಪಡೆಯ ಮೂಲಕ ಮಕ್ಕಳ ವಿಷಯದಲ್ಲಿ ಅವರೆಲ್ಲರ ಬದ್ಧತೆಯನ್ನು / ಉತ್ತರದಾಯಿತ್ವವನ್ನು ಖಚಿತಪಡಿಸಿಕೊಳ್ಳುವುದು.

**ಉದ್ದೇಶ:**

1. ಮಕ್ಕಳು ಮತ್ತು ಸ್ಥಳೀಯ ಸರ್ಕಾರದ ವಯಸ್ಕ ನೀತಿ ರೂಪಕರು, ಅಧಿಕಾರಿಗಳು ಹಾಗೂ ಪ್ರತಿನಿಧಿಗಳು ಮಕ್ಕಳಿಗೆ ಸುರಕ್ಷಿತ ಮತ್ತು ಪೂರಕ ವಾತಾವರಣದಲ್ಲಿ ಸಮಾನ ನಿಬಂಧನೆ /ಷರತ್ತುಗಳ ಮೇಲೆ ಭಾಗವಹಿಸುವಂತಹ ಮತ್ತು ಪರಸ್ಪರ ಉತ್ತರದಾಯಿಗಳಾಗಿರುವಂತಹ ವೇದಿಕೆ ಮತ್ತು ವ್ಯವಸ್ಥೆಗಳನ್ನು ಖಚಿತಪಡಿಸುವುದು
2. ಸಂವಿಧಾನದಲ್ಲಿ, ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆ (ಯುಎನ್‌ಸಿಆರ್‌ಸಿ) ಮತ್ತು ಮಕ್ಕಳ ರಾಷ್ಟ್ರೀಯ ನೀತಿಯಲ್ಲಿ ಉಲ್ಲೇಖಿಸಿರುವ ಮಕ್ಕಳ ಎಲ್ಲಾ ಹಕ್ಕುಗಳನ್ನು ರಕ್ಷಿಸುವುದು
3. ಮಕ್ಕಳ ಸಮಸ್ಯೆಗಳಿಗೆ ಮತ್ತು ವಿಷಯಗಳಿಗೆ ಮಕ್ಕಳ ಅತ್ಯುತ್ತಮ ಹಿತಾಸಕ್ತಿ, ಅವರ ಗೌರವವನ್ನು ಎತ್ತಿಹಿಡಿಯುವ ಮತ್ತು ಅವರ ಸರ್ವತೋಮುಖ ಬೆಳವಣಿಗೆಗೆ ದಾರಿಯಾಗುವ ಸಮಗ್ರ ಮತ್ತು ಸಶಕ್ತ ನೀತಿ, ಕಾರ್ಯಕ್ರಮ ಮತ್ತು ಪರಿಹಾರಗಳನ್ನು ಅಭಿವೃದ್ಧಿಗೊಳಿಸುವುದನ್ನು ಸಾಧ್ಯವಾಗಿಸುವುದು
4. ಕೈಗೊಂಡ ಎಲ್ಲಾ ಉಪಕ್ರಮಗಳು ಮಕ್ಕಳ ದೃಷ್ಟಿಕೋನದಂತಿವೆ ಹಾಗೂ ಮಕ್ಕಳ ಹಕ್ಕುಗಳ ಸ್ನೇಹಿಯಾಗಿವೆ ಎಂಬುದನ್ನು ಖಚಿತಪಡಿಸಿಕೊಳ್ಳುವುದು.
5. ಮಕ್ಕಳ ಹಿತಾಸಕ್ತಿಗಳನ್ನು ಉತ್ತಮವಾಗಿ ಪೂರೈಸಲು ನೀತಿಗಳ, ಕಾರ್ಯಕ್ರಮಗಳ ಮತ್ತು ಇಲಾಖೆಗಳ ಒಗ್ಗೂಡುವಿಕೆ ಮತ್ತು ಸಹಯೋಗದಲ್ಲಿ ಸಮ್ಮಿಶ್ರ ಮತ್ತು ಐಕ್ಯತೆಯ ಸೇವೆ, ಸೌಕರ್ಯ ಒದಗಿಸುವಂತೆ ಮಾಡುವುದು.
6. ಮಕ್ಕಳಿಗೆ ಸಂಬಂಧಿತ ಎಲ್ಲಾ ಕಾರ್ಯಕ್ರಮಗಳು ಮಕ್ಕಳಿಗೆ ಸಕಾಲಿಕವಾಗಿ ಮತ್ತು ಪರಿಣಾಮಕಾರಿಯಾಗಿ ಸಿಗುವುದನ್ನು ಖಚಿತಪಡಿಸುವುದು
7. ಶಾಲೆಯಲ್ಲಿ ನೀಡುವಂತಹ ದೈಹಿಕ ಶಿಕ್ಷೆ (corporal punishment) ಮತ್ತು ಕೌಟುಂಬಿಕ ಶೋಷಣೆಯೂ (domestic violence) ಸೇರಿದಂತೆ ಎಲ್ಲಾ ರೀತಿಯ ಮಕ್ಕಳ ಶೋಷಣೆಯನ್ನು ತಡೆಗಟ್ಟುವುದು
8. ಮಕ್ಕಳ ಶೋಷಣೆ ಮತ್ತು ಮಕ್ಕಳ ಸುರಕ್ಷೆಯ ಉಲ್ಲಂಘನೆಗಳ ದೂರುಗಳನ್ನು ಕಾನೂನಿನ ಅಡಿಯಲ್ಲಿರುವ ಸೂಕ್ತ ವೇದಿಕೆಗಳಲ್ಲಿ ಸ್ವೀಕರಿಸುವುದು, ಪ್ರತಿಕ್ರಿಯಿಸುವುದು ಮತ್ತು ವರದಿ ಮಾಡುವುದು ಹಾಗೂ ಅವುಗಳನ್ನು ಅತ್ಯಂತ ತ್ವರಿತವಾಗಿ ಪರಿಹರಿಸುವುದನ್ನು ಖಚಿತಪಡಿಸಿಕೊಳ್ಳುವುದು
9. ಕ್ಷಿಪ್ರವಾಗಿ ಸ್ಪಂದಿಸುವ ಪ್ರಕ್ರಿಯೆಗಳೊಂದಿಗೆ ಸುಲಭವಾಗಿ ಬಳಸಬಹುದಾದಂತಹ ಹಾಗೂ ಉಪಯೋಗಿಸಬಹುದಾದಂತಹ ಮಕ್ಕಳ ಸ್ನೇಹಿ ಕುಂದುಕೊರತೆ ಪರಿಹಾರ ವ್ಯವಸ್ಥೆಗಳನ್ನು ಸ್ಥಾಪಿಸುವುದು.
10. ಎಲ್ಲಾ ಭಾಗಿದಾರರಿಗೆ ಸಾಮರ್ಥ್ಯಾಭಿವೃದ್ಧಿ ಕಾರ್ಯಕ್ರಮಗಳನ್ನು ವಿನ್ಯಾಸಗೊಳಿಸುವುದು ಮತ್ತು ನಡೆಸುವುದು.
11. ಮಕ್ಕಳ ಹಕ್ಕುಗಳ ರಕ್ಷಣಾ ನಿಯಮವಳಿಯ ಎಲ್ಲಾ ಅಂಶಗಳ ಬಗ್ಗೆ ಎಲ್ಲೆಡೆ ಜಾಗೃತಿ ಮೂಡಿಸುವುದು
12. ಮಕ್ಕಳ ಹಕ್ಕುಗಳ ಸ್ನೇಹಿ ಸಂಸ್ಥೆ ಮತ್ತು ಸಂಘಗಳನ್ನು ಗುರುತಿಸುವುದು ಮತ್ತು ಅಭಿನಂದಿಸುವುದು
13. ಮಕ್ಕಳಿಗೆ ಸಂಬಂಧಿಸಿದ ನೀತಿಗಳು, ಕಾರ್ಯಕ್ರಮಗಳು, ಯೋಜನೆಗಳ ಮೇಲ್ವಿಚಾರಣೆ, ಮೌಲ್ಯಮಾಪನ ಮತ್ತು ಸುಧಾರಣೆ
14. ಮಕ್ಕಳು ಕಾಳಜಿ ತೋರುವಂತಹ ಕ್ಷೇತ್ರದಲ್ಲಿ ಅವರೊಂದಿಗೆ ಸೇರಿ ಅಧ್ಯಯನ ನಡೆಸುವುದು
15. ಉತ್ತಮ ಆಚರಣೆಗಳನ್ನು ಒಟ್ಟುಗೂಡಿಸುವುದು ಮತ್ತು ಅದರ ಬಗ್ಗೆ ವ್ಯಾಪಕ ಮಾಹಿತಿ ಹಂಚಿಕೆ

## IV. ಮಕ್ಕಳ ಹಕ್ಕುಗಳ ರಕ್ಷಣಾ ಕಾರ್ಯಪಡೆಯ ರಚನೆ




## V. ಮಕ್ಕಳ ಹಕ್ಕುಗಳ ರಕ್ಷಣಾ ಕಾರ್ಯಪಡೆಯ ಸಂಯೋಜನೆ

| | | | | | | |
|---|---|---|---|---|---|---|
| **ಗ್ರಾಮ** | **ಅಧ್ಯಕ್ಷರು**<br>• ಪಂಚಾಯತ್ ಅಧ್ಯಕ್ಷರು | | | **ಸದಸ್ಯ ಕಾರ್ಯದರ್ಶಿ**<br>• ಪಂಚಾಯತ್ ಅಭಿವೃದ್ಧಿ ಅಧಿಕಾರಿ | **ಸದಸ್ಯರು**<br>1. ಮಕ್ಕಳ ಸಂಘದ ಪ್ರತಿನಿಧಿಗಳು (ಒಟ್ಟೂ ಸದಸ್ಯರಿಗಿಂತ 60%ಕ್ಕಿಂತ ಕಡಿಮೆ ಇಲ್ಲದಂತೆ)<br>2. ಚುನಾಯಿತ ಪ್ರತಿನಿಧಿಗಳು<br>3. ಮಕ್ಕಳ ಮತ್ತು/ಅಥವಾ ಮಹಿಳಾ ಮಿತ್ರ<br>4. ಮಕ್ಕಳ ಹಕ್ಕುಗಳಿಗಾಗಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರೇತರ ಸಂಸ್ಥೆಗಳ ಪ್ರತಿನಿಧಿಗಳು | **ಇತರರು**<br>• ಗ್ರಾಮ ಪಂಚಾಯತ್ ಮಟ್ಟದಲ್ಲಿರುವ ಸಂಬಂಧಿತ ಇಲಾಖೆಗಳು [ವಿಷಯಗಳನ್ನು ಆಧರಿಸಿ] |
| **ತಾಲೂಕು** | **ಅಧ್ಯಕ್ಷರು**<br>• ತಹಶೀಲ್ದಾರ್ | **ಗೌರವಾಧ್ಯಕ್ಷರು**<br>• ತಾಲೂಕು ಪಂಚಾಯತ್ ಅಧ್ಯಕ್ಷರು | **ಕಾರ್ಯಾಧ್ಯಕ್ಷರು**<br>• ಸಹಾಯಕ ಆಯುಕ್ತರು | **ಸದಸ್ಯ ಕಾರ್ಯದರ್ಶಿ**<br>• ಕಾರ್ಯನಿರ್ವಹಣಾ ಅಧಿಕಾರಿ –ತಾಪಂ | **ಸದಸ್ಯರು**<br>1. ಮಕ್ಕಳ ಸಂಘದ ಪ್ರತಿನಿಧಿಗಳು (ಒಟ್ಟೂ ಸದಸ್ಯರಿಗಿಂತ 60%ಕ್ಕಿಂತ ಕಡಿಮೆ ಇಲ್ಲದಂತೆ)<br>2. ಚುನಾಯಿತ ಪ್ರತಿನಿಧಿಗಳು<br>3. ಮಕ್ಕಳ ಮತ್ತು/ಅಥವಾ ಮಹಿಳಾ ಮಿತ್ರರ ಪ್ರತಿನಿಧಿಗಳು<br>4. ಮಕ್ಕಳ ಹಕ್ಕುಗಳಿಗಾಗಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರೇತರ ಸಂಸ್ಥೆಗಳ ಪ್ರತಿನಿಧಿಗಳು | **ಇತರರು**<br>• ತಾಲೂಕು ಮಟ್ಟದಲ್ಲಿರುವ ಸಂಬಂಧಿತ ಇಲಾಖೆಗಳು [ವಿಷಯಗಳನ್ನು ಆಧರಿಸಿ] |
| **ಜಿಲ್ಲೆ** | **ಅಧ್ಯಕ್ಷರು**<br>ಜಿಲ್ಲಾಧಿಕಾರಿಗಳು | **ಗೌರವಾಧ್ಯಕ್ಷರು**<br>ಜಿಲ್ಲಾ ಪಂಚಾಯತ್ ಅಧ್ಯಕ್ಷರು | **ಸಹ ಅಧ್ಯಕ್ಷರು**<br>ಪೊಲೀಸ್ ವರಿಷ್ಠಾಧಿಕಾರಿಗಳು | **ಸದಸ್ಯ ಕಾರ್ಯದರ್ಶಿ**<br>ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಜಿಲ್ಲಾ ಪಂಚಾಯತ್ | **ಸದಸ್ಯರು**<br>1. ಮಕ್ಕಳ ಸಂಘದ ಪ್ರತಿನಿಧಿಗಳು (ಒಟ್ಟೂ ಸದಸ್ಯರಿಗಿಂತ 60%ಕ್ಕಿಂತ ಕಡಿಮೆ ಇಲ್ಲದಂತೆ)<br>2. ಚುನಾಯಿತ ಪ್ರತಿನಿಧಿಗಳು<br>3. ಮಕ್ಕಳ ಮತ್ತು/ಅಥವಾ ಮಹಿಳಾ ಮಿತ್ರರ ಪ್ರತಿನಿಧಿಗಳು<br>4. ಮಕ್ಕಳ ಹಕ್ಕುಗಳಿಗಾಗಿ ಕಾರ್ಯ ನಿರ್ವಹಿಸುತ್ತಿರುವ ಸರ್ಕಾರೇತರ ಸಂಸ್ಥೆಗಳ ಪ್ರತಿನಿಧಿಗಳು | **ಇತರರು**<br>• ಜಿಲ್ಲಾ ಮಟ್ಟದಲ್ಲಿರುವ ಸಂಬಂಧಿತ ಇಲಾಖೆಗಳು [ವಿಷಯಗಳನ್ನು ಆಧರಿಸಿ] |


## VI. ಕಾರ್ಯಪಡೆಯಲ್ಲಿ ಮಕ್ಕಳ ಪ್ರತಿನಿಧಿತ್ವದ ಸಂಯೋಜನೆ

1. ಮೀಸಲಾತಿಯ ಪ್ರಥಮ ಹಂತ (ಪದರ)





ಹುಡುಗಿಯರಿಗೆ ಹುಡುಗರಿಗಿಂತ ಹೆಚ್ಚಿನ ಸಮಸ್ಯೆಗಳಿರುವುದರಿಂದ ಹುಡುಗಿಯರಿಗಾಗಿ ಧನಾತ್ಮಕ ತಾರತಮ್ಯ ಮತ್ತು ಅವರು ಹೆಚ್ಚಿನ ಸಂಖ್ಯೆಯಲ್ಲಿ ಇರಬೇಕು ಇದರಿಂದಾಗಿ ಅವರ ಆತ್ಮವಿಶ್ವಾಸ ಬೆಳೆದು ಹೆಚ್ಚು ಮಾತನಾಡುತ್ತಾರೆ.

2. ಮೀಸಲಾತಿಯ ಎರಡನೇ ಹಂತ (ಪದರ)




ಈ ಹಂತದ ಮೀಸಲಾತಿಯು ಪಂಚಾಯತ್ ವ್ಯಾಪ್ತಿಯಲ್ಲಿರುವ ನಿಜವಾದ ಜಾತಿ, ಭಾಷೆ ಮತ್ತು ಧರ್ಮಗಳ ಹಂಚಿಕೆಯ ಮೇಲೆ ಆಧಾರಿಸಿರಬೇಕು

3. ಮೀಸಲಾತಿಯ ಮೂರನೇ ಹಂತ (ಪದರ)




ಈ ಹಂತವು ದುಡಿಯುವ ಮಕ್ಕಳು ಮತ್ತು ಹದಿಹರೆಯದವರು[2], ಬುಡಕಟ್ಟು ಸಮುದಾಯದ ಮಕ್ಕಳು ಮತ್ತು ಬಡತನ ರೇಖೆಗಿಂತ ಕೆಳಗಿರುವ ಮಕ್ಕಳಂತಹ ಬದಿಗೊತ್ತಲ್ಪಟ್ಟ ಮಕ್ಕಳಿಗೆ ಪೂರಕವಾದ ದೃಢವಾದ ಕ್ರಮವನ್ನು [affirmative action] ಒದಗಿಸುತ್ತದೆ. ಈ ಆಲೋಚನೆಗೆ ಕಾರಣವೆಂದರೆ ಅವರು ಹೆಚ್ಚಿನ ಸಂಖ್ಯೆಯಲ್ಲಿರಬೇಕೆಂಬುದು, ಹಾಗಾದಾಗ ಅನುಕೂಲವಿರುವ ಮಕ್ಕಳಿಂದ ಅವರ ಬಾಯಿಮುಚ್ಚಿಸುವುದಾಗಲೀ ಅವರನ್ನು ಕಡೆಗಣಿಸುವುದಾಗಲೀ ಆಗುವುದಿಲ್ಲ.

[2] ಬಾಲ ಮತ್ತು ಹದಿಹರೆಯದ ಕಾರ್ಮಿಕರ (ನಿಷೇಧ ಮತ್ತು ನಿಯಂತ್ರಣ) ಕಾಯಿದೆ, 1986 ರ ವ್ಯಾಖ್ಯಾನದಂತೆ: "ಮಗು" ಎಂದರೆ 14 ವರ್ಷ ಪ್ರಾಯವನ್ನು ಇನ್ನೂ ಪೂರ್ಣಗೊಳಿಸಿರದ ಅಥವಾ ಉಚಿತ ಮತ್ತು ಕಡ್ಡಾಯ ಶಿಕ್ಷಣ ಕಾಯಿದೆ, 2009ರಲ್ಲಿ ಮಕ್ಕಳ ಹಕ್ಕುಗಳಿಗೆ ಸಂಬಂಧಿಸಿದಂತೆ ನಿಗದಿಪಡಿಸಿದ ವಯೋಮಾನದ ಒಳಗಿರುವ ಒಬ್ಬ ವ್ಯಕ್ತಿ, ಇವುಗಳಲ್ಲಿ ಯಾವುದು ಹೆಚ್ಚೋ ಅದು; "ಹದಿಹರೆಯದವರು" ಎಂದರೆ 14 ವರ್ಷ ಪೂರ್ಣಗೊಳಿಸಿದ ಆದರೆ 18 ವರ್ಷ ತುಂಬಿರದ ಒಬ್ಬ ವ್ಯಕ್ತಿ.

## *VII.* ಮಕ್ಕಳ ಹಕ್ಕುಗಳ ರಕ್ಷಣಾ ವ್ಯವಸ್ಥೆಗಳ ಕಾರ್ಯಗಳು:

### A. ಮಕ್ಕಳ ಹಕ್ಕು ರಕ್ಷಣಾ ಕಾರ್ಯಪಡೆಯ ಕಾರ್ಯಗಳು

- **ಗ್ರಾಮ ಪಂಚಾಯತ್ ಕಾರ್ಯಪಡೆಯು:**

1. ಮೂಲ ಮಾಹಿತಿ ಸಮೀಕ್ಷೆಯನ್ನು ನಡೆಸುವುದು ಮತ್ತು ಆಯಾ ಅವಧಿಗೆ ಅದನ್ನು ಅಪ್‌ಡೇಟ್ ಮಾಡುವುದುನ್ನು ಖಚಿತಪಡಿಸಿಕೊಳ್ಳುವುದು
2. ಮಕ್ಕಳ ಹಕ್ಕುಗಳ ರಕ್ಷಣಾ ನಿಯಮವಳಿಗೆ ಅನುಗುಣವಾಗಿ ಎಲ್ಲಾ ಅಂಕಿ–ಅಂಶಗಳ ಹಾಗೂ ದಾಖಲೆಗಳನ್ನು ಸರಿಯಾಗಿ ನಿರ್ವಹಿಸುವುದನ್ನು ಖಚಿತಪಡಿಸಿಕೊಳ್ಳುವುದು
3. ಮಕ್ಕಳು ಎದುರಿಸುತ್ತಿರುವ ಸಮಸ್ಯೆಗಳನ್ನು ನಿವಾರಿಸಲು ಕಾರ್ಯತಂತ್ರ ಮತ್ತು ಕ್ರಿಯಾ ಯೋಜನೆ ರೂಪಿಸುವುದು ಮತ್ತು ಅವುಗಳನ್ನು ತಡೆಗಟ್ಟುವ ಉಪಕ್ರಮಗಳನ್ನು ಕೈಗೊಳ್ಳುವುದು.
4. ಕ್ಷಿಪ್ರ ಸ್ಪಂದನಾ ತಂಡದಿಂದ ಅವರು ಪ್ರತಿಸ್ಪಂದಿಸಿರುವ ಪ್ರಕರಣಗಳ ವರದಿ ಮತ್ತು ಮುಂದಿನ ಕ್ರಮಗಳಿಗೆ ಅವರ ಶಿಫಾರಸ್ಸುಗಳನ್ನು ಪಡೆದುಕೊಳ್ಳುವುದು
5. ಅಂತಹ ಮಕ್ಕಳ ಪೋಷಕರ ಮತ್ತು ಅವರ ಹಕ್ಕುಗಳನ್ನು ಕಾಯ್ದುಕೊಳ್ಳಲು ಅನುಗುಣವಾಗಿರುವ ಕಾಯಿದೆಗಳ ಅಭಿಪ್ರಾಯದಂತೆ ಕ್ಷಿಪ್ರ ಸ್ಪಂದನಾ ತಂಡವು ನಿರ್ವಹಿಸಿದ ಅಗತ್ಯವಿರುವ ಮಕ್ಕಳಿಗೆ ಅಲ್ಪಾವಧಿ ಮತ್ತು ದೀರ್ಘಾವಧಿ ಪುನರ್ವಸತಿ ಮುಂತಾದ ಪ್ರಕರಣಗಳ ಅನುಸರಣೆ
6. ಕಾನೂನು ಉಲ್ಲಂಘಿಸಿದವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವುದು; ಪುನಃ ಶೋಷಣೆ ಮರುಕಳಿಸದಂತೆ ಅಥವಾ ಅನುವರ್ತನೆಯಾಗದಂತೆ ಮುಂಜಾಗ್ರತಾ ಕ್ರಮ ತೆಗೆದುಕೊಳ್ಳುವುದು.
7. ಮಕ್ಕಳ ಹಕ್ಕುಗಳ ರಕ್ಷಣಾ ನಿಯಮಾವಳಿಯ ಅಲ್ಪ ಹಾಗೂ ದೀರ್ಘಾವಧಿ ಅನುಸರಣೆಗಳ ಮೇಲ್ವಿಚಾರಣೆ ನಡೆಸುವುದು.
8. ನಿಗದಿತ ಅವಧಿಗೆ ನಿಯಮಾವಳಿಗಳ ಅನುಷ್ಠಾನವನ್ನು ಪುನರ್‌ಪರಿಶೀಲಿಸುವುದು [ಆಡಿಟ್ ನಮೂನೆಯನ್ನು ಉಪಯೋಗಿಸಿ]
9. ಮಕ್ಕಳ ಹಕ್ಕುಗಳ ಸ್ನೇಹಿ ಸಂಸ್ಥೆಗಳಿಗೆ ಪ್ರಮಾಣಪತ್ರ ನೀಡಿಕೆಗಾಗಿ ಜಿಲ್ಲಾ ಪಂಚಾಯತ್‌ಗೆ ಶಿಫಾರಸ್ಸು ಮಾಡುವುದು.

- **ತಾಲೂಕು ಮಟ್ಟದ ಕಾರ್ಯಪಡೆಯು**

1. ಕ್ಷಿಪ್ರ ಸ್ಪಂದನಾ ಘಟಕವು ಸ್ಥಾಪನೆಯಾಗುವುದನ್ನು ಖಚಿತಪಡಿಸಿಕೊಳ್ಳುವುದು ಮತ್ತು ತಾಲೂಕಿನ ಅಗತ್ಯತೆಗಳಿಗೆ ಅನುಗುಣವಾಗಿ ಸೇವೆ ನೀಡುವಂತೆ ಸಹಕರಿಸುವುದು
2. ಗ್ರಾಮ ಪಂಚಾಯತ್ ನಡೆಸಿದ ಮೂಲ ಮಾಹಿತಿ ಸಮೀಕ್ಷೆಯ ಮಾಹಿತಿಗಳನ್ನು ಕ್ರೋಢೀಕರಿಸಲು ಸಹಕರಿಸುವುದು ಮತ್ತು ನಿಗದಿತ ಅವಧಿಗೆ ಅದನ್ನು ಅಪ್‌ಡೇಟ್ ಮಾಡುವುದು
3. ನಿಗದಿತ ಅವಧಿಗೆ ನಿಯಮಾವಳಿಗಳ ಅನುಷ್ಠಾನವನ್ನು ಪುನರ್‌ಪರಿಶೀಲಿಸುವುದು [ಆಡಿಟ್ ನಮೂನೆಯನ್ನು ಉಪಯೋಗಿಸಿ]
4. ಗ್ರಾಮ ಪಂಚಾಯತ್ ಕಾರ್ಯಪಡೆಗೆ ಅವರ ಸಾಮರ್ಥ್ಯಾಭಿವೃದ್ಧಿಯ ಅಗತ್ಯತೆಗಳನ್ನು ಪೂರೈಸಿಕೊಳ್ಳಲು ಸಹಕರಿಸುವುದು
5. ತಾಲೂಕು ಕಾರ್ಯಪಡೆಯ ಮಧ್ಯಸ್ಥಿಕೆಯಿಂದ ಪರಿಹರಿಸಬಹುದಾದ ಮುಖ್ಯ ಸಮಸ್ಯೆಗಳನ್ನು ಗುರುತಿಸಿ ಪರಿಹರಿಸುವುದು
6. ಉತ್ತಮ ಆಚರಣೆಗಳನ್ನು ಗುರುತಿಸುವುದು ಮತ್ತು ತಳಮಟ್ಟದಲ್ಲಿ ಅಭಿವೃದ್ಧಿಗೊಳಿಸಿದ ಮಾನದಂಡದ ಆಧಾರದ ಮೇಲೆ ಅವುಗಳನ್ನು ಅಭಿನಂದಿಸುವುದು.
7. ಮೇಲ್ವಿಚಾರಣೆ ಮತ್ತು ವರದಿ ವ್ಯವಸ್ಥೆಗಳಿಗೆ ಚೌಕಟ್ಟು ರೂಪಿಸುವುದು.
8. ಮಕ್ಕಳ ಹಕ್ಕುಗಳ ಸ್ನೇಹಿ ಸಂಸ್ಥೆಗಳಿಗೆ ಪ್ರಮಾಣಪತ್ರ ನೀಡಿಕೆಗಾಗಿ ಜಿಲ್ಲಾ ಪಂಚಾಯತ್‌ಗೆ ಶಿಫಾರಸ್ಸು ಮಾಡುವುದು.
9. ಗ್ರಾಮ ಪಂಚಾಯತ್ ಕಾರ್ಯಪಡೆಗೆ ಸಹಕಾರ ನೀಡುವುದು.
10. ತಾಲೂಕು ಮಟ್ಟದಲ್ಲಿ ಕ್ಷಿಪ್ರ ಸ್ಪಂದನಾ ಘಟಕ ಸ್ಥಾಪಿಸುವುದು.

- **ಜಿಲ್ಲಾ ಮಟ್ಟದ ಕಾರ್ಯಪಡೆಯು**

1. ಮಕ್ಕಳ ಸಹಾಯವಾಣಿಯನ್ನು ಸ್ಥಾಪಿಸುವುದು ಮತ್ತು ನಿರ್ವಹಿಸುವುದು
2. ತಾಲೂಕು ಪಂಚಾಯತ್ ನಡೆಸಿದ ಮೂಲ ಮಾಹಿತಿ ಸಮೀಕ್ಷೆಯ ಮಾಹಿತಿಗಳ ಕ್ರೋಢೀಕರಣವನ್ನು ಖಚಿತಪಡಿಸಿಕೊಳ್ಳುವುದು ಮತ್ತು ನಿಗದಿತ ಅವಧಿಗೆ ಅದನ್ನು ಅಪ್‌ಡೇಟ್ ಮಾಡುವುದು
3. ಗ್ರಾಮ ಪಂಚಾಯತ್ ಕಾರ್ಯಪಡೆಗೆ ಅವರ ಸಾಮರ್ಥ್ಯಾಭಿವೃದ್ಧಿಯ ಅಗತ್ಯತೆಗಳನ್ನು ಪೂರೈಸಿಕೊಳ್ಳಲು ಸಹಕರಿಸುವುದು
4. ನಿಗದಿತ ಅವಧಿಗೆ ನಿಯಮಾವಳಿಗಳ ಅನುಷ್ಠಾನವನ್ನು ಪುನರ್‌ಪರಿಶೀಲಿಸುವುದು [ಆಡಿಟ್ ನಮೂನೆಯನ್ನು ಉಪಯೋಗಿಸಿ]
5. ತಾಲೂಕು ಮಟ್ಟದ ಕಾರ್ಯಪಡೆಗೆ ಅವರ ಸಾಮರ್ಥ್ಯಾಭಿವೃದ್ಧಿಯ ಅಗತ್ಯತೆಗಳನ್ನು ಪೂರೈಸಿಕೊಳ್ಳಲು ಸಹಕರಿಸುವುದು
6. ತಾಲೂಕು ಕಾರ್ಯಪಡೆಯ ಮಧ್ಯಸ್ಥಿಕೆಯಿಂದ ಪರಿಹರಿಸಬಹುದಾದ ಮುಖ್ಯ ಸಮಸ್ಯೆಗಳನ್ನು ಗುರುತಿಸಿ ಪರಿಹರಿಸುವುದು
7. ಉತ್ತಮ ಆಚರಣೆಗಳನ್ನು ಗುರುತಿಸುವುದು ಮತ್ತು ತಳಮಟ್ಟದಲ್ಲಿ ಅಭಿವೃದ್ಧಿಗೊಳಿಸಿದ ಮಾನದಂಡದ ಆಧಾರದ ಮೇಲೆ ಅವುಗಳನ್ನು ಅಭಿನಂದಿಸುವುದು
8. ಮೇಲ್ವಿಚಾರಣೆ ಮತ್ತು ವರದಿ ವ್ಯವಸ್ಥೆಗಳಿಗೆ ಚೌಕಟ್ಟು ರೂಪಿಸುವುದು
9. ಮಕ್ಕಳ ಹಕ್ಕುಗಳ ಸ್ನೇಹಿ ಸಂಸ್ಥೆಗಳಿಗೆ ಪ್ರಮಾಣಪತ್ರ ನೀಡುವುದು
10. ತಾಲೂಕು ಮತ್ತು ಗ್ರಾಮ ಪಂಚಾಯತ್ ಕಾರ್ಯಪಡೆಗೆ ಸಹಕಾರ ನೀಡುವುದು
11. ತಾಲೂಕು ಮತ್ತು ಜಿಲ್ಲಾ ಮಟ್ಟದ ಕಾರ್ಯಪಡೆಯ ಸದಸ್ಯರಿಗೆ ಗುರುತಿನ ಚೀಟಿ ನೀಡುವುದು
12. ತಾಲೂಕು ಮಟ್ಟದಲ್ಲಿ ಕ್ಷಿಪ್ರ ಸ್ಪಂದನಾ ಘಟಕ ಸ್ಥಾಪಿಸುವುದಕ್ಕೆ ಸೌಕರ್ಯಕಾರಿಕೆ ಮಾಡುವುದು
13. ಕ್ಷಿಪ್ರ ಸ್ಪಂದನಾ ಘಟಕ ಸ್ಥಾಪನೆಯಾಗುವುದನ್ನು ಖಚಿತಪಡಿಸಿಕೊಳ್ಳುವುದು ಮತ್ತು ಜಿಲ್ಲಾ ಮುಖ್ಯ ಕಛೇರಿ ಮತ್ತು ಜಿಲ್ಲೆಯ ಎಲ್ಲಾ ಕಾರ್ಪೋರೇಷನ್ ಮತ್ತು ಮುನಿಸಿಪಾಲಿಟಿಗಳ ವ್ಯಾಪ್ತಿಯಲ್ಲಿ ಅದರ ಅಗತ್ಯ ಸೇವೆ ದೊರಕುವಂತೆ ಸೌಕರ್ಯಕಾರಿಕೆ ಮಾಡುವುದು

*[ಎಲ್ಲಾ ಹಂತದ ಕಾರ್ಯಪಡೆಯ ವಿವರವಾದ ಜವಾಬ್ದಾರಿ ನಕ್ಷೆಯನ್ನು ಅನುಬಂಧ–iರಲ್ಲಿ ನೀಡಲಾಗಿದೆ]*

- **ಗ್ರಾಮ, ತಾಲೂಕು ಮತ್ತು ಜಿಲ್ಲಾ ಕಾರ್ಯಪಡೆಗಳ ಸಭೆಗಳು**

| ಗ್ರಾಮ | ತಾಲೂಕು | ಜಿಲ್ಲೆ |
|---|---|---|
| 1. ಕನಿಷ್ಠ ತಿಂಗಳಿಗೊಮ್ಮೆ ಗ್ರಾಮ ಪಂಚಾಯತ್‌ನ ಸಾಮಾನ್ಯ ಸಭೆಯ ಮೊದಲು ಕಾರ್ಯಪಡೆ ಸಭೆ ನಡೆಸುವುದು.<br>2. ಅಗತ್ಯವೆನಿಸಿದಾಗ ತುರ್ತು ಸಭೆ ಕರೆಯುವುದು. | 1. ಕನಿಷ್ಠ 2 ತಿಂಗಳಿಗೊಮ್ಮೆ ಕಾರ್ಯಪಡೆ ಸಭೆ ನಡೆಸುವುದು<br>2. ಅಗತ್ಯವೆನಿಸಿದಾಗ ತುರ್ತು ಸಭೆ ಕರೆಯುವುದು. | 1. ಕನಿಷ್ಠ 2 ತಿಂಗಳಿಗೊಮ್ಮೆ ಕಾರ್ಯಪಡೆ ಸಭೆ ನಡೆಸುವುದು<br>2. ಅಗತ್ಯವೆನಿಸಿದಾಗ ತುರ್ತು ಸಭೆ ಕರೆಯುವುದು. |

**B. ಮಕ್ಕಳ ಹಕ್ಕುಗಳ ರಕ್ಷಣಾ ಕ್ಷಿಪ್ರ ಸ್ಪಂದನಾ ಘಟಕದ ಪಾತ್ರ ಮತ್ತು ಜವಾಬ್ದಾರಿಗಳು**

1. ತುರ್ತು, ಸಂಕಷ್ಟ, ಪ್ರಕೃತಿ ವಿಕೋಪ ಮತ್ತು ಸಾಮಾಜಿಕ ಗಲಭೆಗಳಂತಹ ಪರಿಸ್ಥಿತಿಯಲ್ಲಿ ಇರುವಂತಹ ಮಕ್ಕಳಿಗೆ ಪ್ರತಿಸ್ಪಂದಿಸಲು ಪ್ರತಿ ತಾಲೂಕಿನಲ್ಲಿ ತಾಲೂಕು ಮಟ್ಟದ ಕಾರ್ಯಪಡೆಯಿಂದ ಕ್ಷಿಪ್ರ ಸ್ಪಂದನಾ ತಂಡಗಳನ್ನು ರಚಿಸಬೇಕು ಮತ್ತು ಅದನ್ನು ನಿರ್ವಹಣೆ ಮತ್ತು ಮೇಲ್ವಿಚಾರಣೆ ಮಾಡತಕ್ಕದ್ದು.
2. ತಾಲೂಕು ಮಟ್ಟದ ಕಾರ್ಯಪಡೆಯು ಕ್ಷಿಪ್ರ ಸ್ಪಂದನಾ ತಂಡಕ್ಕೆ ವ್ಯಕ್ತಿಗಳನ್ನು ಪರಿಶೀಲಿಸಿ ಈ ಕೆಳಗಿನಂತೆ ನೇಮಕಾತಿ ಮಾಡಿಕೊಳ್ಳತಕ್ಕದ್ದು:
   i. ಕ್ಷಿಪ್ರ ಸ್ಪಂದನಾ ತಂಡದಲ್ಲಿ ಕನಿಷ್ಠ ಒಬ್ಬ ಸದಸ್ಯರಾದರೂ ಮಹಿಳೆ ಇರತಕ್ಕದ್ದು.
   ii. ಪ್ರಥಮ ಚಿಕಿತ್ಸೆ ಮತ್ತು ವಿಪತ್ತು ನಿರ್ವಹಣಾ ನಿಯಮಾವಳಿಗಳ ಬಗ್ಗೆ ಮೂಲ ಮಾಹಿತಿಯ ತರಬೇತಿಯನ್ನೂ ಸಹ ಪಡೆದಿರುವಂತಹ ನುರಿತ ಮಕ್ಕಳ ಆಪ್ತ ಸಮಾಲೋಚಕರು ಒಬ್ಬರಿರತಕ್ಕದ್ದು.
   iii. ಪ್ರಥಮ ಚಿಕಿತ್ಸೆ ಮತ್ತು ವಿಪತ್ತು ನಿರ್ವಹಣಾ ನಿಯಮಾವಳಿಗಳ ತರಬೇತಿ ಇರುವ ಒಬ್ಬ ದಾದಿ.

iv. ಪ್ರಥಮ ಚಿಕಿತ್ಸೆ ಮತ್ತು ವಿಪತ್ತು ನಿರ್ವಹಣಾ ನಿಯಮಾವಳಿಗಳ ಬಗ್ಗೆ ಮೂಲ ಮಾಹಿತಿಯ ತರಬೇತಿಯಿರುವ ಒಬ್ಬರು ವಾಹನ ಚಾಲಕರು

**ವಿ.ಸೂ:** ಕ್ಷಿಪ್ರ ಸ್ಪಂದನಾ ತಂಡಕ್ಕೆ ನೇಮಕಗೊಂಡ ಎಲ್ಲರೂ ಪೋಲಿಸ್ ಹಿನ್ನೆಲೆ ತಪಾಸಣೆ ಮತ್ತು ಮಾನಸಿಕ ಮೌಲ್ಯಮಾಪನಕ್ಕೆ ಒಳಗಾಗತಕ್ಕದ್ದು.

3. ಕ್ಷಿಪ್ರ ಸ್ಪಂದನಾ ತಂಡವು ಈ ಕೆಳಗಿನ ಸೌಲಭ್ಯಗಳನ್ನು ಹೊಂದಿರತಕ್ಕದ್ದು:
   i. ಪ್ರಥಮ ಚಿಕಿತ್ಸೆ ಮತ್ತು ವಿಪತ್ತು ನಿರ್ವಹಣಾ ಸಾಧನಗಳನ್ನು ಹೊಂದಿರುವ ಒಂದು ವ್ಯಾನ್ (ತುರ್ತು ಸಂದರ್ಭಗಳಲ್ಲಿ, ಒಂದು ವೇಳೆ ಕ್ಷಿಪ್ರ ಸ್ಪಂದನಾ ತಂಡದ ವಾಹನ ಇಲ್ಲದಿರುವಾಗ, ಯಾವುದೇ ಸಂಬಂಧಪಟ್ಟ ಇಲಾಖೆಯ ವಾಹನವನ್ನು ಸಮಯಕ್ಕೆ ಸರಿಯಾಗಿ ಒದಗಿಸತಕ್ಕದ್ದು)
   ii. ಗುಣಮಟ್ಟದ ಕ್ಯಾಮರಾ ಸೌಲಭ್ಯವಿರುವ ಒಂದು ಆಂಡ್ರ್ಯೋಡ್ ಮೊಬೈಲ್
   iii. ಪೋಲಿಸ್, ಅಗ್ನಿಶಾಮಕ ದಳ ಹೀಗೆ ತುರ್ತು ಸೇವೆಗೆ ಅಗತ್ಯವಿರುವ ಸಂಪರ್ಕ ಸಂಖ್ಯೆಗಳ ಪಟ್ಟಿ ಲಭ್ಯವಿರತಕ್ಕದ್ದು
   iv. ಕುಡಿಯುವ ನೀರು
4. ಜೀತ, ಮಕ್ಕಳ ಸಾಗಣೆ ಅಥವಾ ಲೈಂಗಿಕ ಕೆಲಸ ಮುಂತಾದ ತೀವ್ರತರ ಕಾನೂನು ಉಲ್ಲಂಘನೆ ಮತ್ತು ಶೋಷಣೆಗೆ ಮಕ್ಕಳು ಒಳಗಾಗಿದ್ದರೆ, ಅಂತಹ ಪರಿಸ್ಥಿತಿಯಿಂದ ಬಿಡಿಸಿ ಹೊರತಂದಿರುವುದನ್ನು ಕ್ಷಿಪ್ರ ಸ್ಪಂದನಾ ತಂಡಗಳು ಖಚಿತಪಡಿಸಿಕೊಳ್ಳತಕ್ಕದ್ದು. ಇದನ್ನು ಮಕ್ಕಳೊಂದಿಗೆ ಸಮಾಲೋಚನೆ ನಡೆಸಿ ಮತ್ತು ಸಂಪೂರ್ಣ ತನಿಖೆಯಾದ ನಂತರ ಮಾಡತಕ್ಕದ್ದು. ಇಂತಹ ಎಲ್ಲಾ ಪ್ರಯತ್ನಗಳು ಮಕ್ಕಳ ಒಳಿತಿಗಾಗಿ ಅತ್ಯಂತ ಕಾಳಜಿಪೂರ್ವಕವಾಗಿ, ಅವರಿಗೆ ಆಘಾತವಾಗದಂತೆ ನಡೆಯತಕ್ಕದ್ದು ಮತ್ತು ಕ್ಷಿಪ್ರ ಸ್ಪಂದನಾ ತಂಡವು ಮಕ್ಕಳ ಗೌರವ ಹಾಗೂ ಖಾಸಗಿತನವನ್ನು ಎಲ್ಲಾ ಸಂದರ್ಭಗಳಲ್ಲೂ ಎತ್ತಿಹಿಡಿಯತಕ್ಕದ್ದು.
5. ಒಂದು ವೇಳೆ ಅವರ ಇಡೀ ಕುಟುಂಬವೇ ಅಂತಹ ಶೋಷಣೆಗೆ ಒಳಗಾದ ಪರಿಸ್ಥಿತಿ ಕಂಡುಬಂದರೆ, ಅಂತಹ ಪರಿಸ್ಥಿತಿಗೆ ಸಂಬಂಧಪಟ್ಟ ಕಾನೂನಿನ ಪ್ರಕಾರ ಇಡೀ ಕುಟುಂಬವನ್ನೂ ಸುರಕ್ಷಾ ಸ್ಥಳಕ್ಕೆ ಸ್ಥಳಾಂತರಿಸುವುದು
6. ಕ್ಷಿಪ್ರ ಸ್ಪಂದನಾ ತಂಡವು ಕೈಗೊಂಡ ಕ್ರಮಗಳ ಬಗ್ಗೆ ಹಾಗೂ ಕಾರ್ಯಪಡೆಯು ಕೈಗೊಳ್ಳಬೇಕಾದ ಮುಂದಿನ ಕ್ರಮಗಳ ಬಗ್ಗೆ ಶಿಫಾರಸ್ಸುಗಳನ್ನು ಸಂಬಂಧಪಟ್ಟ ಕಾರ್ಯಪಡೆಗೆ ವರದಿ ಮಾಡತಕ್ಕದ್ದು. ಕ್ಷಿಪ್ರ ಸ್ಪಂದನೆ ಅಗತ್ಯವಿರುವ ಘಟನೆಯ ಆಧಾರದ ಮೇಲೆ, ಸೂಕ್ತವಾಗಿದ್ದಲ್ಲಿ, ಕ್ಷಿಪ್ರ ಸ್ಪಂದನಾ ತಂಡವು ಇಂತಹ ಘಟನೆಗಳು ಮರುಕಳಿಸದಂತೆ ತಡೆಗಟ್ಟಲು ನಿಯಮಾವಳಿಗೆ ಹೆಚ್ಚುವರಿ ಮಾರ್ಗದರ್ಶನ / ಸೂಚನೆಗಳ ಸೇರ್ಪಡೆಗೆ ಪ್ರಸ್ತಾವನೆ ನೀಡಬಹುದು.
7. ಉಚಿತ ಕರೆ ಸೌಲಭ್ಯವಿರುವ ಮಕ್ಕಳ ಹಕ್ಕುಗಳ ರಕ್ಷಣಾ ಸಹಾಯವಾಣಿ, ಕ್ಷಿಪ್ರ ಸ್ಪಂದನಾ ತಂಡದ ನೋಡಲ್ ವ್ಯಕ್ತಿಯನ್ನು ನೇರವಾಗಿ ಸಂಪರ್ಕಿಸುವಂತಹ ದೂರವಾಣಿ ಸಂಖ್ಯೆ ಮತ್ತು ಆಯಾ ಪ್ರದೇಶದ ಮಕ್ಕಳ ಮಿತ್ರರು, ಮಹಿಳಾ ಮಿತ್ರರ ಬಗ್ಗೆ ವಿವರಗಳನ್ನು ಸಾರ್ವಜನಿಕ ಸ್ಥಳಗಳಲ್ಲಿ ಪ್ರಕಟಿಸುವುದು
8. ಕ್ಷಿಪ್ರ ಸ್ಪಂದನಾ ತಂಡಕ್ಕೆ ಹಾಗೂ ಅಗ್ನಿಶಾಮಕದಳ, ಪೋಲಿಸ್, ಸ್ಥಳೀಯ ಆಸ್ಪತ್ರೆಗಳು ಮತ್ತು ಮಕ್ಕಳ ಮಿತ್ರರು, ಮಹಿಳಾ ಮಿತ್ರರು ಮುಂತಾದ ತುರ್ತು ಸೇವೆಗಳೊಂದಿಗೆ ಸಂಪರ್ಕ ವ್ಯವಸ್ಥೆ ಇರತಕ್ಕದ್ದು
9. ವಿಚಾರಣೆಗೆ ಒಳಪಡಿಸಬಹುದಾದ ಅಪರಾಧಗಳಿದ್ದರೆ, ಅಂತಹವುಗಳನ್ನು ಕ್ಷಿಪ್ರ ಸ್ಪಂದನಾ ತಂಡವು ಸೂಕ್ತ ಅಧಿಕಾರಿಗಳಿಗೆ ವರದಿ ಮಾಡುವುದು ಮತ್ತು ಪೋಲೀಸ್ ಇಲಾಖೆಯಲ್ಲಿ ಪ್ರಥಮ ಮಾಹಿತಿ ವರದಿ ದಾಖಲಾಗುವಂತೆ ನೋಡಿಕೊಳ್ಳುವುದು.

### C. ಮಕ್ಕಳ ಹಕ್ಕುಗಳ ರಕ್ಷಣಾ ಮಕ್ಕಳ ಸಹಾಯವಾಣಿಯ ಪಾತ್ರ ಮತ್ತು ಜವಾಬ್ದಾರಿಗಳು

1. 24 ಗಂಟೆ ಉಚಿತ ಕರೆ ಸೌಲಭ್ಯವಿರುವ ಮಕ್ಕಳ ಹಕ್ಕುಗಳ ರಕ್ಷಣಾ ಸಹಾಯವಾಣಿಯನ್ನು ಜಿಲ್ಲಾಡಳಿತವು ಸ್ಥಾಪಿಸತಕ್ಕದ್ದು. ಮಕ್ಕಳು ಅಥವಾ ದೊಡ್ಡವರು ಈ ಕೆಳಗಿನ ವಿಷಯಗಳಿಗೆ ಈ ಸಹಾಯವಾಣಿಯನ್ನು ಸಂಪರ್ಕಿಸಬಹುದು:
   a. ಬಿಕ್ಕಟ್ಟಿನ ಸಂದರ್ಭದಲ್ಲಿ ತುರ್ತು ಸಹಕಾರ ಪಡೆದುಕೊಳ್ಳಲು
   b. ಮಕ್ಕಳಿಗೆ ಅಗತ್ಯವಿರುವ ಮಾಹಿತಿಯನ್ನು ಪಡೆದುಕೊಳ್ಳಲು – ಮಕ್ಕಳ ಹಕ್ಕುಗಳ ಒಡಂಬಡಿಕೆ, ರಾಷ್ಟ್ರೀಯ ಮಕ್ಕಳ ನೀತಿ, ರಾಜ್ಯ ಮಕ್ಕಳ ರಕ್ಷಣಾ ನೀತಿ, ಪೋಕ್ಸೋ ಕಾಯಿದೆ – 2012, ಭಾರತೀಯ ದಂಡ ಸಂಹಿತೆ ಮತ್ತು ಕಾರ್ಮಿಕ ಕಾಯಿದೆಗಳು, ಜೀವವಿಮೆ, ಅಪಘಾತ ವಿಮೆ, ಶೈಕ್ಷಣಿಕ ವಿದ್ಯಾರ್ಥಿವೇತನಗಳು ಮುಂತಾದ ರಾಜ್ಯ ಸಾಂಸ್ಥಿಕ ಬೆಂಬಲ ವ್ಯವಸ್ಥೆಗಳು ಇತ್ಯಾದಿ.
   c. ಮಕ್ಕಳ ಹಕ್ಕುಗಳ ಉಲ್ಲಂಘನೆಗೆ ಸಂಬಂಧಿಸಿದ ದೂರುಗಳನ್ನು ನೋಂದಾಯಿಸುವುದು
   d. ಸಮಾಲೋಚನಾ ಸಹಕಾರ ಪಡೆಯುವುದು
   e. ತಜ್ಞರ ಬಗ್ಗೆ ಮಾಹಿತಿ ಪಡೆಯುವುದು
2. ಜಿಲ್ಲಾಡಳಿತವು ಈ ಮಕ್ಕಳ ಸಹಾಯವಾಣಿಯ ಬಗ್ಗೆ ಎಲ್ಲಾ ಸಾರ್ವಜನಿಕ ಸ್ಥಳಗಳಲ್ಲಿ ವ್ಯಾಪಕ ಪ್ರಚಾರ ನಡೆಸತಕ್ಕದ್ದು

*ಈ ಸಹಾಯವಾಣಿಗೆ ಮಾರ್ಗದರ್ಶಿಯಾಗಿ 1997ರಲ್ಲಿ ದುಡಿಯುವ ಮಕ್ಕಳನ್ನೂ ಒಳಗೊಂಡಂತೆ, ಮಕ್ಕಳೊಂದಿಗೆ ಸೇರಿ ಮಕ್ಕಳ ಸಹಾಯವಾಣಿಯ ನಿಯಮಾವಳಿಗಳನ್ನು ಇದರೊಂದಿಗೆ ಲಗತ್ತಿಸಲಾಗಿದೆ. ಇಂತಹುದೇ ರೀತಿಯ ಕೈಪಿಡಿಯನ್ನು ಅಗತ್ಯ ಬದಲಾವಣೆಗಳೊಂದಿಗೆ **ಉಡುಪಿ ಜಿಲ್ಲೆಯ ಮಕ್ಕಳ ಸಹಾಯವಾಣಿ ಮಾರ್ಗದರ್ಶಿ**ಯಾಗಿ ಅಭಿವೃದ್ಧಿಗೊಳಿಸಬಹುದು.*

***ಅನುಬಂಧ – ii.***

**D. ಕಾರ್ಮಿಕ ಇಲಾಖೆಯ ಪಾತ್ರಗಳು ಮತ್ತು ಜವಾಬ್ದಾರಿಗಳು**

1. ಮಕ್ಕಳು/ಮಕ್ಕಳ ಸಂಘಗಳ ಸಹಯೋಗದಲ್ಲಿ ಮತ್ತು ಅವರ ಅರ್ಥಪೂರ್ಣ ಭಾಗವಹಿಸುವಿಕೆಯಲ್ಲಿ ಕಾರ್ಮಿಕ ಇಲಾಖೆಯು ಪ್ರತಿಯೊಂದು ಕೆಲಸ ಮಾಡುವ ಸ್ಥಳಗಳಲ್ಲಿ ಈ ನಿಯಮಾವಳಿಯ ಅನುಸರಣೆಗಳನ್ನು ನಿರ್ವಹಿಸತಕ್ಕದ್ದು.
2. ಅನನುಪಾಲನೆ/ಅನನುವರ್ತನೆಗೆ ಸಂಬಂಧಿಸಿದಂತೆ, ಅನನುವರ್ತನೆಯ ಗುಣ, ತೀಕ್ಷ್ಣತೆ ಮತ್ತು ಪರಿಣಾಮಗಳನ್ನು ಮಕ್ಕಳು / ಮಕ್ಕಳ ಸಂಘಗಳೊಂದಿಗೆ ಸಮಾಲೋಚಿಸಿ ಮೌಲ್ಯಮಾಪನ ನಡೆಸುವುದು
3. ಮಿತಗೊಳಿಸಲು/ಪರಿಹರಿಸಲು ಸಾಧ್ಯವಿರುವ ಅನುಪಾಲನೆ/ಅನುವರ್ತನೆಯ ಸಂದರ್ಭದಲ್ಲಿ, ಅನುಪಾಲನೆ/ಅನುವರ್ತನೆಯ ಗುಣ, ಮಕ್ಕಳ ಹಿತಾಸಕ್ತಿಯ ಮೇಲೆ ಅದರ ಪರಿಣಾಮಗಳು ಮತ್ತು ಕಾನೂನಿಗೆ ಸಂಬಂಧಿಸಿದಂತೆ ಪರಿಣಾಮಗಳನ್ನು ಮಕ್ಕಳು / ಮಕ್ಕಳ ಸಂಘಗಳೊಂದಿಗೆ ಒಟ್ಟಿಗೆ ಸೇರಿ ಚರ್ಚಿಸಬೇಕು
4. ಅನುಸರಣೆಯ ಅಗತ್ಯತೆಗಳನ್ನು ಉದ್ಯೋಗದಾತರು ಪೂರೈಸಲು ಬದ್ಧರಾದರೆ, ಅಂತಹ ಅನುಸರಣೆಗಳಿಗಾಗಿ ಸಂಬಂಧಪಟ್ಟ ಮಕ್ಕಳು / ಮಕ್ಕಳ ಸಂಘಗಳ ಉಪಸ್ಥಿತಿಯಲ್ಲಿ ಉದ್ಯೋಗದಾತರು ಒಂದು ಅಂತಿಮ ದಿನಾಂಕವನ್ನು ನಿಗಧಿಗೊಳಿಸಿ ಒಪ್ಪಂದ ಮಾಡಿಕೊಳ್ಳಬೇಕು
5. ನಿಗಧಿಗೊಳಿಸಿದ ಅಂತಿಮ ದಿನಾಂಕವನ್ನು ತಲುಪಿದಾಗ, ಉದ್ಯೋಗ ನೀಡಿದ ಸಂಸ್ಥೆ/ವ್ಯವಸ್ಥೆಯನ್ನು ಪರಿಶೀಲಿಸಲಾಗುವುದು ಮತ್ತು ಕಾರ್ಮಿಕ ಅಧಿಕಾರಿ ಹಾಗೂ ಆ ಮಕ್ಕಳು/ಮಕ್ಕಳ ಸಂಘಗಳು ಅನುಸರಣೆಯ ಪರಿಸ್ಥಿತಿಯು ಸಮಾಧಾನಕರವಾಗಿದೆ ಎಂದು ಒಪ್ಪಿದರೆ, ಆ ವಿಷಯವನ್ನು ಇತ್ಯರ್ಥಪಡಿಸಲಾಗಿದೆ ಎಂದು ಪರಿಗಣಿಸಲಾಗುತ್ತದೆ.
6. ದೀರ್ಘಾವಧಿಯ ಅನುಸರಣೆಗಳನ್ನು ಮಕ್ಕಳು/ಮಕ್ಕಳ ಸಂಘಗಳು ಮತ್ತು ಕಾರ್ಯಪಡೆಗಳು ಮೇಲ್ವಿಚಾರಣೆ ನಡೆಸಬೇಕು.
7. ಬಾಲ ನ್ಯಾಯ (ಮಕ್ಕಳ ರಕ್ಷಣೆ ಮತ್ತು ಸಂರಕ್ಷಣೆ) ಕಾಯಿದೆ 2015ರ ಅಡಿಯಲ್ಲಿ ಕಾನೂನಾತ್ಮಕ ಅಥವಾ ವಿವಾದಾತ್ಮಕ ಕಾನೂನು ಕ್ರಮಗಳಿಗೆ ಮತ್ತು ಪ್ರಕ್ರಿಯೆಗಳಿಗೆ ಗ್ರಾಮ/ನಗರ ಪಂಚಾಯತ್ ಕಾರ್ಯಪಡೆಯಿಂದ ಮಕ್ಕಳಿಗೆ ಕಾನೂನು ಪ್ರಾತಿನಿಧ್ಯ ಒದಗಿಸಿಕೊಡಬೇಕು.
8. ತೀವ್ರತರ ಶೋಷಣೆ ಮತ್ತು ಹಿಂಸಾತ್ಮಕ ಪರಿಸ್ಥಿತಿಯಿಂದ ಹೊರತಂದ ದುಡಿಯುವ ಮಕ್ಕಳು ಮತ್ತು ಹದಿಹರೆಯದವರಿಗೆ[3] ಆ ಮಕ್ಕಳ ಮತ್ತು ಅವರ ಪೋಷಕರೊಂದಿಗೆ ಸಮಾಲೋಚಿಸಿ ಹಾಗೂ ಕಾನೂನು ರೀತ್ಯಾ ಸುರಕ್ಷಿತ ಕೆಲಸ, ಅಲ್ಪಾವಧಿ ಮತ್ತು ದೀರ್ಘಾವಧಿಯ ಪುನರ್‌ವಸತಿ ಒದಗಿಸುವುದನ್ನು ಕಾರ್ಯಪಡೆಯ ಸಹಯೋಗದೊಂದಿಗೆ, ಕಾರ್ಮಿಕ ಇಲಾಖೆಯು ಖಚಿತಪಡಿಸಬೇಕು.
9. ಅನನುಸರಣೆಯು ತೀವ್ರ ಶಿಕ್ಷಾರ್ಹ ಕಾನೂನು ಉಲ್ಲಂಘನೆಯಾಗಿದ್ದ ಸಂದರ್ಭದಲ್ಲಿ, ಉದ್ಯೋಗದಾತರ ಮೇಲೆ ತಕ್ಷಣವೇ ಸೂಕ್ತ ಕಾನೂನು ಕ್ರಮ ಕೈಗೊಳ್ಳತಕ್ಕದ್ದು.
10. ಕೆಲಸ ಮಾಡುವ ಸ್ಥಳಗಳಲ್ಲಿ ಮಕ್ಕಳ ಹಕ್ಕುಗಳ ರಕ್ಷಣಾ ಸಹಾಯವಾಣಿಯ ಕುರಿತಾದ ಮಾಹಿತಿಗಳನ್ನು ಪ್ರಮುಖವಾಗಿ, ಸ್ಪಷ್ಟವಾಗಿ ಪ್ರಕಟಿಸಲಾಗಿದೆ ಎಂಬುದನ್ನು ಕಾರ್ಮಿಕ ಇಲಾಖೆಯು ಖಚಿತಪಡಿಸಿಕೊಳ್ಳಬೇಕು.
11. 14 ವರ್ಷ ಮೇಲ್ಪಟ್ಟ ಮಕ್ಕಳಿಗೆ ಸಂಬಂಧಿಸಿದ ನಿಯಮಗಳು ಮತ್ತು ಮಾರ್ಗದರ್ಶಿಗಳ, ಮಕ್ಕಳ ಹಕ್ಕುಗಳ ರಕ್ಷಣಾ ಸಹಾಯವಾಣಿ, ಮಕ್ಕಳ ಹಕ್ಕುಗಳ ರಕ್ಷಣಾ ಕಾರ್ಯಪಡೆ, ಆಂಬ್ಯುಲೆನ್ಸ್, ಅಗ್ನಿಶಾಮಕದಳ, ಪೋಲಿಸ್, ಸಂಬಂಧಪಟ್ಟ ಸರ್ಕಾರೇತರ ಸಂಸ್ಥೆಗಳ, ವೃತ್ತಿ ತರಬೇತಿ ಕೇಂದ್ರಗಳ, ಉದ್ಯೋಗ ನೋಂದಣಿ ಕೇಂದ್ರಗಳ ಮತ್ತು ಮಕ್ಕಳ ಕಲ್ಯಾಣ ಸಮಿತಿಗಳ ವಿವರಗಳನ್ನು ರೈಲಿನ ಬೋಗಿಗಳಲ್ಲಿ, ರೈಲ್ವೆ ನಿಲ್ದಾಣಗಳಲ್ಲಿ, ಪ್ರಮುಖ ಬಸ್ ನಿಲ್ದಾಣಗಳಲ್ಲಿ, ಟೋಲ್‌ಗೇಟ್‌ಗಳಲ್ಲಿ, ಬಂದರು ಹಾಗೂ ಬಂದರು ಪ್ರಾಧಿಕಾರಗಳಲ್ಲಿ, ವಿಮಾನನಿಲ್ದಾಣಗಳಲ್ಲಿ ಮತ್ತು ಮಾರಾಟದ ಮಳಿಗೆಗಳು, ಮಾರುಕಟ್ಟೆಗಳು, ಸಿನಿಮಾ ಹಾಲ್‌ಗಳು, ಹೋಟೇಲ್‌ಗಳು, ಆಸ್ಪತ್ರೆಗಳು, ಪಂಚಾಯತ್ ಕಛೇರಿಗಳು, ನಿವಾಸಿ ಕಲ್ಯಾಣ ಸಂಘದ ಕಛೇರಿಗಳು, ಕೈಗಾರಿಕಾ ಪ್ರದೇಶಗಳು, ಶಾಲೆಗಳು, ಶಿಕ್ಷಣ ಸಂಸ್ಥೆಗಳು, ನ್ಯಾಯಾಲಯದ ಸಂಕೀರ್ಣಗಳನ್ನು ಒಳಗೊಂಡಂತೆ ಇತರ ಸಾರ್ವಜನಿಕ ಸ್ಥಳಗಳಲ್ಲಿ ಮತ್ತು ಕಾಯಿದೆಯಡಿಯಲ್ಲಿ ಅಧಿಕೃತವಾಗಿ ಹೇಳಿರುವ ಎಲ್ಲಾ ಕಛೇರಿಗಳಲ್ಲಿ ಪ್ರದರ್ಶಿಸಿರುವುದನ್ನು ಕಾರ್ಮಿಕ ಇಲಾಖೆಯು ಖಚಿತಪಡಿಸಿಕೊಳ್ಳಬೇಕು.

---

[3] ಬಾಲ ಮತ್ತು ಹದಿಹರೆಯದ ಕಾರ್ಮಿಕರ (ನಿಷೇಧ ಮತ್ತು ನಿಯಂತ್ರಣ) ಕಾಯಿದೆ, 1986 ರ ವ್ಯಾಖ್ಯಾನದಂತೆ: "ಮಗು" ಎಂದರೆ 14 ವರ್ಷ ಪ್ರಾಯವನ್ನು ಇನ್ನೂ ಪೂರ್ಣಗೊಳಿಸಿರದ ಅಥವಾ ಉಚಿತ ಮತ್ತು ಕಡ್ಡಾಯ ಶಿಕ್ಷಣ ಕಾಯಿದೆ, 2009ರಲ್ಲಿ ಮಕ್ಕಳ ಹಕ್ಕುಗಳಿಗೆ ಸಂಬಂಧಿಸಿದಂತೆ ನಿಗದಿಪಡಿಸಿದ ವಯೋಮಾನದ ಒಳಗಿರುವ ಒಬ್ಬ ವ್ಯಕ್ತಿ, ಇವುಗಳಲ್ಲಿ ಯಾವುದು ಹೆಚ್ಚೋ ಅದು; "ಹದಿಹರೆಯದವರು" ಎಂದರೆ 14 ವರ್ಷ ಪೂರ್ಣಗೊಳಿಸಿದ ಆದರೆ 18 ವರ್ಷ ತುಂಬಿರದ ಒಬ್ಬ ವ್ಯಕ್ತಿ.

## E. ಜಿಲ್ಲಾಡಳಿತದ ಪಾತ್ರಗಳು ಮತ್ತು ಜವಾಬ್ದಾರಿಗಳು

1. ಜಿಲ್ಲಾಡಳಿತವು ಉಡುಪಿ ಜಿಲ್ಲೆಯ ಎಲ್ಲಾ ಪಂಚಾಯತ್‌ಗಳಲ್ಲು ಕಾರ್ಯಪಡೆಯನ್ನು ಸ್ಥಾಪಿಸಬೇಕು; ಇದು ತಾಲೂಕು ಮಟ್ಟದ ಕಾರ್ಯಪಡೆಯನ್ನು ಉಡುಪಿ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಮತ್ತು ಒಂದು ಜಿಲ್ಲಾ ಮಟ್ಟದ ಕಾರ್ಯಪಡೆಯನ್ನು ಸ್ಥಾಪಿಸಬೇಕು
2. ಈ ಎಲ್ಲಾ ಕಾರ್ಯಪಡೆಗಳನ್ನು ಸಂಯೋಜಿಸಲು ಜಿಲ್ಲಾಡಳಿತವು ಪ್ರತಿ ತಾಲೂಕು ಮಟ್ಟದಲ್ಲಿ ಒಬ್ಬ ನೋಡಲ್ ಅಧಿಕಾರಿಯನ್ನು ಮತ್ತು ಜಿಲ್ಲಾ ಮಟ್ಟದಲ್ಲಿ ಒಬ್ಬ ಮುಖ್ಯ ನೋಡಲ್ ಅಧಿಕಾರಿಯನ್ನು ನೇಮಿಸಬೇಕು.
3. ಜಿಲ್ಲಾಡಳಿತವು 24 ಗಂಟೆಗಳ ಉಚಿತ ಕರೆ ಸೌಲಭ್ಯ ಹೊಂದಿರುವ ಮಕ್ಕಳ ಹಕ್ಕುಗಳ ರಕ್ಷಣಾ ಸಹಾಯವಾಣಿಯನ್ನು ಸ್ಥಾಪಿಸಬೇಕು. ವಿವಿಧ ವಾಹಿನಿಗಳ ಮೂಲಕ ಈ ಸಹಾಯವಾಣಿಯ ಸೇವೆಗಳ ಕುರಿತಾಗಿ ವ್ಯಾಪಕವಾಗಿ ಪ್ರಚಾರ ಮಾಡತಕ್ಕದ್ದು.

## VIII. ಕೆಲಸ ನಿರ್ವಹಿಸುವ ಪರಿಸರದಲ್ಲಿರಬೇಕಾದ ಮಕ್ಕಳ ಹಕ್ಕುಗಳ ರಕ್ಷಣಾ ನಿಯಮಾವಳಿಗಳು

*ಬದುಕುಳಿಯುವಿಕೆಯು ಪ್ರತಿಯೊಂದು ಮಗುವಿನ ಹಕ್ಕು ಮತ್ತು ಜೀವ ಬೆದರಿಕೆ ಇರುವ ಪರಿಸ್ಥಿತಿಯಿಂದ ಮಕ್ಕಳನ್ನು ರಕ್ಷಿಸತಕ್ಕದ್ದು. ಮಕ್ಕಳಿಗೆ ನ್ಯಾಯೋಚಿತ ಜೀವನಶೈಲಿಯನ್ನು ಶಕ್ತಗೊಳಿಸುವ ಜೀವನೋಪಾಯದ ಹಕ್ಕಿದೆ ಎಂಬುದನ್ನು ಬದುಕುವ ಹಕ್ಕು ಸೂಚ್ಯವಾಗಿ ಸೂಚಿಸುತ್ತದೆ. ಆದಾಗ್ಯೂ, ಸರ್ಕಾರವು ಮಕ್ಕಳು ಸುರಕ್ಷಿತವಾಗಿದ್ದಾರೆ ಮತ್ತು ಅವರ ಪ್ರಾಯ, ಸಾಮರ್ಥ್ಯ ಮತ್ತು ಆಶಯಗಳನ್ನು ಗಮನದಲ್ಲಿರಿಸಿಕೊಂಡು ಮಕ್ಕಳ ಸರ್ವಾಂಗೀಣ ಅಭಿವೃದ್ಧಿಯನ್ನು ಉತ್ತೇಜಿಸಬೇಕು.*

**ಅಭಿವೃದ್ಧಿ:**

1. ಮಕ್ಕಳು ಅವರ ಪೋಷಣೆಗೆ ಮತ್ತು ಅವರ ಸರ್ವಾಂಗೀಣ ಬೆಳವಣಿಗೆಗೆ, ಅವರ ಬೌದ್ಧಿಕ ಮತ್ತು ದೈಹಿಕ ಬೆಳವಣಿಗೆಗೆ ಕೊಡುಗೆ ನೀಡಲು ಪೂರಕವಾದ ಉದ್ಯೋಗಗಳನ್ನು ಮತ್ತು ಪ್ರಕ್ರಿಯೆಗಳನ್ನು ಮಾತ್ರ ಮಾಡಲು ಅನುಮತಿ ನೀಡತಕ್ಕದ್ದೇ [ಬಾಲ ಕಾರ್ಮಿಕ ತಿದ್ದುಪಡಿ ಕಾಯಿದೆ 2016ರಲ್ಲಿ ವ್ಯಾಖ್ಯಾನಿಸಿರುವಂತೆ], ವಿನಃ ಏಕತಾನತೆಯಿರುವ ಅಥವಾ ಪುನರಾವರ್ತಿತ ಕೆಲಸಗಳನ್ನು ಕೊಡುವಂತಿಲ್ಲ.
2. ಮಕ್ಕಳು ಮಾಡುವಂತಹ ಯಾವುದೇ ಕೆಲಸವು ಅವರ ಕೌಶಲ್ಯಗಳ ಮತ್ತು ಜ್ಞಾನದ ಅಭಿವೃದ್ಧಿಗೆ ಪೂರಕವಾಗಿರಬೇಕು ಮತ್ತು ಇದು ಅವರ ಪೂರ್ಣ ಸಾಮರ್ಥ್ಯವನ್ನು ತಲುಪಲು ಅವರ ಪ್ರಾಯ, ಸಾಮರ್ಥ್ಯಗಳಿಗೆ ಸೂಕ್ತವಾಗಿರಬೇಕು.
3. ಎಲ್ಲಾ ಮಕ್ಕಳು, ಅವರ ಅರ್ಥಪೂರ್ಣ ಬೆಳವಣಿಗೆ ಮತ್ತು ಅಭಿವೃದ್ಧಿಗೆ ಸೂಕ್ತವಾಗಿರುವ ಶಿಕ್ಷಣವನ್ನು ಆ ಮಕ್ಕಳಿಗೆ ಅನುಕೂಲವಾದ ಸಮಯದಲ್ಲಿ ಪಡೆದುಕೊಳ್ಳುವಂತಿರಬೇಕು ಮತ್ತು ಉದ್ಯೋಗದಾತರು ಅವರು ಅದನ್ನು ಪಡೆದುಕೊಳ್ಳುವುದು ಸಾಧ್ಯವಾಗುವುದನ್ನು ಖಾತ್ರಿಪಡಿಸಬೇಕು.
4. ಅವರ ಪ್ರಾಯ ಮತ್ತು ಸಾಮರ್ಥ್ಯಕ್ಕನುಗುಣವಾಗಿ, ಉದ್ಯೋಗದಾತರು ಮಕ್ಕಳಿಗೆ ಅವರ ವಿಶ್ರಾಂತಿಗೆ, ವಿರಾಮಕ್ಕೆ ಮತ್ತು ಅವರ ಬೆಳವಣಿಗೆಯನ್ನು ಉತ್ತೇಜಿಸುವಂತಹ ಮನೋರಂಜನಾ ಚಟುವಟಿಕೆಗಳಿಗೆ ಸಾಕಷ್ಟು ಸಮಯ ಮತ್ತು ಸೂಕ್ತ ಸ್ಥಳವನ್ನು ಒದಗಿಸಬೇಕು.
5. ಮಕ್ಕಳಿಗೆ ಸೂಕ್ಷ್ಮ ವಸ್ತುಗಳಿಂದ ರಕ್ಷಣೆ, ಸ್ವಚ್ಛ ಕುಡಿಯುವ ನೀರು, ಪೌಷ್ಟಿಕ ಮತ್ತು ಸ್ವಚ್ಛ ಆಹಾರ, ಶುದ್ಧ ಗಾಳಿ, ಪುರುಷ ಮತ್ತು ಮಹಿಳೆಯರಿಗಾಗಿ ಪ್ರತ್ಯೇಕ ಮತ್ತು ಸ್ವಚ್ಛ ಶೌಚಾಲಯಗಳು, ಸಾಕಷ್ಟು ಬೆಳಕು ಮತ್ತು ಸುರಕ್ಷಿತ ವಾತಾವರಣದಂತಹ ಮೂಲಭೂತ ಅಗತ್ಯತೆಗಳನ್ನು ಕೆಲಸ ಮಾಡುವ ಸ್ಥಳದಲ್ಲಿ ಒದಗಿಸುವುದನ್ನು ಉದ್ಯೋಗದಾತರು ಖಾತ್ರಿಪಡಿಸಬೇಕು
6. ಸಂಬಂಧಿಕರು / ಕುಟುಂಬದ ಸದಸ್ಯರು / ಉದ್ಯೋಗದಾತರು ಮಕ್ಕಳು ಕೆಲಸ ಮಾಡುವ ಸ್ಥಳದಲ್ಲಿ ಕಾಯಿಲೆಗಳಿಂದ ರಕ್ಷಣೆ, ಉತ್ತಮ ಗಾಳಿಯಾಡುವ ಜಾಗ, ಸಾಕಷ್ಟು ಬೆಳಕು ಮತ್ತು ಸುರಕ್ಷಿತ ವಾತಾವರಣವನ್ನು ಒದಗಿಸುವುದನ್ನು ಖಾತ್ರಿಪಡಿಸಬೇಕು.
7. ಉದ್ಯೋಗದಾತರು ಅವರು ಕೆಲಸ ನೀಡಿರುವ ಎಲ್ಲಾ ಮಕ್ಕಳ ನಿಗದಿತ ಅವಧಿಗೆ ವೈದ್ಯಕೀಯ ತಪಾಸಣೆಗಳು ಮತ್ತು ವೈದ್ಯಕೀಯ ದಾಖಲೆಗಳ ನಿರ್ವಹಣೆಯಾಗುವುದನ್ನು ಖಾತ್ರಿಪಡಿಸಿಕೊಳ್ಳಬೇಕು. ಸರ್ಕಾರಿ ವೈದ್ಯರು ಅಥವಾ ನೋಂದಾಯಿತ ವೈದ್ಯರು ಸೂಚಿಸಿದ ಮಗುವಿಗೆ ಅಗತ್ಯವಿರುವ ಲಸಿಕೆ, ಟಾನಿಕ್, ಮತ್ತು ರೋಗನಿರೋಧಕ ಔಷಧಿಗಳನ್ನು ನೀಡಬೇಕು.
8. ಮಕ್ಕಳಿಗೆ ಅವರ ಉದ್ಯೋಗದಾತರು ಬಾಲ ಕಾರ್ಮಿಕ ಕಾಯ್ದೆ ಮತ್ತು ಹಕ್ಕುಗಳ ಬಗ್ಗೆ ಸಂಪೂರ್ಣ ಮಾಹಿತಿ ನೀಡತಕ್ಕದ್ದು.
9. ಕಾರ್ಮಿಕ ಇಲಾಖೆಯಿಂದ ಮಕ್ಕಳ ಹಕ್ಕುಗಳು, ಅವರಿಗಿರುವ ಶಾಸನಬದ್ಧ/ಕಾನೂನಾತ್ಮಕ ಲಾಭಗಳು, ಒಪ್ಪಂದಗಳು ಮತ್ತು ಪರಿಹಾರ ವ್ಯವಸ್ಥೆಗಳ ಬಗ್ಗೆ ಮಾಹಿತಿಯನ್ನು ದುಡಿಯುವ ಮಕ್ಕಳಿಗೆ ಒದಗಿಸತಕ್ಕದ್ದು.
10. ಕೆಲಸ ಮಾಡುವ ಸ್ಥಳದಲ್ಲಿ ಉಚಿತ ಕರೆ ಮಾಡುವಂತಹ ಮಕ್ಕಳ ಸಹಾಯವಾಣಿಯ ಸಂಖ್ಯೆಯನ್ನು ಪ್ರಮುಖವಾಗಿ ಎಲ್ಲರಿಗೂ ಕಾಣುವಂತೆ ಪ್ರದರ್ಶಿಸಿರಬೇಕು.

11. ಮಗುವನ್ನು ಯಾವುದೇ ರೀತಿಯ ಉದ್ಯೋಗ / ಕೆಲಸಕ್ಕೆ ಬಲವಂತಪಡಿಸುವಂತಿಲ್ಲ ಅಥವಾ ಒತ್ತಾಯಿಸುವಂತಿಲ್ಲ, ಅಥವಾ ಮಗು ಬಯಸಿದರೆ ಅದು ಮಾಡುತ್ತಿರುವ ಉದ್ಯೋಗ/ಕೆಲಸ ಬಿಡುವುದನ್ನು/ ಮುಂದುವರಿಸದಿರುವುದನ್ನು ತಡೆಯುವಂತಿಲ್ಲ. ಮಗುವಿಗೆ ನೀಡಿರುವ ಕೆಲಸವು ಮಗುವಿನ, ಉದ್ಯೋಗದಾತರ ಮತ್ತು ಪೋಷಕರ/ಪಾಲಕರ ನಡುವಿನ ಪರಸ್ಪರ ಮಾತುಕತೆ ಮತ್ತು ಒಪ್ಪಂದದಿಂದ ಆಗಿರಬೇಕು.
12. ಸಂಬಂಧಪಟ್ಟ ಸರ್ಕಾರದಿಂದ ರಚಿತವಾಗಿರುವ ನಿಯಮಗಳಿಗೆ ಅನುಗುಣವಾಗಿ ಉದ್ಯೋಗದಾತರಿಂದ ಬಾಲಕಾರ್ಮಿಕರ ಅಭಿವೃದ್ಧಿ ನಿಧಿಗೆ ಕೆಲಸ ಮಾಡುತ್ತಿರುವ ಪ್ರತಿ ಮಗುವಿನ ಹೆಸರಿನಲ್ಲಿ ದೇಣಿಗೆ ನೀಡಬೇಕು.

**ರಕ್ಷಣೆ:**

1. ಉದ್ಯೋಗದಾತರು; ಅಥವಾ 'ಗೃಹ ಆಧಾರಿತ' ಉದ್ಯೋಗಗಳ ಸಂದರ್ಭದಲ್ಲಿ, ಗೊತ್ತುಪಡಿಸಿದ ಸಂಬಂಧಿಯು; ಮಕ್ಕಳು ದೈಹಿಕವಾಗಿ ಮತ್ತು/ಅಥವಾ ಮಾನಸಿಕವಾಗಿ ಹಾನಿಕಾರಕವಾದಂತಹ ವಾತಾವರಣದಲ್ಲಿ ಕೆಲಸ ಮಾಡುವುದಿಲ್ಲ ಮತ್ತು ಅಪಾಯಕಾರಿ ಸಂಸ್ಕಾರಕ ಬಳಕೆ, ಉಪಕರಣಗಳ, ಯಂತ್ರಗಳ ಅಥವಾ ವಾಹನಗಳ ಬಳಕೆಯಲ್ಲಿ ತೊಡಗಿಸಿಕೊಳ್ಳುವುದಿಲ್ಲ ಅಥವಾ ಅವರ ಜೀವದ ಮೇಲೆ ಮತ್ತು ದೈಹಿಕವಾಗಿ ಮತ್ತು/ಅಥವಾ ಮಾನಸಿಕ ಆರೋಗ್ಯದ ಮೇಲೆ ತಕ್ಷಣ ಮತ್ತು/ಅಥವಾ ದೀರ್ಘಾವಧಿ ಅಪಾಯವೊಡ್ಡುವ ಯಾವುದೇ ಅಪಾಯಕಾರಿ ರಾಸಾಯನಿಕ ಮತ್ತು ವಿಷಕಾರಿ ವಸ್ತುಗಳನ್ನು ನಿಭಾಯಿಸುವುದಿಲ್ಲ ಅಥವಾ ಬಳಸುವುದಿಲ್ಲ ಮತ್ತು ಮಗುವು ಆರ್ಥಿಕ ಅಥವಾ ವೈಯಕ್ತಿಕ ಲಾಭಕ್ಕಾಗಿ ಬಳಕೆಯಾಗುವುದಿಲ್ಲ ಎಂಬುದನ್ನು ಖಾತ್ರಿಪಡಿಸಬೇಕು.
2. ಸಮಾನತೆಯ ತತ್ವವನ್ನು ಗಮನದಲ್ಲಿಟ್ಟುಕೊಂಡು, ಉದ್ಯೋಗದಾತರು ಲಿಂಗ, ಗುಂಪು, ಜನಾಂಗ, ಜಾತಿ ಅಥವಾ ಭಾಷೆಯ ಆಧಾರದ ಮೇಲೆ ಮತ್ತು ವೇತನ, ಸೌಲಭ್ಯಗಳು, ಸುರಕ್ಷಿತತೆ ಮತ್ತು ಸಂರಕ್ಷಣೆಯಂತಹ ಉದ್ಯೋಗದ ಷರತ್ತುಗಳನ್ನು ಒದಗಿಸುವಾಗ ಮತ್ತು ಪೂರ್ಣಗೊಳಿಸುವಾಗ ಯಾವುದೇ ರೀತಿಯ ತಾರತಮ್ಯ ಇರುವುದಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು ಮತ್ತು ತಾರತಮ್ಯದ ಬಗ್ಗೆ ಸೂಕ್ಷ್ಮಗ್ರಾಹಿಯಾಗಿರಬೇಕು ಮತ್ತು ಈ ತಾರತಮ್ಯವು ಆಡಳಿತಗಾರರು ಮತ್ತು ಮಕ್ಕಳು, ಮಕ್ಕಳೊಳಗೆ ಉಂಟಾದಾಗ ತಕ್ಷಣ ಮಧ್ಯಸ್ಥಿಕೆ ವಹಿಸಬೇಕು.
3. ಮಕ್ಕಳು ಲಿಂಗ ಅಥವಾ ವಯೋಮಾನದ ಯಾವುದೇ ತಾರತಮ್ಯವಿಲ್ಲದೇ ತೊಡಗಿಸಿಕೊಳ್ಳುವ ಕೆಲಸಕ್ಕೆ ಅವರಿಗೆ ಸಿಗುವ ಸಂಭಾವನೆಯು 'ಸಮಾನ ಕೆಲಸಕ್ಕೆ ಸಮಾನ ವೇತನ' ತತ್ವದಂತೆ ಅನ್ವಯವಾಗತಕ್ಕದ್ದು ಮತ್ತು ಈ ಸಂಭಾವನೆಯು ಆ ಸಮಯದಲ್ಲಿ ಜಾರಿಯಲ್ಲಿರುವ ಕನಿಷ್ಠ ವೇತನ ಕಾಯಿದೆಯಲ್ಲಿ ನಿರ್ದೇಶಿಸಿರುವ ಕನಿಷ್ಠ ವೇತನಕ್ಕಿಂತ ಕಡಿಮೆ ಇರಬಾರದು ಮತ್ತು ಜೀವನಮಟ್ಟಕ್ಕೆ ಸಾಕಷ್ಟು ಕೊಡುಗೆ ನೀಡುವಂತಿರಬೇಕು.
4. ವೈದ್ಯಕೀಯ ತುರ್ತು ಸಂದರ್ಭದಲ್ಲಿ ಅಥವಾ ಕೆಲಸಕ್ಕೆ ಬರುವಾಗ ಮಾರ್ಗಮಧ್ಯದಲ್ಲಿ ಅಥವಾ ಕೆಲಸದ ಸ್ಥಳದಲ್ಲಿ ಅಪಘಾತದಂತಹ ಘಟನೆಗಳು ಸಂಭವಿಸಿದಾಗ; ಮಗುವಿಗೆ ತಕ್ಷಣ ಪ್ರಥಮ ಚಿಕಿತ್ಸೆ ಕೊಡಿಸಬೇಕು ಮತ್ತು ಗಾಯ/ವೈದ್ಯಕೀಯ ಪರಿಸ್ಥಿತಿಯ ತೀವ್ರತೆಯ ಮತ್ತು ಸ್ವರೂಪದ ಆಧಾರದ ಮೇಲೆ ಸರ್ಕಾರಿ ವೈದ್ಯರ, ನೋಂದಾಯಿತ ವೈದ್ಯರ ಬಳಿ, ಗುರುತಿಸಲ್ಪಟ್ಟ ಆಸ್ಪತ್ರೆಗೆ ಕರೆದುಕೊಂಡು ಹೋಗಬೇಕು. ಅಂತಹ ಘಟನೆಗಳನ್ನು ತಕ್ಷಣವೇ ಮಗುವಿನ ಪಾಲಕರು/ಪೋಷಕರಿಗೆ ಮತ್ತು ಸೂಕ್ತ ಸರ್ಕಾರಿ ಇಲಾಖೆಗೆ ವರದಿ ಮಾಡಬೇಕು. ಎಲ್ಲಾ ಮಕ್ಕಳಿಗೆ ವೈದ್ಯಕೀಯ ವಿಮೆ, ಜೀವವಿಮೆ ಹಾಗೂ ಅಪಘಾತವಿಮೆಗಳನ್ನು ಒದಗಿಸತಕ್ಕದ್ದು. ಅಗತ್ಯವಿದ್ದಲ್ಲಿ, ತುರ್ತು ಸ್ಪಂದನಾ ಘಟಕವನ್ನು ಕರೆಸಿಕೊಳ್ಳಬೇಕು.
5. ಉದ್ಯೋಗದಾತರು; ಅಥವಾ 'ಗೃಹ ಆಧಾರಿತ' ಉದ್ಯೋಗಗಳ ಸಂದರ್ಭದಲ್ಲಿ, ಗೊತ್ತುಪಡಿಸಿದ ಸಂಬಂಧಿಯು; ಮಗುವು ವಿಪತ್ತಿನ, ಅಪಾಯಕಾರಿ ಅಥವಾ ಅನುಚಿತ ಪರಿಸರಕ್ಕೆ ಒಡ್ಡಿಕೊಳ್ಳುವುದಿಲ್ಲ ಎಂಬುದನ್ನು ಖಾತ್ರಿಗೊಳಿಸಬೇಕು.
6. ಕೆಲಸ ಮಾಡುವ ಸ್ಥಳದಲ್ಲಿ ಯಾವುದೇ ರೀತಿಯ ದೈಹಿಕ, ಮಾನಸಿಕ, ಲೈಂಗಿಕ ಶೋಷಣೆ/ಕಿರುಕುಳವಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳುವುದು ಉದ್ಯೋಗದಾತರ ಅಥವಾ 'ಗೃಹ ಆಧಾರಿತ' ಉದ್ಯೋಗಗಳ ಸಂದರ್ಭದಲ್ಲಿ, ಗೊತ್ತುಪಡಿಸಿದ ಸಂಬಂಧಿಯ ಜವಾಬ್ದಾರಿಯಾಗಿರತಕ್ಕದ್ದು. ಇದಕ್ಕೆ ಸಂಬಂಧಿಸಿದಂತೆ, ತಡೆಗಟ್ಟುವ ಮತ್ತು ಪರಿಹಾರ ಕ್ರಮಗಳು ಜಾರಿಯಲ್ಲಿರಬೇಕು.
7. ಉದ್ಯೋಗ ಸಂಸ್ಥೆಯ ಗಾತ್ರ ಮತ್ತು ಗುಣಲಕ್ಷಣಗಳನ್ನು ಅವಲಂಬಿಸಿ, ಉದ್ಯೋಗದಾತರು, ಮಕ್ಕಳಿಗೆ ದೈಹಿಕ, ಮಾನಸಿಕ ಅಥವಾ ಲೈಂಗಿಕ ಶೋಷಣೆ/ಕಿರುಕುಳ, ತಾರತಮ್ಯ ಅಥವಾ ಯಾವುದೇ ರೀತಿಯ ವಿಶ್ವಾಸಘಾತವಾದರೆ ವರದಿ ಮಾಡಲು ಅಗತ್ಯವಿರುವ ವ್ಯವಸ್ಥೆಗಳು ಲಭ್ಯವಿರುವುದನ್ನು ಖಚಿತಪಡಿಸಿಕೊಳ್ಳಬೇಕು ಮತ್ತು ಉದ್ಯೋಗದಾತರು ಮನೆಯಲ್ಲಿ ಅಥವಾ ಕ್ಷಿಪ್ರ ಸ್ಪಂದನಾ ತಂಡದ ನೆರವಿನಿಂದ ವೇಗದ ಪರಿಹಾರ ಮತ್ತು ಪ್ರತಿಕ್ರಿಯೆ ಒದಗಿಸಬೇಕು.
8. ಮಗುವಿಗೆ ಅಪಾಯ ಸಂಭವಿಸುವಂತಿದ್ದರೆ ಉದ್ಯೋಗದಾತರು; ಅಥವಾ 'ಗೃಹ ಆಧಾರಿತ' ಉದ್ಯೋಗಗಳ ಸಂದರ್ಭದಲ್ಲಿ, ಗೊತ್ತುಪಡಿಸಿದ ಸಂಬಂಧಿಯು; ಅವನು/ಅವಳನ್ನು ತ್ವರಿತವಾಗಿ ಹೊರತರಬೇಕು ಮತ್ತು ಅವನ/ಅವಳ ಸುರಕ್ಷಿತತೆಯನ್ನು ಖಚಿತಪಡಿಸಬೇಕು (ಅಗತ್ಯ ಪರಿಸ್ಥಿತಿಯಿದ್ದಾಗ ಕ್ಷಿಪ್ರ ಸ್ಪಂದನಾ ತಂಡದ ಸಹಕಾರದಿಂದ)

9. ಉದ್ಯೋಗ ಸಂಸ್ಥೆಯ ಗಾತ್ರ ಮತ್ತು ಗುಣಲಕ್ಷಣಗಳನ್ನು ಅವಲಂಬಿಸಿ, ಉದ್ಯೋಗದಾತರು ಆಂತರಿಕ ದೂರು ಸಮಿತಿ[4]ಯನ್ನು ಸ್ಥಾಪಿಸಬೇಕು ಅಥವಾ ಕೆಲಸ ಮಾಡುವ ಸ್ಥಳದಲ್ಲಿ ಮಹಿಳೆಯರಿಗಾಗುವ ಲೈಂಗಿಕ ಕಿರುಕುಳ (ತಡೆಗಟ್ಟುವ, ನಿಷೇಧ ಮತ್ತು ನಿಯಂತ್ರಣ) ಕಾಯಿದೆ, 2013ರ ಪ್ರಕಾರ ಜಿಲ್ಲಾಡಳಿತವು ಸ್ಥಾಪಿಸಿದ ಸ್ಥಳೀಯ ದೂರುಗಳ ಸಮಿತಿಯ ಸೇವೆಗಳನ್ನು ಪಡೆಯಬೇಕು ಮತ್ತು ಉದ್ಯೋಗದಾತರು, ಮಗುವಿನ ಪೋಷಕರು ಅಥವಾ ಪಾಲಕರು ಕಾಯಿದೆ[5]ಯಲ್ಲಿ ನಿರ್ದೇಶಿಸಿದ ಕ್ರಮವನ್ನು ಅನುಸರಿಸಬೇಕು ಮತ್ತು ಅಗತ್ಯವಿರುವ ಎಲ್ಲಾ ಸಹಕಾರವನ್ನು ಕ್ಷಿಪ್ರ ಸ್ಪಂದನಾ ತಂಡಕ್ಕೆ ಮತ್ತು ಪಂಚಾಯತ್ ಮಟ್ಟದ ಕಾರ್ಯಪಡೆಗೆ ನೀಡಬೇಕು.
10. ಉದ್ಯೋಗದಾತರು, ಮಕ್ಕಳ ಪೋಷಕರು ಮತ್ತು ಪಾಲಕರು ಯಾವುದೇ ಪರಿಸ್ಥಿತಿಯಲ್ಲಿ ಮಗುವಿನ ಹೆಸರು, ವಿಳಾಸ, ದೂರವಾಣಿ/ಸಂಪರ್ಕ ಮಾಹಿತಿ, ಆಡಿಯೋ ಅಥವಾ ವೀಡಿಯೋ ಧ್ವನಿಮುದ್ರಿಕೆ, ಭಾವಚಿತ್ರ, ಕುಟುಂಬದ ವಿವರಗಳು, ಶಾಲೆ, ನೆರೆಹೊರೆಯವರ ಬಗ್ಗೆ ವಿವರ, ಅಥವಾ ಮಗುವಿನ ಗುರುತನ್ನು ಬಹಿರಂಗಪಡಿಸುವ ಯಾವುದೇ ವಿವರಗಳನ್ನು ಮುದ್ರಣ / ಪತ್ರಿಕೆ, ದೃಶ್ಯ ಮಾಧ್ಯಮ ಅಥವಾ ಸಾಮಾಜಿಕ ಜಾಲತಾಣಗಳಿಗೆ ಲಭ್ಯವಾಗದಂತೆ ಜಾಗೃತರಾಗಿರತಕ್ಕದ್ದು. ಮಾಧ್ಯಮವು ಎಲ್ಲಾ ಪರಿಸ್ಥಿತಿಯಲ್ಲಿ, ನಿರ್ದಿಷ್ಟವಾಗಿ ಗೌಪ್ಯತೆಯ ಈ ನಿರ್ವಹಣಾ ತತ್ವಕ್ಕೆ ಮತ್ತು ಮಗುವಿನ ಖಾಸಗೀತನದ ಮತ್ತು ಗೌಪ್ಯತೆಯ ಸಂರಕ್ಷಣೆಯ ಹಕ್ಕಿಗೆ ಬದ್ಧವಾಗಿದೆ.
11. ಉದ್ಯೋಗ ಸಂಸ್ಥೆಗೆ ಭೇಟಿ ಮಾಡುವವರ ಮತ್ತು ಗಿರಾಕಿಗಳ ಜೊತೆಗೆ ಮಕ್ಕಳಿಗೆ, ಮಗುವಿನ ಪೋಷಕರು ಮತ್ತು ಪಾಲಕರಿಗೆ ಸ್ಪಷ್ಟವಾಗಿ ಕಾಣುವಂತಹ ರೀತಿಯಲ್ಲಿ ಕೆಲಸಮಾಡುವ ಸ್ಥಳದಲ್ಲಿ ಸಹಾಯವಾಣಿಯ ಮತ್ತು ಕ್ಷಿಪ್ರ ಸ್ಪಂದನಾ ತಂಡದ ದೂರವಾಣಿ ಸಂಖ್ಯೆಯನ್ನು ಪ್ರಮುಖವಾಗಿ ಪ್ರದರ್ಶಿಸಬೇಕು

**ಮಕ್ಕಳ ಭಾಗವಹಿಸುವಿಕೆ:**

1. ಕೆಲಸ ಮಾಡುವ ಸ್ಥಳದಲ್ಲಿ ಪ್ರತಿ ಮಗುವನ್ನೂ ಹಕ್ಕುದಾರರು ಎಂಬ ರೀತಿಯಲ್ಲಿ ಮೌಲ್ಯಯುತವಾಗಿ ಕಾಣುವ ಮತ್ತು ನಡೆಸಿಕೊಳ್ಳುವ ಹಾಗೂ ಅವರ ಏಜನ್ಸಿಯನ್ನು ಗೌರವಿಸುವಂತಹ ವಾತಾವರಣವನ್ನು ನಿರ್ಮಾಣ ಮಾಡುವುದನ್ನು ಉದ್ಯೋಗದಾತರು ಖಾತ್ರಿಪಡಿಸಬೇಕು.
2. ಉದ್ಯೋಗದಾತರು; ಅಥವಾ 'ಗೃಹ ಆಧಾರಿತ' ಉದ್ಯೋಗಗಳ ಸಂದರ್ಭದಲ್ಲಿ, ಗೊತ್ತುಪಡಿಸಿದ ಸಂಬಂಧಿಯು; ಮಕ್ಕಳ ಸಂಘಟನೆಯ ಹಕ್ಕನ್ನು ಮತ್ತು ಅವರದ್ದೇ ಸಂಘ/ಗಳನ್ನು ಕಟ್ಟುವುದನ್ನು ತಡೆಯಬಾರದು ಮತ್ತು ಮಕ್ಕಳ ಸ್ನೇಹಿ ಪಾಲ್ಗೊಳ್ಳುವಿಕೆಯ ವಿಧಾನದಲ್ಲಿ, ಚರ್ಚೆಗಳು/ಮಾತುಕತೆಗಳಲ್ಲಿ ಮಕ್ಕಳು ಸಕ್ರೀಯವಾಗಿ ತೊಡಗಿಕೊಳ್ಳುವ, ಮಕ್ಕಳು ಅವರಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಸ್ವತಂತ್ರವಾಗಿ ಧ್ವನಿ ಎತ್ತುವುದನ್ನು ಸಾಧ್ಯವಾಗಿಸಿ, ಕೆಲಸದ ಸ್ಥಳದಲ್ಲಿರುವ ಅಪಾಯಗಳನ್ನು ಗುರುತಿಸುವ, ಮೌಲ್ಯಮಾಪನ ಮಾಡುವ ಮತ್ತು ಕಂಡುಹಿಡಿಯುವ; ಕೆಲಸ ಮಾಡುವ ಸ್ಥಳಕ್ಕೆ ಸಂಬಂಧಿಸಿದಂತೆ ನೀತಿಗಳು ಮತ್ತು ಕಾರ್ಯವಿಧಾನಗಳನ್ನು ಅಭಿವೃದ್ಧಿಗೊಳಿಸುವ ಪ್ರಕ್ರಿಯೆಗಳನ್ನು ನಡೆಸತಕ್ಕದ್ದು.
3. ಬಾಲನ್ಯಾಯ ಕಾಯಿದೆ 2015ರ ಅಡಿಯಲ್ಲಿ ಮಕ್ಕಳ ಹಕ್ಕುಗಳ ಉಲ್ಲಂಘನೆಯ ಪರಿಹಾರ ವ್ಯವಸ್ಥೆಯಲ್ಲಿ, ವಿಚಾರಣೆಗಳಲ್ಲಿ, ಕಾರ್ಯವಿಧಾನಗಳಲ್ಲಿ ಮತ್ತು ನಿರ್ಣಯ ಕೈಗೊಳ್ಳುವಲ್ಲಿ ಮಕ್ಕಳಿಗೆ ಕಾನೂನಾತ್ಮಕ ಪ್ರಾತಿನಿಧ್ಯ ಇದೆ.

**ಮಾನ್ಯತೆ:**

1. ಗ್ರಾಮ/ನಗರ ಪಂಚಾಯತ್ ಕಾರ್ಯಪಡೆಯು ಕೆಲಸ ಮಾಡುವ ಸ್ಥಳದಲ್ಲಿ ನಿಯಮಾವಳಿಗಳು ಅನುಷ್ಠಾನವಾಗುವುದನ್ನು ಮಕ್ಕಳ/ಮಕ್ಕಳ ಸಂಘಗಳ ಅರ್ಥಪೂರ್ಣ ಭಾಗವಹಿಸುವಿಕೆಯೊಂದಿಗೆ ಮೇಲ್ವಿಚಾರಣೆ ಮಾಡಬೇಕು.
2. ಕೆಲಸ ಮಾಡುವ ಸ್ಥಳವು ನಿಯಮಾವಳಿಗೆ ಬದ್ಧವಾಗಿರುವುದು ಕಂಡುಬಂದರೆ, ಜಿಲ್ಲಾ ಮಟ್ಟದ ಕಾರ್ಯಪಡೆಯು ಅಂತಹ ಉದ್ಯೋಗಸಂಸ್ಥೆಗಳಿಗೆ **'ಮಕ್ಕಳ ಸುರಕ್ಷಿತ ಕೆಲಸದ ಸ್ಥಳ'** ಎಂಬ ಪ್ರಮಾಣಪತ್ರವನ್ನು ಪ್ರತಿವರ್ಷವೂ ನೀಡಬೇಕು. ಕೆಲಸ ಮಾಡುವ ಸ್ಥಳದ ಪರಿಶೀಲನೆಯಾದ ನಂತರ ವಾರ್ಷಿಕವಾಗಿ ಈ ಪ್ರಮಾಣೀಕರಣವನ್ನು ನವೀಕರಿಸಬೇಕು.
3. ಭಾಗಶಃ ಅಥವಾ ಸಂಪೂರ್ಣವಾದ ಅನನುಪಾಲನೆಯ ಸಣ್ಣ ಪ್ರಕರಣಗಳಲ್ಲಿ, ನಿಯಮಾವಳಿಯ ಅಗತ್ಯತೆಗಳನ್ನು ನಿರ್ದಿಷ್ಟ ಸಮಯದಲ್ಲಿ ಪೂರೈಸುವಂತೆ ಮಕ್ಕಳ/ಮಕ್ಕಳ ಸಂಘದ ಭಾಗವಹಿಸುವಿಕೆಯಲ್ಲಿ ಉದ್ಯೋಗದಾತರೊಂದಿಗೆ ಮಾತುಕತೆ ನಡೆಸಬೇಕು.
4. ಮಾತುಕತೆ ವಿಫಲಗೊಂಡರೆ ಅಥವಾ ಉದ್ಯೋಗದಾತರು ಗೊತ್ತುಪಡಿಸಿದ ಗಡುವನ್ನು ಮುಟ್ಟಲು ವಿಫಲಗೊಂಡರೆ, ಕಾರ್ಮಿಕ ಇಲಾಖೆಯು ತಕ್ಷಣವೇ ಭಾದಿತ ಮಗು/ಮಕ್ಕಳಿಗೆ ಸುರಕ್ಷಿತ ಪರ್ಯಾಯ ಉದ್ಯೋಗ ಒದಗಿಸುವಲ್ಲಿ

---

4 ಪ್ರತಿ ಜಿಲ್ಲೆಯಲ್ಲಿ ಅಸಂಘಟಿತ ವಲಯ ಅಥವಾ ಸಣ್ಣ ಉದ್ಯೋಗಸಂಸ್ಥೆಗಳಲ್ಲಿ ಕೆಲಸ ಮಾಡುವ ಉದ್ಯೋಗಿಗಳು ಲೈಂಗಿಕ ಕಿರುಕುಳ ರಹಿತ ವಾತಾವರಣದಲ್ಲಿ ಕೆಲಸ ಮಾಡಲು ಅನುವಾಗುವಂತೆ ಜಿಲ್ಲಾ ಅಧಿಕಾರಿಯು ಸ್ಥಳೀಯ ದೂರುಗಳ ಸಮಿತಿಯನ್ನು ಸ್ಥಾಪಿಸಬೇಕು

5 ಪೋಕ್ಸೋ ಮತ್ತು ಕೆಲಸ ಮಾಡುವ ಸ್ಥಳದಲ್ಲಿ ಮಹಿಳೆಯರಿಗಾಗುವ ಲೈಂಗಿಕ ಕಿರುಕುಳ(ತಡೆಗಟ್ಟುವ, ನಿಷೇಧ ಮತ್ತು ನಿಯಂತ್ರಣ) ಕಾಯಿದೆ, 2013ರಂತಹ ಕಾನೂನುಗಳು.

ಅವಕಾಶಮಾಡಿಕೊಡಬೇಕು ಮತ್ತು ಮೊದಲಿನ ಉದ್ಯೋಗದಾತರ ಮೇಲೆ ಅನ್ವಯಿಸುವ ಕಾಯಿದೆಯಂತೆ ಕಾನೂನು ಕ್ರಮಕೈಗೊಳ್ಳುವ ಪ್ರಕ್ರಿಯೆಯನ್ನು ಪ್ರಾರಂಭಿಸಬೇಕು.

5. ಗೊತ್ತುಪಡಿಸಿದ ಗಡುವಿನ ಒಳಗೆ ಅನುಸರಣೆ ತೃಪ್ತಿದಾಯಕವಾಗಿದ್ದರೆ, ಕಾರ್ಮಿಕ ಇಲಾಖೆ ಮತ್ತು ಮಕ್ಕಳು/ಮಕ್ಕಳ ಸಂಘವು ಜಂಟಿಯಾಗಿ ದೃಢೀಕರಿಸಿ ವಿಷಯ ಇತ್ಯರ್ಥಗೊಂಡಿದೆ ಎಂದು ಪರಿಗಣಿಸಬೇಕು ಮತ್ತು ಕೆಲಸದ ಸ್ಥಳಕ್ಕೆ ಕೆಲಸ ಮಾಡಲು ಸುರಕ್ಷಿತ ಸ್ಥಳ ಎಂದು ಪ್ರಮಾಣಪತ್ರ ನೀಡಬೇಕು.
6. ಉಲ್ಲಂಘನೆಯು ತೀವ್ರತರವಾಗಿದ್ದು ಸುಧಾರಿಸಲು ಸಾಧ್ಯವಾಗದ ಅಪಾಯಕಾರಿ ಪರಿಸ್ಥಿತಿಗೆ ಮಕ್ಕಳನ್ನು ತಳ್ಳುವಂತಹ ಸಂದರ್ಭದಲ್ಲಿ, ಕಾರ್ಮಿಕ ಇಲಾಖೆಯಿಂದ ಗ್ರಾಮ/ನಗರ ಕಾರ್ಯಪಡೆಯೊಂದಿಗೆ ಸಮಾಲೋಚಿಸಿ ಉದ್ಯೋಗದಾತರ ಮೇಲೆ ಸೂಕ್ತ ಕಾನೂನು ಕ್ರಮವನ್ನು ತಕ್ಷಣವೇ ಕೈಗೊಳ್ಳತಕ್ಕದ್ದು.

## IX. ಸರ್ಕಾರಿ ಸಂಸ್ಥೆಗಳಿಗೆ ಹಾಗೂ ಸೇವೆಗಳಿಗೆ ಅನ್ವಯವಾಗುವ ಮಕ್ಕಳ ರಕ್ಷಣಾ ನಿಯಮಾವಳಿ

**ಮಕ್ಕಳು ಇಂದೇ ಪ್ರಜೆಗಳು!** ಹಾಗಾಗಿ ಮಕ್ಕಳಿಗೆ ಎಲ್ಲಾ ಜಾಗಗಳಲ್ಲೂ ಅಪ್ಯಾಯಮಾನ ಮತ್ತು ಹಿತಕರ ಭಾವನೆ ಉಂಟಾಗುವುದನ್ನು ಖಾತ್ರಿಪಡಿಸಿಕೊಳ್ಳುವುದು ನಮ್ಮ ಕರ್ತವ್ಯವಾಗಿರುತ್ತದೆ. ಪ್ರಥಮ ಚಿಕಿತ್ಸಾ ಕೇಂದ್ರಗಳು, ಆಸ್ಪತ್ರೆಗಳು, ಆರಕ್ಷಕ ಠಾಣೆಗಳು ಹಾಗೂ ಸಾರ್ವಜನಿಕ ವಿತರಣ ಕೇಂದ್ರಗಳಂತಹ ಸಾಮಾನ್ಯವಾಗಿ ಎಲ್ಲಾ ಸಂಸ್ಥೆಗಳು ಮತ್ತು ಸೇವೆ ಒದಗಿಸವ ಸಂಸ್ಥೆಗಳು ವಯಸ್ಕ ಬಳಕೆದಾರರ ದೃಷ್ಟಿಕೋನದಿಂದ ವಿನ್ಯಾಸಗೊಳಿಸಿರುವುದರಿಂದ, ಅಂತಹ ಸ್ಥಳಗಳ ಪುನರಾವಲೋಕಿಸುವ ಮತ್ತು ಅವುಗಳನ್ನು ಮಕ್ಕಳ ಹಾಗೂ ವಿಕಲಚೇತನ ಸ್ನೇಹಿಯಾಗಿ ಪರಿವರ್ತಿಸುವ ಅಗತ್ಯತೆ ಇದೆ.

**ಪರಿಸರ:**

**1. ಮಕ್ಕಳ ಸ್ನೇಹಿ**

ಎಲ್ಲಾ ಸರ್ಕಾರಿ ಸಂಸ್ಥೆಗಳು ಹಾಗೂ ಸೇವೆಗಳು, ಮುಖ್ಯವಾಗಿ ಮಕ್ಕಳೊಂದಿಗೆ ನೇರವಾಗಿ ಸಂವಹನ ನಡೆಸುವ ಸಂಸ್ಥೆಗಳು ಹಾಗೂ ಸೇವೆಗಳು ವಿಕಲಚೇತನರನ್ನೂ ಒಳಗೊಂಡಂತೆ ಮಕ್ಕಳಿಗೆ ಸ್ವಾಗತ ನೀಡುವಂತಹ, ಸಂತೋಷದಾಯಕ, ಹಿತಕರ ಮತ್ತು ಸುರಕ್ಷಿತವಾಗಿರುವ ವಾತಾವರಣವನ್ನು ನೀಡುವುದಕ್ಕೆ ವಿಶೇಷವಾದ ಶ್ರಮವಹಿಸಬೇಕು. ಅವರಿಗೆ ನೀಡಲಾದ ಸೌಲಭ್ಯಗಳು, ಪೀಠೋಪಕರಣಗಳು ಹಾಗೂ ಸಲಕರಣೆಗಳು ಬೆದರಿಕೆ ಒಡ್ಡದಂತೆ ಇರಬೇಕು. ಮಕ್ಕಳೊಂದಿಗೆ ವ್ಯವಹರಿಸುವ ಹಿರಿಯರು / ಅಧಿಕಾರಿಗಳು ಮಕ್ಕಳೊಂದಿಗೆ ಸಂವಹನ ನಡೆಸುವಾಗ ಯಾವುದೇ ಕಾರಣಕ್ಕೂ ಅವರ ಮೇಜಿನ ಹಿಂದೆ ಕುಳಿತುಕೊಳ್ಳಬಾರದು.

**2. ಮಕ್ಕಳಿಗೆ ಮಾಹಿತಿಯು ಸುಲಭವಾಗಿ ದೊರಕುವಂತೆ ಮಾಡುವುದು**

ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು ಮಕ್ಕಳೊಂದಿಗೆ ಸಂವಹನ ನಡೆಸುವಾಗ ಅವರಿಗೆ ಸುಲಭವಾಗಿ ಅರ್ಥವಾಗುವ ರೀತಿಯಲ್ಲಿ ಸರಳವಾದ ಹಾಗೂ ಸ್ಪಷ್ಟವಾದ ಭಾಷೆಯಲ್ಲಿ ಸಂವಹನ ನಡೆಸಬೇಕು. ಮಕ್ಕಳಿಗೆ ಭಾಷಾಂತರದ ಅಗತ್ಯತೆ ಇದ್ದಲ್ಲಿ, ಅವರಿಗೆ ಅದನ್ನು ನೀಡಲು ತಪ್ಪದೇ ಎಲ್ಲಾ ವ್ಯವಸ್ಥೆಯನ್ನು ನೀಡಬೇಕು. ಮಕ್ಕಳಿಗೆ ಭಾಷೆಯು ಓದಲು ಅಥವಾ ಬರೆಯಲು ಬರದಿರುವುದು ಅವರ ಮಾಹಿತಿಯನ್ನು ಪಡೆಯುವ ಹಕ್ಕು ಹಾಗೂ ಅವರು ತಮ್ಮ ಭಾವನೆಗಳನ್ನು ವ್ಯಕ್ತಪಡಿಸುವುದಕ್ಕೆ ಅಡ್ಡಿಪಡಿಸಬಾರದು. ಅತಿ ಮುಖ್ಯವಾದ ಮಾಹಿತಿಯನ್ನು ಸರಳವಾಗಿ ಹೇಳುವಂತಹ ಪೋಸ್ಟರ್‌ಗಳು, ಚಿತ್ರಕಲೆ ಹಾಗೂ ಚಿತ್ರಗಳ ಮೂಲಕ ಪ್ರದರ್ಶಿಸತಕ್ಕದ್ದು.

**ಮನೋಭಾವ/ನಡವಳಿಕೆ:**

**1. ಗೌರವ ನೀಡುವುದು**

ಮಕ್ಕಳು ಒಳಬಂದಾಗ ಅವರಿಗೆ ಯಾವುದೇ ಭಾಷೆ, ಲಿಂಗ, ಧರ್ಮ, ಸಂಸ್ಕೃತಿ ಅಥವಾ ಜನಾಂಗವನ್ನು ಪರಿಗಣಿಸದೇ ಪರಸ್ಪರ ಗೌರವ ಹಾಗು ಸಹಿಷ್ಣುತೆಯ ತತ್ವದಂತೆ ಅವರಿಗೆ ವಿಶೇಷ ಗಮನವನ್ನು ನೀಡಬೇಕು. ನಮ್ಮ ನಡವಳಿಕೆಯು ಗೌರವಯುತವಾಗಿದ್ದು ಯಾವುದೇ ಕಾರಣಕ್ಕೂ ಖಂಡನೀಯ ಅಥವಾ ಕಡೆಗಣಿಸುವಂತಿರಬಾರದು. ಎಲ್ಲಾ ಸಮಯದಲ್ಲಿ ಅವರ ಖಾಸಗಿತನ ಮತ್ತು ಗೌಪ್ಯತೆಯನ್ನು ಕಾಪಾಡುವುದರೊಂದಿಗೆ ಅವರ ಅತ್ಯುತ್ತಮ ಹಿತಾಸಕ್ತಿಯನ್ನು ಎತ್ತಿಹಿಡಿಯಬೇಕು. ಯಾವುದೇ ಪರಿಸ್ಥಿತಿಯಲ್ಲಿಯೂ ಅವರ ದೈಹಿಕ / ಮಾನಸಿಕ / ಬೌದ್ಧಿಕ ಸಾಮರ್ಥ್ಯವನ್ನು ಕಡೆಗಾಣಿಸಬಾರದು. ಮಕ್ಕಳ ಅಭಿಪ್ರಾಯಗಳನ್ನು ಸೂಕ್ಷ್ಮವಾಗಿ ಆಲಿಸಿ ಅದನ್ನು ಗಣನೆಗೆ ತೆಗೆದುಕೊಳ್ಳಬೇಕು. ಅವರಿಗೆ ಬೇಕಾದ ಸೇವೆ ಅಥವಾ ಮಾಹಿತಿಯನ್ನು ಅವರಿಗೆ ಗೌರವಪೂರ್ಣವಾಗಿ ಹಾಗೂ ಸಕಾಲಿಕವಾಗಿ ನೀಡಬೇಕು.

**2. ಸಹಾಯಕಾರಿ**

ಎಲ್ಲಾ ಸಂಸ್ಥೆಗಳು ಅವರ ಅತ್ಯುತ್ತಮ ಸಾಮರ್ಥ್ಯಕ್ಕೆ ಸರಿಯಾಗಿ ಮಕ್ಕಳಿಗೆ ಬೇಕಾದ ಸಹಕಾರವನ್ನು ಅವರಿಗೆ ನೀಡಲು ಸಕ್ರೀಯ ಕ್ರಮಗಳನ್ನು ತೆಗೆದುಕೊಳ್ಳಬೇಕು. ಅತ್ಯಂತ ಬದಿಗೊತ್ತಲ್ಪಟ್ಟ ಮಕ್ಕಳ ಅಗತ್ಯತೆಗಳಿಗೆ ವಿಶೇಷ ಗಮನವನ್ನು ನೀಡಬೇಕು ಮತ್ತು ಅವರಿಗೆ ಸೌಲಭ್ಯಗಳು ಹಾಗೂ ಅವಕಾಶಗಳೆರಡರಲ್ಲೂ ಅವರಿಗೆ ಸಮರ್ಥನೀಯ ಕ್ರಮಗಳನ್ನು ವಿಸ್ತರಿಸಬೇಕು.

**3. ಕೇಳಿಸಿಕೊಳ್ಳುವುದು ಹಾಗೂ ಅರ್ಥಮಾಡಿಕೊಳ್ಳುವುದು**

ಮಕ್ಕಳು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವ ಸಂದರ್ಭದಲ್ಲಿ ಯಾವುದೇ ಪರಿಸ್ಥಿತಿಯಲ್ಲೂ ಅವರನ್ನು ತಡೆಯಲು ಪ್ರಯತ್ನ ಮಾಡಬಾರದು. ಅವರು ಹಂಚಿಕೊಳ್ಳುವ ಅಭಿಪ್ರಾಯಗಳನ್ನು ಸೂಕ್ಷ್ಮವಾಗಿ ಕೇಳಿಸಿಕೊಂಡು ಅವರ ದೃಷ್ಟಿಕೋನಗಳನ್ನು ಅವರ ಹಕ್ಕುಗಳು ಹಾಗೂ ಅವರ ಬದುಕಿನ ಸತ್ಯತೆಗಳ ಚೌಕಟ್ಟಿನಲ್ಲಿ ಅರ್ಥೈಸಿಕೊಳ್ಳಬೇಕು. ಮಕ್ಕಳೊಂದಿಗೆ ಮಾತುಕತೆ ಮಾಡುವಾಗ ಸಂಸ್ಥೆ (ಸೇವಾದಾರರು) ಅದಕ್ಕೆ ಇರಬಹುದಾದ ವಿಭಿನ್ನವಾದ ಹಾಗೂ ಹಲವಾರು ಅಭಿಪ್ರಾಯ/ದೃಷ್ಟಿಕೋನಗಳನ್ನು ಗುರುತಿಸಬೇಕು ಮತ್ತು ಪರಿಗಣಿಸಬೇಕು. ಮಕ್ಕಳ ಅಭಿಪ್ರಾಯಗಳು ಹೇಳಿಕೆಯ ಹಾಗೂ ಬರವಣಿಗೆ ಮೂಲಕ ಮಾತ್ರ ಸೀಮಿತವಾಗದೆ ವಿಭಿನ್ನವಾದ ರೀತಿಯಲ್ಲಿ ಅವರ ಭಾವನೆಗಳನ್ನು ವ್ಯಕ್ತಪಡಿಸಿಕೊಳ್ಳಲು ಅವಕಾಶಗಳನ್ನು ನೀಡಬೇಕು.

**4. ತಾಳ್ಮೆ, ಸಹಿಷ್ಣುತೆ ಹಾಗು ನಿಷ್ಪಕ್ಷಪಾತ**

ಮಕ್ಕಳು ಅಡಚಣೆಯನ್ನು ಉಂಟುಮಾಡುವ ಅಥವಾ ಅಶಿಸ್ತಿನಿಂದ ವರ್ತಿಸುವುದನ್ನು ಒಳಗೊಂಡಂತಹ ಎಲ್ಲಾ ಪರಿಸ್ಥಿತಿಯಲ್ಲೂ, ಆ ಸಂಸ್ಥೆಯು ಅದರ ಪ್ರತಿಸ್ಪಂದನೆಯಲ್ಲಿ ಪೂರ್ವಾಗ್ರಹಪೀಡಿತವಾಗಿರಬಾರದು, ಆದರೆ ಅಂತಹ ನಡವಳಿಕೆಯ ಕಾರಣವನ್ನು ಅರ್ಥಮಾಡಿಕೊಳ್ಳಲು ಪ್ರತಿ ಪರಿಸ್ಥಿತಿಯನ್ನೂ ಸ್ವತಂತ್ರವಾಗಿ ಪರಿಶೀಲಿಸುವ ಪ್ರಯತ್ನ ಮಾಡಬೇಕು.

**ಸೌಲಭ್ಯಗಳು:**

1. ಗಂಡು ಹಾಗೂ ಹೆಣ್ಣು ಮಕ್ಕಳಿಗೆ ಪ್ರತ್ಯೇಕವಾದ ಮಕ್ಕಳ ಸ್ನೇಹಿ ಶೌಚಾಲಯಗಳಿರಬೇಕು ಹಾಗೂ ಅನ್ವಯವಾಗುವಲ್ಲಿ, ಪ್ರತ್ಯೇಕವಾದ ಪ್ರತ್ಯೇಕ ಸ್ನಾನಗೃಹಗಳಿರಬೇಕು. ಎಲ್ಲಾ ಸಂಸ್ಥೆಗಳು ಮುಖ್ಯವಾಗಿ ಮಕ್ಕಳೊಂದಿಗೆ ನೇರವಾಗಿ ಸಂವಹನ ನಡೆಸುವ ಸಂಸ್ಥೆಗಳು ಅತ್ಯಂತ ಚಿಕ್ಕ ಮಕ್ಕಳು ಮತ್ತು ಅಂಗವೈಕಲ್ಯತೆ ಇರುವ ಮಕ್ಕಳೂ ಸೇರಿ ಮಕ್ಕಳಿಗೆ ಸುಗಮ ಚಲನವಲನವನ್ನು ಸಾಧ್ಯವಾಗಿಸಲು ರ್‍ಯಾಂಪ್, ಗಾಲಿಕುರ್ಚಿ, ವಿಕಲಚೇತನರಿಗೆ ಶೌಚಾಲಯ ವ್ಯವಸ್ಥೆ, ಬ್ರೈಲ್ ಲಿಪಿಯಲ್ಲಿ ಸೂಚನಾಫಲಕಗಳು ಹಾಗೂ ಇನ್ನಿತರ ಅಂತಹ ವ್ಯವಸ್ಥೆಗಳಿವೆ ಎಂಬುದನ್ನು ಖಾತ್ರಿಪಡಿಸಿಕೊಳ್ಳಬೇಕು.

2. ಯಾವುದೇ ರೀತಿಯ ಅಪಘಾತ ಮತ್ತು ಆಘಾತಕ್ಕೆ ಒಳಗಾದ ಮಕ್ಕಳಿಗೆ ಆಘಾತ ಆಪ್ತಸಮಾಲೋಚನೆಯನ್ನು ನಡೆಸುವಂತಹ ತರಬೇತಿ ಹೊಂದಿರುವ ಸಿಬ್ಬಂದಿಯೂ ಸೇರಿದಂತೆ ವಿಶೇಷವಾದ ಸಹಕಾರವನ್ನು ನೀಡಬೇಕು. ಅಗತ್ಯವಿದ್ದಾಗ ಸಂದರ್ಭದಲ್ಲಿ ಹಲವಾರು ಸಂಘ ಸಂಸ್ಥೆಗಳು ಒಗ್ಗೂಡಿ ಮಗುವಿನ/ಮಕ್ಕಳ ಅಗತ್ಯತೆಗಳನ್ನು ಪೂರೈಸಬೇಕು.

3. ತುರ್ತು ಸೇವೆಗಳು ಆದಂತಹ ಪ್ರಥಮ ಚಿಕಿತ್ಸೆ ಪೆಟ್ಟಿಗೆ, ರೇಪ್ ಕಿಟ್ ಹಾಗೂ ತುರ್ತು ವೈದ್ಯಕೀಯ ಹಾಗೂ ಇತರ ಸೇವೆಗಳ ವಿವರಗಳು ಎಲ್ಲಾ ಸಮಯದಲ್ಲಿ ಸುಲಭವಾಗಿ ದೊರೆಯುವುದನ್ನು ಖಾತ್ರಿಪಡಿಸಿಕೊಳ್ಳತಕ್ಕದ್ದು. ರಾಜ್ಯದ ಎಲ್ಲಾ ವೈದ್ಯಕೀಯ ಸೇವೆಯನ್ನು ಸಲ್ಲಿಸುವವರು ಅತ್ಯಾಚಾರ ಹಾಗೂ ಇತರ ಲೈಂಗಿಕ ಹಾಗೂ ದೈಹಿಕ ಶೋಷಣೆಯಂತಹ ಘಟನೆಗಳನ್ನು ನಿಭಾಯಿಸಲು ಸಜ್ಜುಗೊಂಡಿರಬೇಕು ಮತ್ತು ಪ್ರಮಾಣೀಕರಿಸಲ್ಪಟ್ಟಿರಬೇಕು. ಮಕ್ಕಳು ತಮ್ಮ ಬೇಡಿಕೆಗಳು ಹಾಗೂ ಸಮಸ್ಯೆಗಳನ್ನು ಅಡ್ಡಪರಿಣಾಮವಾಗುವ ಮತ್ತು/ಅಥವಾ ಅವರ ಗುರುತು ಬಹಿರಂಗಗೊಳ್ಳುವ ಹೇಳಿಕೊಳ್ಳಲು ಭೀತಿ ಇಲ್ಲದೇ ಮತ್ತು ಅವರ ಖಾಸಗೀತನ ಮತ್ತು ಗೌಪ್ಯತೆಯನ್ನು ಕಾಪಾಡಿಕೊಂಡು ಅವರಿಗೆ ಅಗತ್ಯವಿರುವ ಮಾಹಿತಿಯನ್ನು ಪಡೆಯಲು ಅನುಕೂಲವಾಗುವಂತೆ ಮಕ್ಕಳ ಅಂಚೆ ಪೆಟ್ಟಿಗೆ, ಶುಲ್ಕ ರಹಿತ ಮೊಬೈಲ್ ಎಸ್.ಎಂ.ಎಸ್ ಮುಂತಾದ ವ್ಯವಸ್ಥೆಗಳನ್ನು ಲಭ್ಯವಿರುವಂತೆ ಮಾಡಬೇಕು.

**ನಿಯಮಾವಳಿಗಳ ಅನುಸರಣೆ ಮಾಡದಿದ್ದಲ್ಲಿ:**

ಜಿಲ್ಲಾ ಮಟ್ಟದ ಜಾರಿಪಡೆಯು ಸಾರ್ವಜನಿಕ ಸಂಘ–ಸಂಸ್ಥೆಗಳು ಈ ನಿಯಮಾವಳಿಗಳನ್ನು ಅನುಸರಣೆ ಮಾಡುವುದರ ಕುರಿತು ನಿಗದಿತ ಅವಧಿಗೆ ಪುನರಾವಲೋಕನ ನಡೆಸಬೇಕು. ಅನುಸರಣೆಯಾಗದಿದ್ದ ಸಂದರ್ಭದಲ್ಲಿ, ಅಂತಹ ಕ್ರಮಗಳಿಗಿರುವ ಅಗತ್ಯತೆಗಳ ವಿವರಿಸಿ ಚರ್ಚೆ ನಡೆಸಲಾಗುತ್ತದೆ. ಸಂಸ್ಥೆಗಳು ಅದನ್ನು ಮಾಡಲು ವಿಫಲಗೊಂಡರೆ, ಗೊತ್ತುಪಡಿಸಿದ ಅವಧಿಯ ಒಳಗೆ ಅನುಸರಣೆಯ ನಿರ್ದಿಷ್ಟ ಹಂತಗಳ್ನು ನಿರ್ದೇಶಿಸಿ ಎಚ್ಚರಿಕೆ ಸೂಚನಾ ಸಂದೇಶವನ್ನು ನೀಡತಕ್ಕದ್ದು. ಪುನಃ ಅವರು ಅದನ್ನು ಮಾಡಲು ವಿಫಲಗೊಂಡರೆ, ಮಕ್ಕಳ ಹಕ್ಕುಗಳನ್ನು ಉಲ್ಲಂಘಿಸಿದ್ದಕ್ಕಾಗಿ ಅವರ ವಿರುದ್ಧ ಜಿಲ್ಲಾ ಮಟ್ಟದ ಕಾರ್ಯಪಡೆಯಿಂದ ಸೂಕ್ತ ಕ್ರಮ ಕೈಗೊಳ್ಳತಕ್ಕದ್ದು.

## X. ವಿಕಲಚೇತನ ಮಕ್ಕಳಿಗಾಗಿ ಮಕ್ಕಳ ರಕ್ಷಣಾ ನಿಯಮಾವಳಿ

ವಿಕಲಚೇತನ ಮಕ್ಕಳಿಗಾಗಿ ರಚಿಸಿರುವ ನಿಯಮಾವಳಿಯು ವಿಕಲಚೇತನ ವ್ಯಕ್ತಿಗಳ ಹಕ್ಕುಗಳ ಕಾಯ್ದೆ, 2017, ಲೈಂಗಿಕ ದೌರ್ಜನ್ಯಗಳಿಂದ ಮಕ್ಕಳ ರಕ್ಷಣಾ ಕಾಯ್ದೆ, 2012 (ಪೋಕ್ಸೋ) ಹಾಗೂ ವಿಶ್ವಸಂಸ್ಥೆಯ ವಿಕಲಚೇತನ ವ್ಯಕ್ತಿಗಳ ಹಕ್ಕುಗಳ ಒಡಂಬಡಿಕೆ (ಯು.ಎನ್.ಸಿ.ಆರ್.ಪಿ.ಡಿ)ಯ ಅನುಸರಣೆಗೆ ಅನುಗುಣವಾಗಿರತಕ್ಕದ್ದು.

**ಪರಿಸರ:**

**1. ಮಕ್ಕಳ ಸ್ನೇಹಿ**

ಎಲ್ಲಾ ಸರ್ಕಾರಿ ಸಂಸ್ಥೆಗಳು ಹಾಗೂ ಸೇವೆಗಳು, ಮುಖ್ಯವಾಗಿ ಮಕ್ಕಳೊಂದಿಗೆ ನೇರವಾಗಿ ಸಂವಹನ ನಡೆಸುವ ಸಂಸ್ಥೆಗಳು ಹಾಗೂ ಸೇವೆಗಳು ವಿಕಲಚೇತನ ಮಕ್ಕಳನ್ನೂ ಒಳಗೊಂಡಂತೆ ಮಕ್ಕಳಿಗೆ ಸ್ವಾಗತ ನೀಡುವಂತಹ, ಸಂತೋಷದಾಯಕ, ಹಿತಕರ ಮತ್ತು ಸುರಕ್ಷಿತವಾಗಿರುವ ವಾತಾವರಣವನ್ನು ನೀಡುವುದಕ್ಕೆ ವಿಶೇಷವಾದ ಶ್ರಮವಹಿಸಬೇಕು. ಅವರಿಗೆ ನೀಡಲಾದ ಸೌಲಭ್ಯಗಳು, ಪೀಠೋಪಕರಣಗಳು ಹಾಗೂ ಸಲಕರಣೆಗಳು ಬೆದರಿಕೆ ಒಡ್ಡದಂತೆ ಇರಬೇಕು. ವಿಕಲಚೇತನ ಮಕ್ಕಳಿಗಾಗಿ ಪೀಠೋಪಕರಣಗಳು ಅಂತಹ ಮಕ್ಕಳು ಆರಾಮದಾಯಕವಾಗಿ ಕುಳಿತುಕೊಳ್ಳುವಂತೆ ಸಮರ್ಪಕವಾಗಿ ಅವುಗಳನ್ನು ವಿನ್ಯಾಸಗೊಳಿಸಬೇಕು.

**2. ಮಕ್ಕಳಿಗೆ ಮಾಹಿತಿಯು ಸುಲಭವಾಗಿ ದೊರಕುವಂತೆ ಮಾಡುವುದು**

ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು ಅಂಗವೈಕಲ್ಯತೆ ಹೊಂದಿರುವ ಮಕ್ಕಳಿಗೆ ಸುಲಭವಾಗಿ ದೊರಕುವ ನಮೂನೆಯಲ್ಲಿ ಸೂಕ್ತ ಸಂವಹನ ಸಾಧನವನ್ನು ಉಪಯೋಗಿಸಿ ಮಾಹಿತಿಗಳು ದೊರಕುವಂತೆ ಹಾಕಬೇಕು. ಇದು ಬ್ರೈಲ್, ಸನ್ನೆ ಭಾಷೆ, ಚಿತ್ರಪಟಗಳು, ಸಂವಹನ ಫಲಕಗಳು ಇತ್ಯಾದಿಗಳನ್ನು ಒಳಗೊಂಡಿರಬಹುದು. ಅಂಗವೈಕಲ್ಯತೆ ಇರುವ ಮಕ್ಕಳಿಗೆ ಅಪ್ಯಾಯಮಾನವಾಗುವ ರೀತಿಯಲ್ಲಿ ಈ ಮಾಹಿತಿಗಳು ತರ್ಜುಮೆಗೊಂಡಿರತಕ್ಕದ್ದು.

**ಭೌತಿಕ ಮೂಲಸೌಕರ್ಯ:**

- ವಿಕಲಚೇತನ ವ್ಯಕ್ತಿಗಳ ಹಕ್ಕುಗಳ ಕಾಯ್ದೆ, 2017ರಲ್ಲಿ ಹೇಳಿರುವಂತೆ ಸಾರ್ವತ್ರಿಕ ವಿನ್ಯಾಸದ ಪರಿಕಲ್ಪನೆಯನ್ನು ಗಮನದಲ್ಲಿಟ್ಟುಕೊಂಡು ಭೌತಿಕ ಮೂಲಸೌಕರ್ಯಗಳನ್ನು ವಿನ್ಯಾಸಗೊಳಿಸತಕ್ಕದ್ದು. (ಸಾರ್ವತ್ರಿಕ ವಿನ್ಯಾಸವು ಕೇವಲ ವಿಕಲಚೇತನ ಮಕ್ಕಳಿಗಷ್ಟೇ ಉಪಯೋಗವಾಗುವಂತಹುದಲ್ಲ, ಆದರೆ ಎಲ್ಲಾ ಮಕ್ಕಳಿಗೂ, ಹಿರಿಯರಿಗೂ ಮುಂತಾಗಿ ಸುಲಭವಾಗಿ ಹಾಗೂ ಸುರಕ್ಷಿತವಾಗಿ ಉಪಯೋಗವಾಗುವಂತಹುದು)
- ಎಲ್ಲಾ ಸ್ಥಳಗಳು ವಿಕಲಚೇತನ ಮಕ್ಕಳಿಗೆ ಸುಲಭವಾಗಿ ಬಳಸಲು ಸಾಧ್ಯವಾಗುವುದನ್ನು ಖಾತ್ರಿಪಡಿಸಿಕೊಳ್ಳತಕ್ಕದ್ದು ಮತ್ತು ಹಾಗೆ ಇಲ್ಲದಿದ್ದಲ್ಲಿ, ಅಂತಹ ಮಗುವಿಗೆ ಸೂಕ್ತವಾದ ಸಹಕಾರ ಹಾಗೂ ವ್ಯವಸ್ಥೆಯನ್ನು ಒದಗಿಸಬೇಕು.
- ವಿಕಲಚೇತನ ಮಕ್ಕಳು, ರಚನಾತ್ಮಕ ಅಡೆತಡೆಗಳಿಂದಾಗಿ ನಿರ್ದಿಷ್ಟ ಜಾಗದಲ್ಲಿ ಮಾತ್ರ ಓಡಾಡುವುದನ್ನು ಸೀಮಿತಗೊಳಿಸದೇ, ಅವರು ಸ್ವತಂತ್ರವಾಗಿ ಓಡಾಡಲು ರ್‍ಯಾಂಪ್‌ಗಳು ಹಾಗು ಲಿಫ್ಟ್‌ಗಳ ವ್ಯವಸ್ಥೆಯನ್ನು ಒದಗಿಸಲಾಗಿದೆ ಎಂಬುದನ್ನು ಖಾತ್ರಿಪಡಿಸಿಕೊಳ್ಳತಕ್ಕದ್ದು.
- ಅಂಗವೈಕಲ್ಯತೆ ಇರುವ ಗಂಡು ಹಾಗೂ ಹೆಣ್ಣು ಮಕ್ಕಳಿಗೆ ಪ್ರತ್ಯೇಕವಾದ ವಿಕಲಚೇತನ ಸ್ನೇಹಿ ಶೌಚಾಲಯಗಳಿರಬೇಕು ಹಾಗೂ ಅನ್ವಯವಾಗುವಲ್ಲಿ, ಪ್ರತ್ಯೇಕವಾದ ಪ್ರತ್ಯೇಕ ಸ್ನಾನಗೃಹಗಳಿರಬೇಕು. ಎಲ್ಲಾ ಸಂಸ್ಥೆಗಳು, ಅತ್ಯಂತ ಚಿಕ್ಕ ಮಕ್ಕಳು ಮತ್ತು ಅಂಗವೈಕಲ್ಯತೆ ಇರುವ ಮಕ್ಕಳೂ ಸೇರಿ ಎಲ್ಲಾ ಮಕ್ಕಳಿಗೆ ಸುಗಮ ಚಲನವಲನವನ್ನು ಸಾಧ್ಯವಾಗಿಸಲು ರ್‍ಯಾಂಪ್, ಗಾಲಿಕುರ್ಚಿ, ವಿಕಲಚೇತನರಿಗೆ ಶೌಚಾಲಯ ವ್ಯವಸ್ಥೆ, ಬ್ರೈಲ್ ಲಿಪಿಯಲ್ಲಿ ಸೂಚನಾಫಲಕಗಳು ಹಾಗೂ ಇನ್ನಿತರ ಅಂತಹ ವ್ಯವಸ್ಥೆಗಳಿವೆ ಎಂಬುದನ್ನು ಖಾತ್ರಿಪಡಿಸಿಕೊಳ್ಳಬೇಕು.

**ಅಳವಡಿಕೆ**

- ವಿಕಲಚೇತನ ಮಕ್ಕಳು ಮಕ್ಕಳು ಉಪಯೋಗಿಸುವ ಎಲ್ಲಾ ರೀತಿಯ ಆಹಾರ ಸೇವಿಸುವ ಸಾಧನಗಳು, ಲೇಖನ ಸಾಮಾಗ್ರಿಗಳು, ಪೀಠೋಪಕರಣಗಳು ಹಾಗೂ ಇತರ ವಸ್ತುಗಳು ಅವರ ಅಗತ್ಯ ಅವಶ್ಯಕತೆಗಳನ್ನು ಪೂರೈಸುವಂತೆ ಅಳವಡಿಕೆಯಾಗತಕ್ಕದ್ದು.

**ಆರೈಕೆ:**

- ಹಲವಾರು ರೀತಿಯ ಅಂಗವೈಕಲ್ಯ ಹಾಗೂ ಅವುಗಳು ಉಂಟುಮಾಡುವ ಪರಿಣಾಮಗಳಿಗೆ ನೀಡಬೇಕಾದ ಪ್ರಥಮ ಚಿಕಿತ್ಸೆ, ಹಾಗೂ ಮುಖ್ಯವಾಗಿ ಸೆಳವು ಉಂಟಾದಾಗ ಚಿಕಿತ್ಸೆ ನೀಡಲು ಕೌಶಲ್ಯವಿರುವ ಪಾಲನೆದಾರರನ್ನು ನೇಮಿಸಿಕೊಳ್ಳಬೇಕು. ಅದು ಸಾಧ್ಯವಾಗದಿದ್ದಲ್ಲಿ, ಅವರು ಕೆಲಸ ಕಲಿಯುವ ಅವಧಿಯಲ್ಲಿ ತರಬೇತಿಯನ್ನು ಪಡೆಯಬೇಕು ಮತ್ತು ಮೇಲುಸ್ತುವಾರಿ ಇಲ್ಲದೆ ಮಕ್ಕಳ ಆರೈಕೆಯನ್ನು ಮಾಡಲು ಅವರಿಗೆ ಅವಕಾಶವನ್ನು ನೀಡಬಾರದು

- ಮಕ್ಕಳಿಗೆ ತಮ್ಮ ದಿನನಿತ್ಯದ ಚಟುವಟಿಕೆಗಳಲ್ಲಿ (ಎ.ಡಿ.ಎಲ್) ಸಹಾಯ ಮಾಡಲು ಪಾಲನೆದಾರರಿಗೆ ಮೂಲ ಮಾರ್ಗಸೂಚಿಗಳನ್ನು ರೂಪಿಸತಕ್ಕದ್ದು. ದಿನನಿತ್ಯದ ಚಟುವಟಿಕೆಗಳ ಸಹಾಯವನ್ನು ಸ್ನಾನಮಾಡುವಾಗ ಹಾಗೂ ಶೌಚಾಲಯವನ್ನು ಉಪಯೋಗಿಸುವ ವೇಳೆಯಲ್ಲಿಯೂ ನೀಡತಕ್ಕದ್ದು.
- ಯಾವುದೇ ರೀತಿಯ ಆಘಾತವನ್ನು ಅನುಭವಿಸಿದ ಮಕ್ಕಳಿಗೆ ಅಗತ್ಯ ಆಘಾತ ಆಪ್ತಸಮಾಲೋಚನೆಗಾಗಿ ತರಬೇತಿ ಪಡೆದ ಸಿಬ್ಬಂದಿಯನ್ನೂ ಒಳಗೊಂಡಂತೆ ವಿಶೇಷ ಸಹಕಾರ ನೀಡಬೇಕು.
- ಅಗತ್ಯವಿದ್ದಾಗ ಸಂದರ್ಭದಲ್ಲಿ ಹಲವಾರು ಸಂಘ ಸಂಸ್ಥೆಗಳು ಒಗ್ಗೂಡಿ ಮಗುವಿನ/ಮಕ್ಕಳ ಅಗತ್ಯತೆಗಳನ್ನು ಪೂರೈಸಬೇಕು.
- ತುರ್ತು ಸೇವೆಗಳು ಆದಂತಹ ಪ್ರಥಮ ಚಿಕಿತ್ಸೆ ಪೆಟ್ಟಿಗೆ, ರೇಪ್ ಕಿಟ್ ಹಾಗೂ ತುರ್ತು ವೈದ್ಯಕೀಯ ಹಾಗೂ ಇತರ ಸೇವೆಗಳ ವಿವರಗಳು ಎಲ್ಲಾ ಸಮಯದಲ್ಲಿ ಸುಲಭವಾಗಿ ದೊರೆಯುವುದನ್ನು ಖಾತ್ರಿಪಡಿಸಿಕೊಳ್ಳತಕ್ಕದ್ದು.
- ಮಕ್ಕಳು ತಮ್ಮ ಬೇಡಿಕೆಗಳು ಹಾಗೂ ಸಮಸ್ಯೆಗಳನ್ನು ಅಡ್ಡಪರಿಣಾಮವಾಗುವ ಮತ್ತು/ಅಥವಾ ಅವರ ಗುರುತು ಬಹಿರಂಗಗೊಳ್ಳುವ ಹೇಳಿಕೊಳ್ಳಲು ಭೀತಿ ಇಲ್ಲದೇ ಮತ್ತು ಅವರ ಖಾಸಗೀತನ ಮತ್ತು ಗೌಪ್ಯತೆಯನ್ನು ಕಾಪಾಡಿಕೊಂಡು ಅವರಿಗೆ ಅಗತ್ಯವಿರುವ ಮಾಹಿತಿಯನ್ನು ಪಡೆಯಲು ಅನುಕೂಲವಾಗುವಂತೆ ಮಕ್ಕಳ ಅಂಚೆ ಪೆಟ್ಟಿಗೆ, ಶುಲ್ಕ ರಹಿತ ಮೊಬೈಲ್ ಎಸ್.ಎಂ.ಎಸ್ ಮುಂತಾದ ವ್ಯವಸ್ಥೆಗಳನ್ನು ಲಭ್ಯವಿರುವಂತೆ ಮಾಡಬೇಕು.
- ಮಾಹಿತಿಗಳು ಸಮರ್ಪಕವಾಗಿ ಸಂವಹನೆಯಾಗುವುದನ್ನು ಮತ್ತು ತರ್ಜುಮೆಯಾಗುವುದನ್ನು ಪಾಲನಾದಾರರು ಖಾತ್ರಿಪಡಿಸಿಕೊಳ್ಳತಕ್ಕದ್ದು.
- ತುರ್ತು ಪರಿಸ್ಥಿತಿಗಳಲ್ಲಿ ಅಥವಾ ಸೆಳವು ಉಂಟಾದಾಗ ಅವರಿಗೆ ಸಹಕರಿಸಲು ವಿಕಲಚೇತನ ಮಕ್ಕಳ ಸ್ನೇಹಿತರಿಗೂ ಕೂಡ ಮೂಲ ಮಾಹಿತಿಯನ್ನು ನೀಡಬೇಕು. ಹಿರಿಯರ ಅನುಪಸ್ಥಿತಿಯಲ್ಲಿ ತುರ್ತು ಪರಿಸ್ಥಿತಿ ಉಂಟಾದ ಸಂದರ್ಭದಲ್ಲಿ ಇತರ ಮಕ್ಕಳು ಅನುಸರಣೆ ಮಾಡಬೇಕಾದ ಕ್ರಮಗಳ ಬಗ್ಗೆ ಮಾಹಿತಿಯಿರುವ ಒಂದು ನಿಯಮಾವಳಿ ಇರಬೇಕು.
- ವಿಕಲಚೇತನ ಮಕ್ಕಳಿಗೆ ಸೂಕ್ತವಾದ ಆಪ್ತಸಮಾಲೋಚನೆ, ಫಿಸಿಯೋಥೆರಪಿ, ಆಕ್ಯುಪೇಷನಲ್ ಥೆರಪಿ, ಮಾನಸಿಕ – ಸಾಮಾಜಿಕ ನೆರವು ಮುಂತಾದವುಗಳನ್ನು ಅವರ ಪುನರ್ವಸತಿಯೊಂದಿಗೆ ವಿಕಲಚೇತನ ಮಕ್ಕಳಿಗೆ ಒದಗಿಸತಕ್ಕದ್ದು.
- ವಿಕಲಚೇತನ ಮಕ್ಕಳ ಎಲ್ಲಾ ರೀತಿಯ ಸೂಕ್ತ ವೈದ್ಯಕೀಯ ದಾಖಲೆಗಳು ಹಾಗೂ ವಿವರಗಳ್ನು ನಿರ್ವಹಿಸಬೇಕು.
- 24x7 ತುರ್ತು ಸಂದರ್ಭಗಳಲ್ಲಿ ಸ್ಪಂದಿಸಲು, ಅಂಗವೈಕಲ್ಯತೆಯ ಬಗ್ಗೆ ತಿಳುವಳಿಕೆ ಹಾಗೂ ಜ್ಞಾನವಿರುವ ಗೊತ್ತುಪಡಿಸಿದ ವೈದ್ಯರಿರತಕ್ಕದ್ದು.
- ವಿಕಲಚೇತನ ಹೆಣ್ಣು ಮಕ್ಕಳ ದಿನನಿತ್ಯದ ಕೆಲಸಗಳಾದ ಸ್ನಾನ, ಉಡುಪನ್ನು ಧರಿಸುವುದು, ನಡೆದಾಡುವುದು, ಇತ್ಯಾದಿಗಳಲ್ಲಿ ಸಹಕರಿಸುವುದು ಕೇವಲ ಮಹಿಳಾ ಪಾಲನಕಾರರು ಎಂಬುದನ್ನು ಖಾತ್ರಿಪಡಿಸಿಕೊಳ್ಳತಕ್ಕದ್ದು. ವಿಕಲಚೇತನ ಗಂಡು ಮಕ್ಕಳಿಗೆ ಅವರಿಗೆ ಹೆಚ್ಚು ಆರಾಮದಾಯಕವೆನಿಸುವಂತಹ ಮಹಿಳೆ ಅಥವಾ ಗಂಡು ಪಾಲನಕಾರರನ್ನು ವರ ದಿನನಿತ್ಯದ ಕೆಲಸಗಳಲ್ಲಿ ಸಹಕರಿಸಲು ಆಯ್ದುಕೊಳ್ಳಲು ಅವಕಾಶ ನೀಡಬಹುದು.

**ಮನೋಭಾವ/ನಡವಳಿಕೆ:**

- ಸದಾ ಬೆಳೆಯುತ್ತಿರುವ ವಿಕಲಚೇತನ ಮಕ್ಕಳ ಸಾಮರ್ಥ್ಯವನ್ನು ಗಮನದಲ್ಲಿಟ್ಟುಕೊಂಡು ಮಾಹಿತಿಯುಳ್ಳ ಹಾಗೂ ವೈಯಕ್ತಿಕವಾಗಿ ನಿರ್ಧಾರಗಳನ್ನು ತೆಗೆದುಕೊಳ್ಳಲು ಅವರಿಗೆ ಪ್ರೋತ್ಸಾಹ ನೀಡಬೇಕು
- ವಿಕಲಚೇತನ ಮಕ್ಕಳಿಗೆ ಅವರ ಅಂಗವೈಕಲ್ಯತೆಯ ಆಧಾರದ ಮೇಲೆ ತಾರತಮ್ಯ ತೋರಬಾರದು
- ವಿಕಲಚೇತನ ಮಕ್ಕಳು ವಿಕಲಚೇತನರಲ್ಲದ ಮಕ್ಕಳಿಗೆ ಸರಿಸಮನಾಗಿ ಭಾಗವಹಿಸಲು ಸಾಧ್ಯವಾಗುವ ಒಳಗೊಳ್ಳುವಿಕೆಯ ವಾತಾವರಣವನ್ನು ಸೃಷ್ಟಿಸಬೇಕು. ವಿಕಲಚೇತನ ಮಕ್ಕಳು ಸಮಾನವಾಗಿ ಭಾಗವಹಿಸುವಂತೆ ಗುಂಪು ಚಟುವಟಿಕೆಗಳು ಹಾಗೂ ಇತರ ಚಟುವಟಿಕೆಗಳನ್ನು ಯೋಜಿಸಬೇಕು.
- ವಿಕಲಚೇತನ ಮಕ್ಕಳೊಂದಿಗೆ ವ್ಯವಹರಿಸುವ ಮಕ್ಕಳು ಹಾಗೂ ಇತರ ವ್ಯಕ್ತಿಗಳು ವಿಕಲಚೇತನ ಮಕ್ಕಳ ವ್ಯಕ್ತಿತ್ವವನ್ನು ಗಮನದಲ್ಲಿ ಇಟ್ಟಕೊಂಡು ಅವರೊಂದಿಗೆ ಗೌರವದಿಂದ ವ್ಯವಹರಿಸಬೇಕು. ಅಂಗವೈಕಲ್ಯತೆ, ಪರಾನುಭೂತಿಯ ಅಭ್ಯಾಸ, ವಿವಿಧ ಸಂವಹನದ ಸಾಧನಗಳನ್ನು ಉಪಯೋಗಿಸಿ ಮಾತುಕತೆ ನಡೆಸುವ ಕುರಿತು ಇತರ ಮಕ್ಕಳು ಹಾಗೂ ಹಿರಿಯರಲ್ಲಿ ಅರಿವು ಮೂಡಿಸಬೇಕು.

- ವಿಕಲಚೇತನ ಮಕ್ಕಳು ಅನುಭವಿಸುವ ದೈಹಿಕ, ಸಾಮಾಜಿಕ ಹಾಗೂ ಭಾವಾತ್ಮಕ ಅಡೆತಡೆಗಳನ್ನು ಸಕ್ರೀಯವಾಗಿ ಗುರುತಿಸಿ ಅವುಗಳನ್ನು ತೊಡೆದುಹಾಕುವ ಪ್ರಯತ್ನಗಳನ್ನು ಮಾಡಬೇಕು.
- ವಿಕಲಚೇತನ ವ್ಯಕ್ತಿಗಳ ಹಕ್ಕುಗಳ ಕಾಯ್ದೆ, 2017 ಹಾಗೂ ವಿಶ್ವಸಂಸ್ಥೆ ವಿಕಲಚೇತನ ವ್ಯಕ್ತಿಗಳ ಹಕ್ಕುಗಳ ಒಡಂಬಡಿಕೆ (ಯು.ಎನ್.ಸಿ.ಆರ್.ಪಿ.ಡಿ)ಗಳಲ್ಲಿ ಹೇಳಿರುವ ವಿಕಲ ಚೇತನರಿಗೆ ಇರುವ ಯಾವುದೇ ಹಕ್ಕು ಮತ್ತು ಅವಕಾಶಗಳನ್ನು ಉಲ್ಲಂಘಿಸುವಂತಿಲ್ಲ.
- ವಿಕಲಚೇತನ ಮಕ್ಕಳೊಂದಿಗೆ ಮಾತನಾಡುವ ವ್ಯಕ್ತಿಗಳು ಅವರೊಂದಿಗೆ ಅತ್ಯಂತ ತಾಳ್ಮೆಯಿಂದ ವರ್ತಿಸಬೇಕು ಹಾಗೂ ಯಾವುದೇ ಸಂದರ್ಭದಲ್ಲಿ ಮಕ್ಕಳ ಮೇಲೆ ತಮ್ಮ ನಿರ್ಧಾರಗಳನ್ನು ಹೇರುವಂತಿಲ್ಲ ಎಂಬುದನ್ನು ಖಾತ್ರಿಪಡಿಸಿಕೊಳ್ಳತಕ್ಕದ್ದು. ಅವರನ್ನು ಕೇಳಿಸಿಕೊಳ್ಳುತ್ತಾರೆ ಎಂಬುದನ್ನೂ ಸಹ ಖಾತ್ರಿಪಡಿಸಿಕೊಳ್ಳತಕ್ಕದ್ದು.

**ಸಾರಿಗೆ:**

- ವಿಕಲಚೇತನ ಮಕ್ಕಳಿಗೆ ಅಗತ್ಯವಿರುವ ಎಲ್ಲಾ ಸಾರಿಗೆ ವ್ಯವಸ್ಥೆಗಳು ಅವರು ಬಳಕೆಗೆ ತಕ್ಕಂತೆ ಅಳವಡಿಕೆಯಾಗಬೇಕು. ಬಸ್ ಹಾಗೂ ಇತರ ವಾಹನಗಳಲ್ಲಿ ರ್‍ಯಾಂಪ್ ಅಥವಾ ಗಾಲಿಕುರ್ಚಿ ಇಡಲು ಗೊತ್ತುಪಡಿಸಿದ ಸ್ಥಳಾವಕಾಶವಿರಬೇಕು.
- ಅಗತ್ಯವಿರುವಾಗ ಸಾರಿಗೆ ವ್ಯವಸ್ಥೆಗಳನ್ನು ಬಳಸಲು ಸೂಕ್ತವಾದ ಸೌಕರ್ಯಗಳನ್ನು ಮಾಡಿಕೊಡಬೇಕು

**ನಿಯಮಾವಳಿಗಳ ಅನುಸರಣೆ ಮಾಡದಿದ್ದಲ್ಲಿ:**

ಜಿಲ್ಲಾ ಮಟ್ಟದ ಜಾರಿಪಡೆಯು ಸಾರ್ವಜನಿಕ ಸಂಘ–ಸಂಸ್ಥೆಗಳು ಈ ನಿಯಮಾವಳಿಗಳನ್ನು ಅನುಸರಣೆ ಮಾಡುವುದರ ಕುರಿತು ನಿಗದಿತ ಅವಧಿಗೆ ಪುನರಾವಲೋಕನ ನಡೆಸಬೇಕು. ಅನುಸರಣೆಯಾಗದಿದ್ದ ಸಂದರ್ಭದಲ್ಲಿ, ಅಂತಹ ಕ್ರಮಗಳಿಗಿರುವ ಅಗತ್ಯತೆಗಳ ವಿವರಿಸಿ ಚರ್ಚೆ ನಡೆಸಲಾಗುತ್ತದೆ. ಸಂಸ್ಥೆಗಳು ಅದನ್ನು ಮಾಡಲು ವಿಫಲಗೊಂಡರೆ, ಗುತ್ತುಪಡಿಸಿದ ಅವಧಿಯ ಒಳಗೆ ಅನುಸರಣೆಯ ನಿರ್ದಿಷ್ಟ ಹಂತಗಳ್ಳು ನಿರ್ದೇಶಿಸಿ ಎಚ್ಚರಿಕೆ ಸೂಚನಾ ಸಂದೇಶವನ್ನು ನೀಡತಕ್ಕದ್ದು. ಪುನಃ ಅವರು ಅದನ್ನು ಮಾಡಲು ವಿಫಲಗೊಂಡರೆ, ಮಕ್ಕಳ ಹಕ್ಕುಗಳನ್ನು ಉಲ್ಲಂಘಿಸಿದ್ದಕ್ಕಾಗಿ ಅವರ ವಿರುದ್ಧ ಜಿಲ್ಲಾ ಮಟ್ಟದ ಜಾರಿಪಡೆಯಿಂದ ಸೂಕ್ತ ಕ್ರಮ ಕೈಗೊಳ್ಳತಕ್ಕದ್ದು.

## XI. ಶಾಲೆಗಳಿಗೆ ಹಾಗೂ ಮಕ್ಕಳ ವಸತಿನಿಲಯಗಳಿಗೆ ಅನ್ವಯವಾಗುವ ಮಕ್ಕಳ ಹಕ್ಕುಗಳ ರಕ್ಷಣಾ ನಿಯಮಾವಳಿ:

*ಕರ್ನಾಟಕ ರಾಜ್ಯ ಸರ್ಕಾರವು ಅಳವಡಿಸಿಕೊಂಡಿರುವ ಹಾಗೂ ಕರ್ನಾಟಕ ರಾಜ್ಯ ಶಿಕ್ಷಣ ಕಾಯ್ದೆಯು ಕಡ್ಡಾಯಪಡಿಸುವ* ***ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ – 2016ರ ಭಾಗವಾದ ಶೈಕ್ಷಣಿಕ ಸಂಸ್ಥೆಗಳಿಗೆ ಮಕ್ಕಳ ಸುರಕ್ಷಾ ಪರಿಶೀಲನಾ ಪಟ್ಟಿಯ*** *ಪ್ರತಿಯನ್ನು ಅನುಸರಣೆಗಾಗಿ ಇದರೊಂದಿಗೆ ಲಗತ್ತಿಸಲಾಗಿದೆ. ಈ ಮಾರ್ಗದರ್ಶಿಯ ಸೂಚಿಸುವಂತೆ, ಕರ್ನಾಟಕ ರಾಜ್ಯದ ಎಲ್ಲಾ ಶೈಕ್ಷಣಿಕ ಸಂಸ್ಥೆಗಳು ಈ ನೀತಿಯಡಿ ತಮ್ಮ ಸ್ವಂತದ ರಕ್ಷಣಾ ನೀತಿಯನ್ನು ರಚಿಸಿಕೊಳ್ಳಬೇಕಾಗಿರುತ್ತದೆ. ಅಂತಹ ಆಯಾ ಸಂಸ್ಥೆಗಳಿಗೆ ಅಗತ್ಯವಿರುವಂತೆ ನೀತಿಯನ್ನು ರಚಿಸಿಕೊಳ್ಳಲು ಬೇಕಾದ ಮಾರ್ಗದರ್ಶಿಯು ಈ ನೀತಿಯ ಮಾರ್ಗದರ್ಶಿಯಲ್ಲಿ ಸೇರ್ಪಡೆಯಾಗಿದೆ.* **ಅನುಬಂಧ (iii)**

## XII. ಸಾರ್ವಜನಿಕ ಸಾರಿಗೆಗೆ ಅನ್ವಯವಾಗುವ ಮಕ್ಕಳ ರಕ್ಷಣಾ ನಿಯಮಾವಳಿ:

1. ಮಕ್ಕಳ ಸುಭದ್ರತೆ, ಹಿತಕರ ಹಾಗೂ ಸಂರಕ್ಷಣೆಗೆ ವಿಶೇಷವಾದ ಗಮನವನ್ನು ನೀಡಬೇಕು.
2. ಮಕ್ಕಳಿಗಾಗಿ, ವಿಶೇಷವಾಗಿ ಹೆಣ್ಣು ಮಕ್ಕಳಿಗೆ ಪ್ರತ್ಯೇಕವಾಗಿ ಸೀಟುಗಳನ್ನು ಕಾಯ್ದಿರಿಸತಕ್ಕದ್ದು.
3. ರ್‍ಯಾಂಪ್‌ಗಳನ್ನು ಅಳವಡಿಸುವುದು ಮತ್ತು ಬ್ರೈಲ್ ಭಾಷೆಯಲ್ಲಿ ಮಾಹಿತಿಯನ್ನು ನೀಡುವ ಮೂಲಕ ವಿಶೇಷ ಸಾಮರ್ಥ್ಯವುಳ್ಳವರಿಗೆ ಸುಲಭವಾಗಿ ಉಪಯೋಗವಾಗುವುದನ್ನು ಖಾತ್ರಿಪಡಿಸಿಕೊಳ್ಳತಕ್ಕದ್ದು.

**ವ್ಯಾಖ್ಯಾನಗಳು:**

4. **'ಅಡೆತಡೆ'** ಎಂದರೆ ಸಮಾಜದಲ್ಲಿ ವಿಕಲಚೇತನ ವ್ಯಕ್ತಿಗಳ ಸಂಪೂರ್ಣ ಹಾಗೂ ಸಶಕ್ತ ಭಾಗವಹಿಸುವಿಕೆಯನ್ನು ತಡೆಯುವಂತಹ ಸಂವಹನಾತ್ಮಕ, ಸಾಂಸ್ಕೃತಿಕ, ಆರ್ಥಿಕ, ಪ್ರಾಕೃತಿಕ, ಸಾಂಸ್ಥಿಕ, ರಾಜಕೀಯ, ಸಾಮಾಜಿಕ, ಧೋರಣೆ, ಹಾಗು ಇನ್ನಿತರ ರಚನಾತ್ಮಕ ಅಂಶಗಳು.
5. **'ಪಾಲನದಾರ'** ಎಂದರೆ ಪೋಷಕರು ಮತ್ತು ಕುಟುಂಬದ ಸದಸ್ಯರನ್ನು ಒಳಗೊಂಡಂತೆ ಯಾವುದೇ ವ್ಯಕ್ತಿ ಪ್ರತಿಫಲ ಪಡೆದು ಅಥವಾ ಪಡೆಯದೆಯೇ ವಿಕಲಚೇತನ ವ್ಯಕ್ತಿಗಳಿಗೆ ಆರೈಕೆ, ಸಹಕಾರ ಅಥವಾ ಸಹಾಯಹಸ್ತವನ್ನು ಒದಗಿಸುವವರು.

6. **'ಸಂವಹನ'**ವು ಸಂವಹನದ ಸಾಧನ ಮತ್ತು ನಮೂನೆಗಳು, ಭಾಷೆಗಳು, ಅಕ್ಷರಗಳ ಪ್ರದರ್ಶನ, ಬ್ರೈಲ್, ಸ್ಪರ್ಷ ಸಂವಹನ, ಸನ್ನೆಗಳು, ದೊಡ್ಡ ಪ್ರಮಾಣದ ಮುದ್ರಣ, ಮಲ್ಟಿಮೀಡಿಯ, ಬರವಣಿಗೆ, ಆಡಿಯೋ, ವಿಡಿಯೋಗಳ ಉಪಯೋಗ, ದೃಶ್ಯ ಪ್ರದರ್ಶನ, ಸನ್ನೆ ಭಾಷೆ, ಸಾಧಾರಣ ಭಾಷೆ, ಮಾನವ ಓದುಗ, ವರ್ಧಕ ಹಾಗು ಪರ್ಯಾಯ ಮಾರ್ಗಗಳು, ಕೈಗೆಟುಕುವ ಮಾಹಿತಿ ಹಾಗೂ ಸಂವಹನ ತಂತ್ರಜ್ಞಾನಗಳನ್ನು ಒಳಗೊಳ್ಳುತ್ತದೆ.

7. **'ತಾರತಮ್ಯ'** ವಿಕಲಚೇತನತೆಗೆ ಸಂಬಂಧಿಸಿದರೆ ಗುರುತಿಸುವಿಕೆಗೆ ಅಡ್ಡಿಮಾಡಬಹುದಾದಂತಹ ಅಥವಾ ಅದರ ಕಾರಣದಿಂದ ಗುರುತಿಸುವಿಕೆಗೆ ತೊಂದರೆಯಾಗಬಹುದಾದಂತಹ ವಿಕಲಚೇತನತೆಯಾಧಾರಿತ ಯಾವುದೇ ಭಿನ್ನತೆ, ಹೊರಗಿಡುವಿಕೆ, ನಿರ್ಬಂಧ, ರಾಜಕೀಯ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ನಾಗರಿಕ ಹಾಗೂ ಇನ್ನಿತರ ಕ್ಷೇತ್ರಗಳಲ್ಲಿ ಅನ್ಯರೊಂದಿಗೆ ಮಾನವ ಹಕ್ಕುಗಳನ್ನು ಹಾಗೂ ಮೂಲಭೂತ ಸ್ವಾತಂತ್ರ್ಯಗಳನ್ನು ಸಮಾನವಾಗಿ ಚಲಾಯಿಸುವುದನ್ನು ತಡೆಯುವ ಹಾಘೂ ಎಲ್ಲಾ ರೀತಿಯ ತಾರತಮ್ಯಗಳು ಮತ್ತು ಸಮಂಜಸವಾದ ಸೌಕರ್ಯಗಳನ್ನು ನಿರಾಕರಿಸುವುದು.

8. **'ವಿಕಲಚೇತನ ವ್ಯಕ್ತಿ'** ಎಂದರೆ ಸಮಾಜದಲ್ಲಿ ಇತರರೊಂದಿಗೆ, ಅವರ ಸಂಪೂರ್ಣ ಮತ್ತು ಪರಿಣಾಮಕಾರಿ ಭಾಗವಹಿಸುವಿಕೆಗೆ ಅಡ್ಡಿಪಡಿಸುವ, ಅಡಚಣೆಯುಂಟು ಮಾಡುವ ದೀರ್ಘಕಾಲಿಕ ದೈಹಿಕ, ಮಾನಸಿಕ, ಬೌದ್ಧಿಕ, ಸಂವೇದನಶೀಲತೆಯ ಕೊರತೆ ಇರುವ ವ್ಯಕ್ತಿ.

9. **'ಸಮಂಜಸವಾದ ಸೌಕರ್ಯಗಳು'** ಎಂದರೆ ಅಗತ್ಯವಾದ ಹಾಗೂ ಸೂಕ್ತವಾದ ಮಾರ್ಪಾಡು ಮತ್ತು ಹೊಂದಾಣಿಕೆ, ಯಾವುದೇ ಕಾರಣಕ್ಕೂ ಅಸಮ ಹಾಗೂ ಅನಪೇಕ್ಷಿತ ಹೊರೆಯನ್ನು ನಿರ್ದಿಷ್ಟ ಪ್ರಕರಣದಲ್ಲಿ ವಹಿಸದೆ, ವಿಕಲಚೇತನ ವ್ಯಕ್ತಿಗಳು ಅವರ ಹಕ್ಕುಗಳನ್ನು ಅನ್ಯರಂತೆ ಸಮನಾಗಿ ಚಲಾಯಿಸುವಂತೆ ನೋಡಿಕೊಳ್ಳುವುದು

10. **'ಸಾರ್ವತ್ರಿಕ ವಿನ್ಯಾಸ'** ಎಂದರೆ ಎಲ್ಲಾ ವ್ಯಕ್ತಿಗಳಿಂದಲೂ ಅತಿಹೆಚ್ಚಿನ ಪ್ರಮಾಣದಲ್ಲಿ ಯಾವುದೇ ರೂಪಾಂತರ ಹಾಗೂ ವಿಶಿಷ್ಟವಾದ ವಿನ್ಯಾಸವಿಲ್ಲದೆ ಬಳಕೆಯಾಗುವಂತೆ ವಿನ್ಯಾಸವಾಗಿರುವ ಉತ್ಪನ್ನಗಳು, ಪರಿಸರ, ಕಾರ್ಯಕ್ರಮಗಳು ಹಾಗೂ ಸೇವೆಗಳು ಮತ್ತು ವಿಶಿಷ್ಟ ಗುಂಪಿಗೆ ಸೇರಿದ ವಿಕಲ ಚೇತನರಿಗೆ ಎಲ್ಲ ರೀತಿಯ ಮುಂದುವರೆದ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡ ಎಲ್ಲಾ ಸಹಾಯಕ ಸಾಧನಗಳ ವಿನ್ಯಾಸ

11. **'ಮಕ್ಕಳ ಮಿತ್ರ'** ಹಾಗೂ **'ಮಹಿಳಾ ಮಿತ್ರ'** ಎಂದರೆ ಆಯಾ ಗ್ರಾಮ ಪಂಚಾಯತ್‌ಗಳಲ್ಲಿ ಮಕ್ಕಳ ಮತ್ತು ಮಹಿಳಾ ಸ್ನೇಹಿ ಪಂಚಾಯತ್‌ಗಳನ್ನು ಸ್ಥಾಪಿಸಲು ಮಕ್ಕಳು ಹಾಗು ಮಹಿಳೆಯರಿಗೆ ಅವರ ಸಂಕಷ್ಟದಲ್ಲಿ ಬೆಂಬಲ ವ್ಯವಸ್ಥೆಯಾಗಿ, ಮಕ್ಕಳ ಮತ್ತು ಮಹಿಳೆಯರಿಂದಲೇ ಆಯ್ಕೆಯಾದ ಸಮುದಾಯದ ಸದಸ್ಯರು.

12. **'ದೃಢವಾದ ಕ್ರಮ'** ಎಂದರೆ ತಾರತಮ್ಯಕ್ಕೆ ಒಳಗಾಗಿರುವವರ ಪರವಾಗಿ ಕೈಗೊಳ್ಳುವ ಪೂರಕವಾದ ಕ್ರಮ

13. **'ರೇಪ್ ಕಿಟ್' ಅಥವ ಸೆಕ್ಷುವಲ್ ಅಸಾಲ್ಟ್ ಕಿಟ್'** ಫೊರೆನ್ಸಿಕ್ ನ್ಯಾಯ ಸಾಕ್ಷ್ಯವಾಗಿ ಪರಿಗಣಿಸಲ್ಪಡುತ್ತದೆ. ಇದನ್ನು ಭೌತಿಕ ಪುರಾವೆಗಳ ಪುನಶ್ಚೇತನ ಕಿಟ್ ಎಂದು ಕೂಡ ಕರೆಯಲ್ಪಡುತ್ತದೆ. ಈ ಕಿಟ್‌ನಲ್ಲಿ ಸ್ಲೈಡ್ಸ್, ಸ್ವಾಬ್ಸ್, ಅಂಚೆ ಎನ್ವೆಲಪ್, ಬಟ್ಟೆಯ ನಾರುಗಳು, ಸಾಕ್ಷಿಗಳನ್ನು ಒಟ್ಟುಹಾಕಲು ಹಾಳೆಗಳು ಮತ್ತು ಚೀಲಗಳು, ಸಂಶ್ಲೇಷಿತ ಮೂತ್ರ ಸಂಗ್ರಹಧಾರಕ, ಸಂಶ್ಲೇಷಿತ ಸ್ಯಾಂಪಲ್ ಕಲೆಕ್ಟರ್, ಕೂದಲು ಹಾಗು ನಾರುಗಳನ್ನು ತೆಗೆದುಕೊಳ್ಳಲು ಬಾಚಣಿಗೆ, ಬಿಳಿ ಹಾಳೆಗಳು, ದಾಖಲಾತಿ ನಮೂನೆಗಳು, ಲೇಬಲ್ ಮಾಡುವುದು, ಸಂಶ್ಲೇಷಿತ ನೀರಿನ ಉಪ್ಪಿನಾಂಶ, ಕೈಗವಸುಗಳು, ಭೂತಗನ್ನಡಿ, ಮುಖಕ್ಕೆ ಧರಿಸುವ ಮಾಸ್ಕ್‌ಗಳು ಮತು ತಲೆಗೆ ಧರಿಸುವ ಕ್ಯಾಪ್‌ಗಳು

14. **'ಗೃಹ ಆಧಾರಿತ ಉದ್ಯೋಗಗಳು'** ಎಂದರೆ, *(ಬಾಲ ಕಾರ್ಮಿಕ (ನಿಷೇಧ ಹಾಗೂ ನಿಯಂತ್ರಣ) ತಿದ್ದುಪಡಿ ಕಾಯ್ದೆ, 2016ರ ಪ್ರಕಾರ)* ಯಾವುದೇ ಮಕ್ಕಳು ವೃತ್ತಿ ಅಥವ ಪ್ರಕ್ರಿಯೆಯಲ್ಲಿ ಕೆಲಸ ಮಾಡಲು ಅಥವ ಕೆಲಸ ಮಾಡಲು ಅನುಮತಿಯನ್ನು ನೀಡಬಾರದು ಎಂದಿದ್ದಾಗ್ಯೂ, ಅನುಸೂಚಿ–4ರಲ್ಲಿ ಹೇಳಿರುವ ಅಪಾಯಕಾರಿಯಲ್ಲದ ಉದ್ಯೋಗಗಳು ಅಥವಾ ಪ್ರಕ್ರಿಯೆಯನ್ನು ಹೊರತುಪಡಿಸಿ ಮಕ್ಕಳು ಅವರ ಶಾಲಾ ಅವಧಿಯ ನಂತರ ಅಥವಾ ರಜಾದಿನಗಳಲ್ಲಿ ಅವರ ಕುಟುಂಬಕ್ಕೆ ಅಥವಾ ಕೌಟುಂಬಿಕ ಉದ್ಯಮಗಳಲ್ಲಿ ಸಹಾಯ ಮಾಡಬಹುದು. ಮಗುವಿಗೆ ಸಂಬಂಧಿಸಿದಂತೆ **"ಕುಟುಂಬ"** ಎಂದರೆ, ಅವನ/ಅವಳ ತಾಯಿ, ತಂದೆ, ಸಹೋದರ, ಸಹೋದರಿ ಮತ್ತು ತಂದೆಯ ಸಹೋದರಿ ಮತ್ತು ಸಹೋದರ ಮತ್ತು ತಾಯಿಯ ಸಹೋದರಿ ಮತ್ತು ಸಹೋದರ; ಹಾಗೂ **"ಕೌಟುಂಬಿಕ ಉದ್ಯಮ"** ಎಂದರೆ ಕುಟುಂಬದ ಸದಸ್ಯರು ಅನ್ಯ ವ್ಯಕ್ತಿಗಳೊಂದಿಗೆ ಸೇರಿ ಮಾಡುವ ಯಾವುದೇ ಕೆಲಸ, ವೃತ್ತಿ, ಕೈಗಾರಿಕೆ ಅಥವಾ ವ್ಯಾಪಾರ.

# ಅನುಬಂಧ – i – ಉಡುಪಿ ಜಿಲ್ಲೆಯ ಮಕ್ಕಳ ಹಕ್ಕುಗಳ ರಕ್ಷಣಾ ನಿಯಮಾವಳಿ

## ಎಲ್ಲಾ ಹಂತದ ಕಾರ್ಯಪಡೆಯ ಜವಾಬ್ದಾರಿ ನಕ್ಷೆ – ಗ್ರಾಮ ಪಂಚಾಯತ್, ತಾಲೂಕು ಮತ್ತು ಜಿಲ್ಲೆ

# ಎಲ್ಲಾ ಹಂತದ ಕಾರ್ಯಪಡೆಗಳ ಜವಾಬ್ದಾರಿ ನಕ್ಷೆ

| ವಿಷಯಗಳು | ಗ್ರಾಮ | ತಾಲೂಕು | ಜಿಲ್ಲೆ |
|---|---|---|---|
| ಕ್ಷಿಪ್ರ ಸ್ಪಂದನಾ ತಂಡ (RRT) | • ಮಕ್ಕಳ/ಮಹಿಳಾ ಮಿತ್ರರು ಪಂಚಾಯತ್ ಮಟ್ಟದಲ್ಲಿ ಮಕ್ಕಳ ಸ್ನೇಹಿ ಪರಿಸರ ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸುವುದು<br>• ಜೀತ, ಮಕ್ಕಳ ಸಾಗಣೆ, ಅಪಾಯಕಾರಿ ವಲಯದಲ್ಲಿ ಕೆಲಸ, ಪ್ರಸ್ತುತ ಇರುವ ವ್ಯವಸ್ಥೆಯಲ್ಲಿ ಲೈಂಗಿಕ ಕಾರ್ಯದಲ್ಲಿ ಮಕ್ಕಳು ತೊಡಗಿಸಿಕೊಳ್ಳುವಂತಹ ಕಾನೂನಿನ ತೀವ್ರ ಉಲ್ಲಂಘನೆ ಮತ್ತು ಶೋಷಣೆಯಾದಂತಹ ಪರಿಸ್ಥಿತಿ ಕಂಡುಬಂದಲ್ಲಿ ಅವರನ್ನು ರಕ್ಷಿಸಲು ಮಕ್ಕಳ/ಮಹಿಳಾ ಮಿತ್ರಗಳಿಗೆ ಕ್ಷಿಪ್ರ ಸ್ಪಂದನಾ ಘಟಕವು ತಕ್ಷಣ ಸ್ಪಂದಿಸುವುದು<br>• ಇಡೀ ಕುಟುಂಬವೇ ಶೋಷಿತ ಪರಿಸ್ಥಿತಿಯಲ್ಲಿ ಇರುವ ಸಂದರ್ಭದಲ್ಲಿ, ಇಡೀ ಕುಟುಂಬವನ್ನು ಅಂತಹ ಪರಿಸ್ಥಿತಿಗೆ ನಿರ್ದಿಷ್ಟವಾಗಿರುವ ಕಾನೂನು ರೀತ್ಯಾ ಸುರಕ್ಷಾ ಸ್ಥಳಕ್ಕೆ ಸ್ಥಳಾಂತರಿಸುವುದು<br>• ಕ್ಷಿಪ್ರ ಸ್ಪಂದನಾ ತಂಡವು ಕೈಗೊಂಡ ಕ್ರಮಗಳ ಬಗ್ಗೆ ಹಾಗೂ ಕಾರ್ಯಪಡೆಯು ಕೈಗೊಳ್ಳಬೇಕಾದ ಮುಂದಿನ ಕ್ರಮಗಳ ಬಗ್ಗೆ ಶಿಫಾರಸ್ಸುಗಳನ್ನು ಸಂಬಂಧಪಟ್ಟ ಕಾರ್ಯಪಡೆಗೆ/ಸ್ಥಳೀಯ ಸರ್ಕಾರಕ್ಕೆ ವರದಿ ಮಾಡತಕ್ಕದ್ದು.<br>• ಆರ್.ಆರ್.ಟಿ.ಯು ಮಕ್ಕಳ/ಮಹಿಳಾ ಮಿತ್ರರ ಮತ್ತು/ಅಥವಾ ಕಾರ್ಯಪಡೆಯೊಂದಿಗೆ ಸೇರಿ ನಿರ್ವಹಿಸಿದ ಎಲ್ಲಾ ಪ್ರಕರಣಗಳ ಅಲ್ಪಾವಧಿ ಹಾಗೂ ದೀರ್ಘಾವಧಿ ಪುನರ್ವಸತಿಯು ಅಗತ್ಯವಿರುವ ಕ್ರಮಗಳನ್ನು ಮಕ್ಕಳ ಮತ್ತು ಅವರ ಪೋಷಕರ ಜೊತೆ ಸಮಾಲೋಚಿಸಿ ಹಾಗೂ ಮಕ್ಕಳ ಹಕ್ಕುಗಳನ್ನು ಎತ್ತಿಹಿಡಿಯುವ ಕಾನೂನುಗಳಂತೆ, ಅನುಸರಣೆಯನ್ನು ಮಾಡಬೇಕು<br>• ಮಕ್ಕಳ ಸಮಸ್ಯೆಗಳಿಗೆ ಸಂಬಂಧಿಸಿದ ವಿಷಯಗಳನ್ನು ಸಂಗ್ರಹಿಸಲು ಮತ್ತು ಪರಿಹಾರ ಮಾಡುವಲ್ಲಿ ಕ್ಷಿಪ್ರ ಸ್ಪಂದನಾ ಘಟಕವು ಪಂಚಾಯತ್ ಕಾರ್ಯಪಡೆ ಮತ್ತು ಮಕ್ಕಳ/ಮಹಿಳಾ ಮಿತ್ರರಿಗೆ ಸಹಕಾರ ನೀಡುವುದು<br>• ತುರ್ತು ಸಂದರ್ಭದಲ್ಲಿ, ಕ್ಷಿಪ್ರ ಸ್ಪಂದನಾ ತಂಡವು ಮಕ್ಕಳ ಮಿತ್ರ, ಮಹಿಳಾ ಮಿತ್ರ ಮತ್ತು ಪಂಚಾಯತ್ ಕಾರ್ಯಪಡೆಯನ್ನು ಅಗ್ನಿಶ್ಯಾಮಕದಳ, ಪೋಲೀಸ್, ಸ್ಥಳೀಯ ಆಸ್ಪತ್ರೆ ಮತ್ತು ಮಕ್ಕಳ ಮಿತ್ರ, ಮಹಿಳಾ ಮಿತ್ರ | • ಜೀತ, ಮಕ್ಕಳ ಸಾಗಣೆ, ಅಪಾಯಕಾರಿ ವಲಯದಲ್ಲಿ ಕೆಲಸ, ಪ್ರಸ್ತುತ ಇರುವ ವ್ಯವಸ್ಥೆಯಲ್ಲಿ ಲೈಂಗಿಕ ಕಾರ್ಯದಲ್ಲಿ ಮಕ್ಕಳು ತೊಡಗಿಸಿಕೊಳ್ಳುವಂತಹ ಕಾನೂನಿನ ತೀವ್ರ ಉಲ್ಲಂಘನೆ ಮತ್ತು ಶೋಷಣೆಯಾದಂತಹ ಪರಿಸ್ಥಿತಿ ಕಂಡುಬಂದಲ್ಲಿ ಅವರನ್ನುರಕ್ಷಿಸಲು ಮತ್ತು ಅವರಿಗೆ ಸುರಕ್ಷಿತ ಆಶ್ರಯ ನೀಡಲು ಗ್ರಾಮ ಪಂಚಾಯತ್ ಮಟ್ಟದಲ್ಲಿ ಕಾರ್ಯನಿರ್ವಹಿಸುವ ಮಕ್ಕಳು/ ಮಹಿಳಾ ಮಿತ್ರ ಮತ್ತು ಕಾರ್ಯಪಡೆಗಳಿಗೆ ಸಹಕರಿಸುವುದು.<br>• ಅಗತ್ಯವೆನಿಸಿದಾಗ ರಕ್ಷಿಸಿದಂತಹ ಮಕ್ಕಳ ಸಮಾಲೋಚನೆ ಮತ್ತು ವೈದ್ಯಕೀಯ ನೆರವಿನ ವ್ಯವಸ್ಥೆ ಮಾಡಲು ಸಹಕರಿಸುವುದು.<br>• ಪುನರ್ವಸತಿ ಪ್ರಕ್ರಿಯೆಯಲ್ಲಿ ಪಂಚಾಯತ್ ಮಟ್ಟದಲ್ಲಿರುವ ಮಕ್ಕಳ/ಮಹಿಳಾ ಮಿತ್ರರು ಮತ್ತು ಕಾರ್ಯಪಡೆಗಳಿಗೆ ಸಹಕರಿಸುವುದು.<br>• ಪಂಚಾಯತ್ ಮಟ್ಟದಲ್ಲಿದಲ್ಲಿರುವ ಮಕ್ಕಳ/ಮಹಿಳಾ ಮಿತ್ರ ಮತ್ತು ಕಾರ್ಯಪಡೆಗಳಿಗೆ ಸಹಕಾರ ನೀಡುವಲ್ಲಿ ಜಿಲ್ಲಾ ಕ್ಷಿಪ್ರ ಸ್ಪಂದನಾ ತಂಡದೊಂದಿಗೆ ಸಂಯೋಜನೆ ನಡೆಸುವುದು.<br>• ಪಂಚಾಯತ್ ಮಟ್ಟದಲ್ಲಿರುವ ಮಕ್ಕಳ/ಮಹಿಳಾ ಮಿತ್ರರಿಗೆ ಮತ್ತು ಕಾರ್ಯಪಡೆಗಳಿಗೆ ಮಕ್ಕಳನ್ನು ರಕ್ಷಿಸಲು ಎಲ್ಲಾ ಸೌಲಭ್ಯಗಳನ್ನು ಒದಗಿಸುವುದನ್ನು ಖಾತ್ರಿ ಪಡಿಸುವುದು.<br>• ಮಕ್ಕಳ ವಿಷಯಗಳಿಗೆ ಸಂಬಂಧಿಸಿದ ಮಾಹಿತಿ ಸಂಗ್ರಹ ಮತ್ತು ಸಮಸ್ಯೆ ಪರಿಹಾರಕ್ಕಾಗಿ ತಾಲೂಕು ಕಾರ್ಯಪಡೆಗೆ ಸಹಕರಿಸುವುದು.<br>• ಕ್ಷಿಪ್ರ ಸ್ಪಂದನಾ ತಂಡಕ್ಕೆ ಹಾಗೂ ಅಗ್ನಿಶಾಮಕದಳ, ಪೋಲೀಸ್, ಸ್ಥಳೀಯ ಆಸ್ಪತ್ರೆಗಳು ಮತ್ತು ಮಕ್ಕಳ ಮಿತ್ರರು, ಮಹಿಳಾ ಮಿತ್ರರು ಮುಂತಾದ ತುರ್ತು ಸೇವೆಗಳೊಂದಿಗೆ ಸಂಪರ್ಕ ವ್ಯವಸ್ಥೆ ಇರತಕ್ಕದ್ದು<br>• ತಾಲೂಕು ಮಟ್ಟದ ಕ್ಷಿಪ್ರ ಸ್ಪಂದನಾ ತಂಡಕ್ಕೆ ನೀಡಿದ ಸೌಲಭ್ಯಗಳನ್ನು ನಿರ್ವಹಿಸುವುದು.<br>• ವಿಚಾರಣೆಗೆ ಒಳಪಡಿಸಬಹುದಾದ ಅಪರಾಧಗಳಿದ್ದರೆ, ಅಂತಹವುಗಳನ್ನು ಕ್ಷಿಪ್ರ ಸ್ಪಂದನಾ ತಂಡವು ಸೂಕ್ತ ಅಧಿಕಾರಿಗಳಿಗೆ ವರದಿ ಮಾಡುವುದು ಮತ್ತು ಪೋಲಿಸ್ ಇಲಾಖೆಯಲ್ಲಿ ಪ್ರಥಮ ಮಾಹಿತಿ ವರದಿ ದಾಖಲಾಗುವಂತೆ ನೋಡಿಕೊಳ್ಳುವುದು.<br>• ತುರ್ತು ಸಂದರ್ಭದಲ್ಲಿ ಸಂಬಂಧಿಸಿದ ಎಲ್ಲಾ ಇಲಾಖೆಗಳನ್ನು ಕ್ಷಿಪ್ರ ಸ್ಪಂದನಾ | • ಪಂಚಾಯತ್ ಮತ್ತು ತಾಲೂಕು ಮಟ್ಟದಲ್ಲಿ ಮಕ್ಕಳ ರಕ್ಷಣಾತ್ಮಕ ವ್ಯವಸ್ಥೆಗಳನ್ನು ಸ್ಥಾಪಿಸಲು ಸಹಕರಿಸುವುದು<br>• ತುರ್ತು ಸಂದರ್ಭದಲ್ಲಿ ಅಗತ್ಯವಿರುವ ಸುರಕ್ಷಿತ ಆಶ್ರಯಗಳು ಮತ್ತು ಸೌಲಭ್ಯಗಳನ್ನು ಒದಗಿಸಲು ಸಂಯೋಜಿಸುವುದು<br>• ಅಗತ್ಯವಿರುವಾಗ ರಕ್ಷಿತ ಮಗುವಿಗೆ ಸಮಾಲೋಚನೆ ವೈದ್ಯಕೀಯ ಸಹಾಯ ನೀಡುವಲ್ಲಿ ಸಹಕರಿಸುವುದು<br>• ತುರ್ತು ಸಂದರ್ಭದಲ್ಲಿ, ಕ್ಷಿಪ್ರ ಸ್ಪಂದನಾ ತಂಡವು ಮಕ್ಕಳ ಮಿತ್ರ; ಮಹಿಳಾ ಮಿತ್ರರು ಮತ್ತು ಪಂಚಾಯತ್/ತಾಲೂಕು ಕಾರ್ಯಪಡೆ/ತಾಲೂಕು ಕ್ಷಿಪ್ರ ಸ್ಪಂದನಾತಂಡಗಳನ್ನು ಅಗ್ನಿಶ್ಯಾಮಕದಳ, ಪೋಲೀಸ್, ಸ್ಥಳೀಯ ಆಸ್ಪತ್ರೆ ಹಾಗೂ ಮಕ್ಕಳ ಮಿತ್ರ, ಮಹಿಳಾ ಮಿತ್ರ ಮುಂತಾದ ತುರ್ತು ಸೇವೆಗಳೊಂದಿಗೆ ಸಂಪರ್ಕಿಸುವುದು.<br>• ಪಂಚಾಯತ್ ಮಟ್ಟದಲ್ಲಿ ಮಕ್ಕಳ ರಕ್ಷಣೆ ವ್ಯವಸ್ಥೆಗಾಗಿ (ಮಕ್ಕಳ/ಮಹಿಳಾ ಮಿತ್ರ ವ್ಯವಸ್ಥೆ, ಪಂಚಾಯತ್ ಕಾರ್ಯಪಡೆ) ತಾಲೂಕು ಕ್ಷಿಪ್ರ ಸ್ಪಂದನಾ ತಂಡದೊಂದಿಗೆ ಸಂಯೋಜನೆ ನಡೆಸುವುದು.<br>• ಮಕ್ಕಳ ವಿಷಯಗಳಿಗೆ ಸಂಬಂಧಿಸಿದ ಮಾಹಿತಿ ಸಂಗ್ರಹ ಮತ್ತು ಸಮಸ್ಯೆಗಳ ಪರಿಹಾರಕ್ಕಾಗಿ ಜಿಲ್ಲಾ ಕಾರ್ಯಪಡೆಗೆ ಸಹಕರಿಸುವುದು.<br>• ಕ್ಷಿಪ್ರ ಸ್ಪಂದನಾ ತಂಡವು ಕೈಗೊಂಡ ಕ್ರಮಗಳ ಬಗ್ಗೆ ಹಾಗೂ ಕಾರ್ಯಪಡೆಯು ಕೈಗೊಳ್ಳಬೇಕಾದ ಮುಂದಿನ ಕ್ರಮಗಳ ಬಗ್ಗೆ ಶಿಫಾರಸ್ಸುಗಳನ್ನು ಸಂಬಂಧಪಟ್ಟ ಕಾರ್ಯಪಡೆಗೆ/ಸ್ಥಳೀಯ ಸರ್ಕಾರಕ್ಕೆ ವರದಿ ಮಾಡತಕ್ಕದ್ದು.<br>• ಜಿಲ್ಲಾ ಮಟ್ಟದ ಕ್ಷಿಪ್ರ ಸ್ಪಂದನಾ ತಂಡಕ್ಕೆ ನೀಡಿದ ಸೌಲಭ್ಯಗಳನ್ನು ನಿರ್ವಹಿಸುವುದು. |

| | | | |
|---|---|---|---|
| | ಇತ್ಯಾದಿಗಳೊಂದಿಗೆ ಎಲ್ಲಾ ತುರ್ತು ಸೇವೆಗಾಗಿ ಜೋಡಿಸುವುದು. | ತಂಡದೊಂದಿಗೆ ಸಂಪರ್ಕಿಸುವುದು, ಆ ಇಲಾಖೆಗಳು ವಾಹನವನ್ನು ಒದಗಿಸುವುದರೊಂದಿಗೆ ಎಲ್ಲಾ ಅಗತ್ಯ ಸಹಕಾರಗಳನ್ನು ಸಕಾಲಕ್ಕೆ ಸರಿಯಾಗಿ ನೀಡುವುದು ಮತ್ತು ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳುವುದು | |
| **ಮಕ್ಕಳ ಸಹಾಯವಾಣಿ** | • ಜಿಲ್ಲಾಡಳಿತವು ಪರಿಚಯಿಸಿದ ಉಚಿತ ಕರೆ ಸೌಲಭ್ಯವಿರುವ ಮಕ್ಕಳ ಹಕ್ಕುಗಳ ರಕ್ಷಣಾ ಸಹಾಯವಾಣಿಯ ಪ್ರಚಾರ.<br>• ಮಕ್ಕಳ/ಮಹಿಳಾ ಮಿತ್ರರ ಸಂಪರ್ಕಕ್ಕೆ ಮಕ್ಕಳ ಅಂಚೆ ಪೆಟ್ಟಿಗೆಯಂತಹ ಪರ್ಯಾಯ ಸಂಪರ್ಕ ವ್ಯವಸ್ಥೆ ಅಳವಡಿಸಬೇಕು.<br>• ಪಂಚಾಯತ್ ಮಟ್ಟದ ಎಲ್ಲಾ ಮಕ್ಕಳಿಗೆ ಮಕ್ಕಳ ಸಹಾಯವಾಣಿಯ ಸಂಖ್ಯೆ, ಮಕ್ಕಳ/ಮಹಿಳಾ ಮಿತ್ರರ ಸಂಪರ್ಕ ಸಂಖ್ಯೆಯನ್ನು ಪರಿಚಯಿಸುವುದು.<br>• ಆಯಾ ಗ್ರಾಮ ಪಂಚಾಯತ್ ಸಂಬಂಧಿಸಿದಂತೆ ಮಕ್ಕಳ/ಮಹಿಳಾ ಮಿತ್ರ ಮತ್ತು ಮಕ್ಕಳ ಅಂಚೆಪೆಟ್ಟಿಗೆ ಮೂಲಕ ಬಂದ ಸಮಸ್ಯೆಗಳು, ದೂರವಾಣಿ ಕರೆಗಳನ್ನು ದಾಖಲಿಸಿ ಅದನ್ನು ನಿರ್ವಹಿಸುವುದು ಮತ್ತು ನಿಭಾಯಿಸುವುದು.<br>• ಮಕ್ಕಳ ಸಹಾಯವಾಣಿಯ ಮೂಲಕ ಸ್ವೀಕರಿಸಿದ ಕರೆಗಳ ಕುರಿತಾದ ವರದಿಯನ್ನು ತಕ್ಷಣ ಸಂಬಂಧಿಸಿದ ಆರ್.ಆರ್.ಟಿ ಮತ್ತು ಕಾರ್ಯಪಡೆಗೆ ತಲುಪಿಸಬೇಕು.<br>• ಮಕ್ಕಳ ಸಹಾಯವಾಣಿಯ ಮೂಲಕ ಕೇಳಿದ ಮಾಹಿತಿಯನ್ನು ಒದಗಿಸುವುದು.<br>• 'ಚೈಲ್ಡ್ ವರ್ಕರ್ಸ್ ಹಾಟ್ ಲೈನ್' ಮತ್ತು ಕ್ಷಿಪ್ರ ಸ್ಪಂದನಾ ತಂಡದ ಸಂಪರ್ಕ ಸಂಖ್ಯೆಗಳನ್ನು ಕೆಲಸ ಮಾಡುವ ಸ್ಥಳಗಳಲ್ಲಿ ಹಾಕುವಂತೆ ಕಾರ್ಯಪಡೆಗಳು ಪಂಚಾಯತ್‌ಗಳನ್ನು ಕೇಳುವುದು. | • ಮಕ್ಕಳ ಸಹಾಯವಾಣಿಯ ಸಂಖ್ಯೆ, ಮಕ್ಕಳ/ಮಹಿಳಾ ಮಿತ್ರರ ಸಂಪರ್ಕ ವಿವರಗಳನ್ನು ತಾಲೂಕಿನ ಎಲ್ಲಾ ಪ್ರದೇಶದಲ್ಲಿರುವ ಮಕ್ಕಳಿಗೆ ಪರಿಚಯಿಸುವುದು.<br>• ತಾಲೂಕು ವ್ಯಾಪ್ತಿಯಲ್ಲಿರುವ ಮಕ್ಕಳ ಸಹಾಯವಾಣಿ ಮತ್ತು ಮಕ್ಕಳ ರಕ್ಷಣಾ ವ್ಯವಸ್ಥೆ ಬಗ್ಗೆ ಪ್ರಚಾರ<br>• ತಾಲೂಕು ಮಟ್ಟದ ಎಲ್ಲಾ ಸಾರ್ವಜನಿಕ ಸ್ಥಳಗಳಲ್ಲಿ ಮತ್ತು ಶಾಲೆಗಳಲ್ಲಿ ಮಕ್ಕಳ ಸಹಾಯವಾಣಿ ಸಂಖ್ಯೆ ಮತ್ತು ತುರ್ತು ಸಂಪರ್ಕ ಸಂಖ್ಯೆಗಳನ್ನು ಹಾಕುವುದು.<br>• ಮಕ್ಕಳ ಸಹಾಯವಾಣಿಯ ಮೂಲಕ ಕೇಳಿದ ಮಾಹಿತಿಯನ್ನು ಒದಗಿಸುವುದು.<br>• ಮಕ್ಕಳ ಸಹಾಯವಾಣಿಯ ಮೂಲಕ ಸ್ವೀಕರಿಸಿದ ಕರೆಗಳ ಕುರಿತಾದ ವರದಿಯನ್ನು ತಕ್ಷಣ ಸಂಬಂಧಿಸಿದ ಆರ್.ಆರ್.ಟಿ ಮತ್ತು ಕಾರ್ಯಪಡೆಗೆ ತಲುಪಿಸಬೇಕು.<br>• ದೂರವಾಣಿ ಕರೆಗಳ ದಾಖಲೆಗಳ ನಿರ್ವಹಣೆ, ನಿಭಾವಣೆ ಮತ್ತು ಅದರ ಕ್ರೋಢೀಕರಣ | • ದಿನದ 24 ಗಂಟೆಯೂ ಕಾರ್ಯನಿರ್ವಹಿಸುವ ಮಕ್ಕಳ ಹಕ್ಕುಗಳ ರಕ್ಷಣಾ ಸಹಾಯವಾಣಿಯನ್ನು ಜಿಲ್ಲಾಡಳಿತವು ಸ್ಥಾಪನೆ ಮಾಡುವುದು.<br>• ಮಕ್ಕಳ ಸಹಾಯವಾಣಿಯ ಸ್ಥಾಪನೆ ಮತ್ತು ನಿರ್ವಹಣೆ<br>• ತಾಲೂಕು ಮತ್ತು ಪಂಚಾಯತ್ ಮಟ್ಟದ ಕ್ಷಿಪ್ರ ಸ್ಪಂದನಾ ತಂಡ ಮತ್ತು ಕಾರ್ಯಪಡೆಗಳೊಂದಿಗೆ ಸಂಪರ್ಕ ಜೋಡಿಸುವುದು.<br>• ಜಿಲ್ಲಾ ವ್ಯಾಪ್ತಿಯಲ್ಲಿರುವ ಮಕ್ಕಳ ಸಹಾಯವಾಣಿ ಮತ್ತು ಮಕ್ಕಳ ರಕ್ಷಣಾ ವ್ಯವಸ್ಥೆಗಳ ಬಗ್ಗೆ ಪ್ರಚಾರ<br>• ಜಿಲ್ಲಾ ಮಟ್ಟದಲ್ಲಿ ಎಲ್ಲಾ ಸಾರ್ವಜನಿಕ ಸ್ಥಳಗಳಲ್ಲಿ ಮತ್ತು ಶಾಲೆಗಳಲ್ಲಿ ಮಕ್ಕಳು ಸುಲಭವಾಗಿ ಉಪಯೋಗಿಸುವಂತಹ ಸ್ಥಳಗಳಲ್ಲಿ ಮಕ್ಕಳ ಸಹಾಯವಾಣಿ ಸಂಖ್ಯೆ ಮತ್ತು ತುರ್ತು ಸಂಪರ್ಕ ಸಂಖ್ಯೆಗಳನ್ನು ಹಾಕುವುದು. |

## ಎಲ್ಲಾ ಹಂತದ ಕಾರ್ಯಪಡೆಗಳ ಜವಾಬ್ದಾರಿ ನಕ್ಷೆ

| | | | |
|---|---|---|---|
| **ಸುರಕ್ಷಿತ ಉದ್ಯೋಗ ಮೇಲ್ವಿಚಾರಣೆ** | • ಸುರಕ್ಷಿತ ಉದ್ಯೋಗದ ಸ್ಥಳಗಳನ್ನು ಗುರುತಿಸುವುದು.<br>• ಕೆಲಸದ ಸ್ಥಳಗಳಲ್ಲಿ ಮಕ್ಕಳು ಮತ್ತು ಮಕ್ಕಳ ಸಂಘಗಳ ಅರ್ಥಪೂರ್ಣ ಭಾಗವಹಿಸುವಿಕೆಯೊಂದಿಗೆ ಜಿಲ್ಲಾ ಮಕ್ಕಳ ಹಕ್ಕುಗಳ ರಕ್ಷಣಾ ನಿಯಮಾವಳಿಯ ಅನುಷ್ಠಾನದ ಬಗ್ಗೆ ಮೇಲ್ವಿಚಾರಣೆ ಮಾಡುವುದು.<br>• ಮಕ್ಕಳ ಹಕ್ಕುಗಳ ರಕ್ಷಣಾ ನಿಯಮಾವಳಿಯ ಅಲ್ಪಾವಧಿ ಮತ್ತು ದೀರ್ಘಾವಧಿಯ ಅನುಸರಣೆಗಳ ಮೇಲ್ವಿಚಾರಣೆ.<br>• ಮಕ್ಕಳಿಗಾಗಿ ಸುರಕ್ಷಿತ ಮತ್ತು ಸೂಕ್ಷ್ಮಗ್ರಾಹಿ ವಾತಾವರಣ ಸೃಷ್ಟಿಸುವುದು.<br>• ಪರಿಸ್ಥಿತಿಗಳ ಕುರಿತಾಗಿ ಸಂಬಂಧಪಟ್ಟ ಕಾರ್ಯಪಡೆಗೆ ವರದಿ ನೀಡುವುದು.<br>• ಕೆಲಸದ ಸ್ಥಳಗಳಲ್ಲಿ, ಕಾಳಜಿ ಮತ್ತು ರಕ್ಷಣೆ ನೀಡುವ ಸಂಸ್ಥೆಗಳಲ್ಲಿ ಮತ್ತು ಸೇವೆಗಳಲ್ಲಿ ಮಕ್ಕಳಿಗೆ ಒದಗಿಸಿದ ಸೌಲಭ್ಯಗಳ ಬಗ್ಗೆ ಮೇಲ್ವಿಚಾರಣೆ ನಡೆಸುವುದು. | • ಸುರಕ್ಷಿತ ಉದ್ಯೋಗದ ಸ್ಥಳಗಳನ್ನು ಗುರುತಿಸುವುದು.<br>• ಕೆಲಸದ ಸ್ಥಳಗಳಲ್ಲಿ ಮಕ್ಕಳು ಮತ್ತು ಮಕ್ಕಳ ಸಂಘಗಳ ಅರ್ಥಪೂರ್ಣ ಭಾಗವಹಿಸುವಿಕೆಯೊಂದಿಗೆ ಜಿಲ್ಲಾ ಮಕ್ಕಳ ಹಕ್ಕುಗಳ ರಕ್ಷಣಾ ನಿಯಮಾವಳಿಯ ಅನುಷ್ಠಾನದ ಬಗ್ಗೆ ಮೇಲ್ವಿಚಾರಣೆ ಮಾಡುವುದು.<br>• ಮಕ್ಕಳಿಗಾಗಿ ಸುರಕ್ಷಿತ ಮತ್ತು ಸೂಕ್ಷ್ಮಗ್ರಾಹಿ ವಾತಾವರಣ ಸೃಷ್ಟಿಸುವುದು.<br>• ಅನುಷ್ಠಾನ ಪ್ರಕ್ರಿಯೆಯ ಸುಗಮ ಕಾರ್ಯನಿರ್ವಹಣೆಗಾಗಿ ಪಂಚಾಯತ್ ಕಾರ್ಯಪಡೆಗೆ ಸಹಕಾರ<br>• ಪರಿಸ್ಥಿತಿಗಳ ಕುರಿತಾಗಿ ಸಂಬಂಧಪಟ್ಟ ಕಾರ್ಯಪಡೆಗೆ ವರದಿ ನೀಡುವುದು. | • ಸುರಕ್ಷಿತ ಉದ್ಯೋಗದ ಸ್ಥಳಗಳನ್ನು ಗುರುತಿಸುವುದು.<br>• ಕೆಲಸದ ಸ್ಥಳಗಳಲ್ಲಿ ಮಕ್ಕಳು ಮತ್ತು ಮಕ್ಕಳ ಸಂಘಗಳ ಅರ್ಥಪೂರ್ಣ ಭಾಗವಹಿಸುವಿಕೆಯೊಂದಿಗೆ ಜಿಲ್ಲಾ ಮಕ್ಕಳ ಹಕ್ಕುಗಳ ರಕ್ಷಣಾ ನಿಯಮಾವಳಿಯ ಅನುಷ್ಠಾನದ ಬಗ್ಗೆ ಮೇಲ್ವಿಚಾರಣೆ ಮಾಡುವುದು.<br>• ಸ್ವಯಂ ಉದ್ಯೋಗ ಮಾರ್ಗಸೂಚಿಗಳ ಅಭಿವೃದ್ಧಿಪಡಿಸುವುದು ಮತ್ತು ಅವುಗಳ ಸ್ಥಾಪನೆಗೆ ಮಾನದಂಡಗಳನ್ನು ರಚಿಸುವುದು.<br>• ಅನುಷ್ಠಾನ ಪ್ರಕ್ರಿಯೆಯ ಸುಗಮ ಕಾರ್ಯನಿರ್ವಹಣೆಗಾಗಿ ಪಂಚಾಯತ್ ಕಾರ್ಯಪಡೆ ಮತ್ತು ತಾಲೂಕು ಕಾರ್ಯಪಡೆಗೆ ಸಹಕಾರ<br>• ಎಲ್ಲಾ ಹಂತಗಳಲ್ಲಿ ಸುರಕ್ಷಿತ ವಾತಾವರಣ ಕಲ್ಪಿಸಿದ ಉದ್ಯೋಗದಾತರನ್ನು ಗುರುತಿಸುವುದು ಮತ್ತು ಅವರಿಗೆ ಪ್ರಶಸ್ತಿಯನ್ನು ನೀಡುವುದು<br>• ಪರಿಸ್ಥಿತಿಗಳ ಕುರಿತಾಗಿ ಸಂಬಂಧಪಟ್ಟವರಿಗೆ ವರದಿ ನೀಡುವುದು.<br>• ಮಕ್ಕಳ ಸ್ನೇಹಿ ಸ್ವಯಂ ಉದ್ಯೋಗ ಸಂಸ್ಥೆಗಳನ್ನು ಗುರುತಿಸುವುದು, ಪ್ರಮಾಣೀಕೃತಗೊಳಿಸಿ ಬಹುಮಾನ ನೀಡಿ ಗೌರವಿಸುವುದು. |

# ಎಲ್ಲಾ ಹಂತದ ಕಾರ್ಯಪಡೆಗಳ ಜವಾಬ್ದಾರಿ ನಕ್ಷೆ

| | | | |
|---|---|---|---|
| **ಶಿಕ್ಷಣ** | • ಮಕ್ಕಳ ಹಕ್ಕುಗಳ ಸ್ನೇಹಿ ವಾತಾವರಣ ರೂಪಿಸುವ ಜಿಲ್ಲಾ ನಿಯಂತ್ರಣ ಕಾಯ್ದೆಯ ಕುರಿತಾಗಿ ಜಾಗೃತಿ ಮೂಡಿಸುವುದು. ಮತ್ತು ಮಕ್ಕಳ ಹಕ್ಕುಗಳ ರಕ್ಷಣಾ ನಿಯಮಾವಳಿಗಳ ಪ್ರಚಾರ.<br>• ಈಗಾಗಲೇ ಆಯಾ ಹಂತಗಳಲ್ಲಿರುವ ಮಕ್ಕಳ ರಕ್ಷಣಾ ವ್ಯವಸ್ಥೆಗಳ ಬಗ್ಗೆ ಜಾಗೃತಿ ಮೂಡಿಸುವುದು.<br>• ಆಯಾ ಪಂಚಾಯತ್‌ಗಳಲ್ಲಿ ಮಕ್ಕಳ ಮತ್ತು ಅವರ ಹಕ್ಕುಗಳ ರಕ್ಷಣೆಯನ್ನು ಖಾತ್ರಿಪಡಿಸಿಕೊಳ್ಳಲು ಕಾರ್ಯತಂತ್ರಗಳ ಚೌಕಟ್ಟು ಮತ್ತು ಸೌಲಭ್ಯಗಳನ್ನು ರೂಪಿಸುವುದು.<br>• ಮಕ್ಕಳ ಹಕ್ಕುಗಳ ಸ್ನೇಹಿ ಪರಿಸರವನ್ನು ರಚಿಸಲು ಗ್ರಾಮ ಪಂಚಾಯತ್‌ಗಳ ಜೊತೆ ಕಾರ್ಯಕ್ರಮಗಳನ್ನು ರೂಪಿಸುವುದು.<br>• ಪೋಷಕರಿಗೆ ಶಿಕ್ಷಣದ ಬಗ್ಗೆ ಸಂವೇದನಾತ್ಮಕ ಅರಿವು ಮೂಡಿಸಲು ಗ್ರಾಮ ಪಂಚಾಯತ್‌ಗಳಿಗೆ ಸಹಕಾರ<br>• ಮಕ್ಕಳ ಸಬಲೀಕರಣ, ಅವರ ಮುಂದಾಳತ್ವ ಮತ್ತು ಎಲ್ಲರಿಗೂ ಹಕ್ಕು ಆಧಾರಿತ ಶಿಕ್ಷಣವನ್ನು ಖಾತ್ರಿಪಡಿಸುವುದು ಮತ್ತು ಪ್ರೋತ್ಸಾಹಿಸುವುದು<br>• ಔಪಚಾರಿಕ ಶಿಕ್ಷಣದೊಂದಿಗೆ ವೃತ್ತಿಪರ ಶಿಕ್ಷಣವನ್ನು ಮೇಳೈಸಲು ಪ್ರೋತ್ಸಾಹ.<br>• ವೃತ್ತಿಪರ ಶಿಕ್ಷಣಕ್ಕೆ ವಿದ್ಯಾರ್ಥಿಗಳು ಹಾಗೂ ಮಕ್ಕಳನ್ನು ಗುರುತು ಹಾಕುವುದು. | • ಮಕ್ಕಳ ಹಕ್ಕುಗಳ ಸ್ನೇಹಿ ವಾತಾವರಣ ರೂಪಿಸುವ ಜಿಲ್ಲಾ ನಿಯಂತ್ರಣ ಕಾಯ್ದೆಯ ಕುರಿತಾಗಿ ಜಾಗೃತಿ ಮೂಡಿಸುವುದು. ಮತ್ತು ಮಕ್ಕಳ ಹಕ್ಕುಗಳ ರಕ್ಷಣಾ ನಿಯಮಾವಳಿಗಳ ಕುರಿತು ತಾಲೂಕು ಮಟ್ಟದಲ್ಲಿ ಪ್ರಚಾರ.<br>• ಈಗಾಗಲೇ ಆಯಾ ಹಂತಗಳಲ್ಲಿರುವ ಮಕ್ಕಳ ಹಕ್ಕುಗಳ ರಕ್ಷಣಾ ವ್ಯವಸ್ಥೆಗಳ ಬಗ್ಗೆ ಜಾಗೃತಿ ಮೂಡಿಸುವುದು.<br>• ಆಯಾ ತಾಲೂಕುಗಳಲ್ಲಿ ಮಕ್ಕಳ ಮತ್ತು ಅವರ ಹಕ್ಕುಗಳ ರಕ್ಷಣೆಯನ್ನು ಖಾತ್ರಿಪಡಿಸಿಕೊಳ್ಳಲು ಕಾರ್ಯತಂತ್ರಗಳ ಚೌಕಟ್ಟು ಮತ್ತು ಸೌಲಭ್ಯಗಳನ್ನು ರೂಪಿಸುವುದು.<br>• ಮಕ್ಕಳ/ಮಹಿಳಾ ಮಿತ್ರರಿಗೆ, ಕ್ಷಿಪ್ರ ಸ್ಪಂದನಾ ತಂಡಕ್ಕೆ ಮತ್ತು ಮಕ್ಕಳ ಸಹಾಯವಾಣಿ ಘಟಕಕ್ಕೆ ಸಾಮರ್ಥ್ಯಾಭಿವೃದ್ಧಿ ಕಾರ್ಯಕ್ರಮಗಳನ್ನು ನಡೆಸಲು ಗ್ರಾಮ ಪಂಚಾಯತ್ ಕಾರ್ಯಪಡೆಗೆ ಸಹಕಾರ ನೀಡುವುದು.<br>• ಮಕ್ಕಳ ಸಬಲೀಕರಣ, ಅವರ ಮುಂದಾಳತ್ವ ಮತ್ತು ಹಕ್ಕು ಆಧಾರಿತ ನಡೆಗಳ ಉತ್ತಮ ಆಚರಣೆಗಳನ್ನು ಗುರುತಿಸುವುದು ಮತ್ತು ತಳಮಟ್ಟದಲ್ಲಿ ಅಭಿವೃದ್ಧಿ ಪಡಿಸಿದ ಮಾನದಂಡಗಳ ಆಧಾರದಲ್ಲಿ ಅಂತಹ ಆಚರಣೆಗಳನ್ನು ಪುರಸ್ಕರಿಸುವುದು. | • ಜಿಲ್ಲಾ ಮಟ್ಟದಲ್ಲಿ ಮಕ್ಕಳ ಮತ್ತು ಅವರ ಹಕ್ಕುಗಳ ರಕ್ಷಣೆಯನ್ನು ಖಾತ್ರಿಪಡಿಸಿಕೊಳ್ಳಲು ಕಾರ್ಯತಂತ್ರಗಳ ಚೌಕಟ್ಟು ಮತ್ತು ಸೌಲಭ್ಯಗಳನ್ನು ರೂಪಿಸುವುದು.<br>• ಗ್ರಾಮ ಪಂಚಾಯತ್ ಕಾರ್ಯಪಡೆ ಮತ್ತು ತಾಲೂಕು ಮಟ್ಟದ ಕಾರ್ಯಪಡೆ ಮಕ್ಕಳ ಹಕ್ಕುಗಳ ಸ್ನೇಹಿ ವಾತಾವರಣ ರೂಪಿಸುವ ಜಿಲ್ಲಾ ನಿಯಂತ್ರಣ ಕಾಯ್ದೆಯ ಕುರಿತಾಗಿ ಜಾಗೃತಿ ಮೂಡಿಸಲು ಸಂಬಂಧಿಸಿದ ಸಾಮಗ್ರಿಗಳನ್ನು ಹೊಂದಲು ಸೌಕರ್ಯಕಾರಿಕೆ ಮಾಡುವುದು ಮತ್ತು ಮಕ್ಕಳ ಹಕ್ಕುಗಳ ರಕ್ಷಣಾ ನಿಯಮಾವಳಿಗಳ ಪ್ರಚಾರ.<br>• ಈಗಾಗಲೇ ಆಯಾ ಹಂತಗಳಲ್ಲಿರುವ ಮಕ್ಕಳ ಹಕ್ಕುಗಳ ರಕ್ಷಣಾ ವ್ಯವಸ್ಥೆಗಳ ಬಗ್ಗೆ ಜಾಗೃತಿ ಮೂಡಿಸುವುದು.<br>• ಮಕ್ಕಳ/ಮಹಿಳಾ ಮಿತ್ರರಿಗೆ, ಕ್ಷಿಪ್ರ ಸ್ಪಂದನಾ ತಂಡಕ್ಕೆ ಮತ್ತು ಮ್ಕಕಳ ಸಹಾಯವಾಣಿ ಘಟಕಕ್ಕೆ ಸಾಮರ್ಥ್ಯಾಭಿವೃದ್ಧಿ ಕಾರ್ಯಕ್ರಮಗಳನ್ನು ನಡೆಸಲು ಗ್ರಾಮ ಪಂಚಾಯತ್ ಕಾರ್ಯಪಡೆ ಮತ್ತು ತಾಲೂಕು ಮಟ್ಟದ ಕಾರ್ಯಪಡೆಯನ್ನು ಸಂಯೋಜಿಸುವುದು.<br>• ಮಕ್ಕಳ ಸಬಲೀಕರಣ, ಅವರ ಮುಂದಾಳತ್ವ ಮತ್ತು ಹಕ್ಕು ಆಧಾರಿತ ನಡೆಗಳ ಉತ್ತಮ ಆಚರಣೆಗಳನ್ನು ಗುರುತಿಸುವುದು ಮತ್ತು ತಳಮಟ್ಟದಲ್ಲಿ ಅಭಿವೃದ್ಧಿ ಪಡಿಸಿದ ಮಾನದಂಡಗಳ ಆಧಾರದಲ್ಲಿ ಅಂತಹ ಆಚರಣೆಗಳನ್ನು ಪುರಸ್ಕರಿಸುವುದು. |
| **ಕೌಶಲ್ಯಾಭಿವೃದ್ಧಿ** | • ಮಕ್ಕಳ/ಮಹಿಳಾ ಮಿತ್ರರು ಪರಿಣಾಮಕಾರಿಯಾಗಿ ಅವರ ಜವಾಬ್ದಾರಿಗಳನ್ನು ನಿರ್ವಹಿಸುವಂತೆ ಅವರ ಸಾಮರ್ಥ್ಯಾಭಿವೃದ್ಧಿಯನ್ನು ಮಾಡುವುದು.<br>• ಸಾಂಪ್ರದಾಯಿಕ ಕೌಶಲ್ಯಗಳನ್ನು ಗುರುತಿಸುವುದು ಮತ್ತು ಕೌಶಲ್ಯ ವರ್ಧನೆಗಾಗಿ ತರಬೇತಿಯನ್ನು ನಡೆಸುವುದು. (ಕುಶಲಕರ್ಮಿಗಳು ಮತ್ತು ಕರಕುಶಲ ಕೆಲಸಗಾರರು)<br>• ಕೌಶಲ್ಯ ತರಬೇತಿಗಳಿಗೆ ಮಕ್ಕಳನ್ನು ಗುರುತಿಸುವುದು.<br>• ಮಕ್ಕಳ ಸಬಲೀಕರಣ ಮತ್ತು ಮುಂದಾಳತ್ವದ ವಿಷಯದಲ್ಲಿ ತಮ್ಮ ಕೌಶಲ್ಯಗಳನ್ನು ಅಭಿವೃದ್ಧಿ ಪಡಿಸಿಕೊಳ್ಳುವಲ್ಲಿ ಮಕ್ಕಳಿಗೆ ಅಗತ್ಯವಿರುವ ಮಾಹಿತಿಗಳನ್ನು ಗುರುತಿಸುವುದು. | • ಮಕ್ಕಳ/ಮಹಿಳಾ ಮಿತ್ರರ ಕೌಶಲ್ಯಾಭಿವೃದ್ಧಿಗಾಗಿ ಸಾಮರ್ಥ್ಯಾಭಿವೃದ್ಧಿ ಕಾರ್ಯಕ್ರಮಗಳನ್ನು ನಡೆಸಲು ಸಂಯೋಜಿಸುವುದು.<br>• ಮಕ್ಕಳಿಗೆ ಅವರ ಸ್ಥಳಗಳಲ್ಲಿ ಕೌಶಲ್ಯ ತರಬೇತಿಗಳನ್ನು ಒದಗಿಸಲು ಸಂಯೋಜನೆ ಮಾಡುವುದು.<br>• ಮಕ್ಕಳ ಅಗತ್ಯತೆಗಳ ಆಧಾರದಲ್ಲಿ ಅವರಿಗೆ ಕೌಶಲ್ಯ ತರಬೇತಿಗಳನ್ನು ನೀಡಲು ಸಂಯೋಜನೆ ಮಾಡುವುದು.<br>• ಮಕ್ಕಳ ಸಬಲೀಕರಣ ಮತ್ತು ಮುಂದಾಳತ್ವದ ವಿಷಯದಲ್ಲಿ ತಮ್ಮ ಕೌಶಲ್ಯಗಳನ್ನು ಅಭಿವೃದ್ಧಿ ಪಡಿಸಿಕೊಳ್ಳುವಲ್ಲಿ ಮಕ್ಕಳಿಗೆ ಅಗತ್ಯವಿರುವ ತರಬೇತಿಗಳನ್ನು ನೀಡಲು ಗ್ರಾಮ ಪಂಚಾಯತ್ ಕಾರ್ಯಪಡೆಗೆ ಸೌಕರ್ಯಕಾರಿಕೆ. | • ಫಲಾನುಭವಿಗಳಿಗೆ ಸ್ಟೈಪೆಂಡ್/ಗೌರವಧನ/ತರಬೇತಿ ವೆಚ್ಚವನ್ನು ನೀಡುವಂತೆ ಜಿಲ್ಲಾಡಳಿತಕ್ಕೆ ಶಿಫಾರಸ್ಸು ಮಾಡುವುದು.<br>• ತಾಲೂಕು ಮತ್ತು ಪಂಚಾಯತ್ ಕಾರ್ಯಪಡೆಗಳು ಕೌಶಲ್ಯ ತರಬೇತಿ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಆಯೋಜಿಸಲು ನೆರವು ನೀಡುವುದು.<br>• ಜಿಲ್ಲಾ ಮಟ್ಟದಲ್ಲಿ ಸ್ಥಾಪಿಸಲಾದ ಮಕ್ಕಳ ಸ್ನೇಹಿ ವ್ಯವಸ್ಥೆಗಳನ್ನು ಅರ್ಥಮಾಡಿಕೊಳ್ಳಲು ಇಲಾಖೆಗಳ ಸಾಮರ್ಥ್ಯಾಭಿವೃದ್ಧಿಗೆ ಕಾರ್ಯಕ್ರಮಗಳ ಚೌಕಟ್ಟು ರೂಪಿಸುವುದು ಮತ್ತು ಆಯೋಜಿಸುವುದು. |

# ಎಲ್ಲಾ ಹಂತದ ಕಾರ್ಯಪಡೆಗಳ ಜವಾಬ್ದಾರಿ ನಕ್ಷೆ

| | | | |
|---|---|---|---|
| **ಆರೋಗ್ಯ** | • ಆರೋಗ್ಯಕ್ಕೆ ಸಂಬಂಧಿಸಿದ ಅಗತ್ಯತೆಗಳನ್ನು ತಿಳಿಯಲು ಸಮೀಕ್ಷೆಯನ್ನು ಕೈಗೊಳ್ಳಲು ಪಂಚಾಯತ್‌ಗಳಿಗೆ ಬೆಂಬಲ.<br>• ಆರೋಗ್ಯ ಸಂಬಂಧಿ ಸೌಲಭ್ಯಗಳ ಸ್ಥಾಪನೆಗೆ ಅಗತ್ಯತೆಗಳನ್ನು ಗುರುತಿಸುವುದು.<br>• ಸಾಂಪ್ರದಾಯಿಕ ಮತ್ತು ಅಸಾಂಪ್ರದಾಯಿಕ ಆರೋಗ್ಯ ಸೌಲಭ್ಯಗಳು ಮತ್ತು ಕಾರ್ಯಕ್ರಮಗಳೂ ಸೇರಿದಂತೆ ಸಮೀಕ್ಷೆಯ ಆಧಾರದಲ್ಲಿ ಆರೋಗ್ಯ ಯೋಜನೆಯ ಪ್ರಕ್ರಿಯೆಯಲ್ಲಿ ಭಾಗವಹಿಸುವುದು.<br>• ಅಂಗನವಾಡಿಗಳಲ್ಲಿ ನಿಯಮಿತವಾಗಿ ನಡೆಯುವ ಆರೋಗ್ಯ ತಪಾಸಣಾ ಶಿಬಿರಗಳ ಮೇಲ್ವಿಚಾರಣೆ.<br>• ವೈದ್ಯಕೀಯ ತುರ್ತುಪರಿಸ್ಥಿತಿಗಳಲ್ಲಿ/ಅಪಘಾತಗಳ ಸಂದರ್ಭಗಳಲ್ಲಿ ಗಾಯ ಅಥವಾ ವೈದ್ಯಕೀಯ ಸ್ಥಿತಿಯ ಸ್ವರೂಪ ಮತ್ತು ತೀವ್ರತೆಯನ್ನು ಆಧರಿಸಿ ಕಾರ್ಯಪಡೆಯು ಮಗುವಿಗೆ ತಕ್ಷಣದ ಪ್ರಥಮ ಚಿಕಿತ್ಸೆಯ ನೆರವು ಮತ್ತು ನಂತರ ಮುಂದಿನ ಚಿಕಿತ್ಸೆಗೆ ಅನುವು ಮಾಡತಕ್ಕದ್ದು.<br>• ಇಂತಹ ಘಟನೆಗಳಾದಾಗ ಕಾರ್ಯಪಡೆಯುವ ಮಗುವಿನ ಪಾಲಕರು/ಪೋಷಕರಿಗೆ ಮತ್ತು ಸೂಕ್ತವಾದ ಸರ್ಕಾರಿ ಇಲಾಖೆಗೆ ವರದಿ ಮಾಡಿರುವುದನ್ನು ಖಾತ್ರಿಪಡಿಸತಕ್ಕದ್ದು. | • ಸಮೀಕ್ಷೆಯಿಂದ ಬಂದ ಮಾಹಿತಿಗಳನ್ನು ಕ್ರೋಢೀಕರಿಸಲು ಪಂಚಾಯತ್ ಕಾರ್ಯಪಡೆಗೆ ನೆರವು ನೀಡುವುದು.<br>• ತಾಲೂಕು ಪಂಚಾಯತ್/ಆಡಳಿತವು ಆರೋಗ್ಯ ಜಾಗೃತಿ ಶಿಬಿರಗಳನ್ನು ನಡೆಸುವುದನ್ನು ಖಾತ್ರಿಪಡಿಸುವುದು<br>• ವೈದ್ಯಕೀಯ ತುರ್ತುಪರಿಸ್ಥಿತಿಗಳಲ್ಲಿ/ ಅಪಘಾತಗಳ ಸಂದರ್ಭಗಳಲ್ಲಿ ಗಾಯ ಅಥವಾ ವೈದ್ಯಕೀಯ ಸ್ಥಿತಿಯ ಸ್ವರೂಪ ಮತ್ತು ತೀವ್ರತೆಯನ್ನು ಆಧರಿಸಿ ತಾಲೂಕು ಕಾರ್ಯಪಡೆಯು ಪಂಚಾಯತ್ ಕಾರ್ಯಪಡೆಗೆ, ಮಕ್ಕಳ/ಮಹಿಳಾ ಮಿತ್ರರು ಮಗುವಿಗೆ ಬೆಂಬಲಿಸಲು, ಮಗುವಿಗೆ ತಕ್ಷಣದ ಪ್ರಥಮ ಚಿಕಿತ್ಸೆಯ ನೆರವು ಮತ್ತು ನಂತರ ಮುಂದಿನ ಚಿಕಿತ್ಸೆಗೆ ಅನುವು ಮಾಡಲು ಸೌಕರ್ಯಕಾರಿಕೆ ಮಾಡತಕ್ಕದ್ದು.<br>• ವೈದ್ಯಕೀಯ ಸಹಾಯದ ಅಗತ್ಯತೆ ಇರುವ ಮಕ್ಕಳಿಗೆ ಅಗತ್ಯವಿರುವ ಸೇವೆಗಳನ್ನು ಒದಗಿಸುವುದನ್ನು ಖಾತ್ರಿಪಡಿಸಿಕೊಳ್ಳತಕ್ಕದ್ದು. | • ಎಲ್ಲಾ ಮಕ್ಕಳಿಗೆ ವೈದ್ಯಕೀಯ ವಿಮೆಯ ಜೊತೆಗೆ ಜೀವವಿಮೆ ಮತ್ತು ಅಪಘಾತಗಳ ವಿಮೆಯನ್ನು ಒದಗಿಸಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳುವುದು. ಒಂದು ವೇಳೆ ಅಗತ್ಯವಿದ್ದರೆ, ಕ್ಷಿಪ್ರ ಸ್ಪಂದನಾ ಘಟಕಕ್ಕೆ ಮಾಹಿತಿ ಕೊಡಬೇಕು.<br>• ವೈದ್ಯಕೀಯ ಸಹಾಯದ ಅಗತ್ಯತೆ ಇರುವ ಮಕ್ಕಳಿಗೆ ಅಗತ್ಯವಿರುವ ಸೇವೆಗಳನ್ನು ಒದಗಿಸುವುದನ್ನು ಖಾತ್ರಿಪಡಿಸಿಕೊಳ್ಳತಕ್ಕದ್ದು.<br>• ಯೋಜಿತ ಆರೋಗ್ಯ ಸೌಲಭ್ಯಗಳು ಮತ್ತು ಕಾರ್ಯಕ್ರಮಗಳ ಮೇಲ್ವಿಚಾರಣೆ. |
| **ಇತರ ಮೂಲ ಅಗತ್ಯತೆಗಳು** | • ಮಕ್ಕಳು ಎದುರಿಸುತ್ತಿರುವ ಸಮಸ್ಯೆಗಳನ್ನು ನಿಭಾಯಿಸಲು ಪಂಚಾಯತ್‌ಗಳ ಜೊತೆ ಸೇರಿ ಕಾರ್ಯತಂತ್ರಗಳನ್ನು ಮತ್ತು ಕ್ರಿಯಾ ಯೋಜನೆಗಳನ್ನು ರೂಪಿಸುವುದು. ಮತ್ತು ಅವುಗಳನ್ನು ತಡೆಗಟ್ಟುವ ಕ್ರಮಗಳನ್ನು ಕೈಗೊಳ್ಳುವುದು. | • ತಾಲೂಕು ಕಾರ್ಯಪಡೆಯು ಮಧ್ಯಸ್ಥಿಕೆ ವಹಿಸಬೇಕಾದಂತಹ ಮಕ್ಕಳು ಎತ್ತಿದ ಪ್ರಮುಖ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯುವುದು.<br>• ಗ್ರಾಮ ಮಟ್ಟದ ಪಂಚಾಯತ್ ಕಾರ್ಯಪಡೆಗಳಿಗೆ ಬೆಂಬಲ.<br>• ಪಂಚಾಯತ್ ಮಟ್ಟದ ಕಾರ್ಯಪಡೆಗಳು ಮಕ್ಕಳ ರಕ್ಷಣೆಯ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಲು ಪೂರಕವಾಗಿ ಕ್ಷಿಪ್ರ ಸ್ಪಂದನಾ ತಂಡ, ಮಕ್ಕಳ ಸಹಾಯವಾಣಿ ಮತ್ತು ಸಂಬಂಧಿಸಿದ ಸೌಲಭ್ಯಗಳನ್ನು ಸ್ಥಾಪಿಸಲು ಸಂಯೋಜಿಸುವುದು.<br>• ಜಿಲ್ಲಾ ನಿಯಂತ್ರಣ ಕಾಯ್ದೆಯಾದ ಮಕ್ಕಳ ಹಕ್ಕುಗಳ ರಕ್ಷಣಾ ನಿಯಮಾವಳಿಯ ಪ್ರಕಾರ ಮಕ್ಕಳ ಹಕ್ಕುಗಳ ರಕ್ಷಣಾ ವ್ಯವಸ್ಥೆಗಳು ಕಾರ್ಯನಿರ್ವಹಿಸುತ್ತಿದೆ ಮತ್ತು ಅನುಸರಿಸುತ್ತಿದೆ ಎಂಬುದರ ಮೇಲ್ವಿಚಾರಣೆ. | • ಜಿಲ್ಲಾ ಕಾರ್ಯಪಡೆಯು ಮಧ್ಯಸ್ಥಿಕೆ ವಹಿಸಬೇಕಾದಂತಹ ಮಕ್ಕಳು ಎತ್ತಿದ ಪ್ರಮುಖ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯುವುದು.<br>• ತಾಲೂಕು ಮಟ್ಟದ ಕಾರ್ಯಪಡೆಗಳಿಗೆ ಬೆಂಬಲ.<br>• ಜಿಲ್ಲೆ ಮತ್ತು ತಾಲೂಕು ಮಟ್ಟದ ಎಲ್ಲಾ ಕಾರ್ಯಪಡೆಗಳ ಸದಸ್ಯರಿಗೆ ಗುರುತಿನ ಚೀಟಿಗಳನ್ನು ವಿತರಿಸುವುದು.<br>• ಪಂಚಾಯತ್ ಮಟ್ಟದ ಕಾರ್ಯಪಡೆಗಳು ಮಕ್ಕಳ ರಕ್ಷಣೆಯ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಲು ಪೂರಕವಾಗಿ ಕ್ಷಿಪ್ರ ಸ್ಪಂದನಾ ತಂಡ, ಮಕ್ಕಳ ಸಹಾಯವಾಣಿ ಮತ್ತು ಸಂಬಂಧಿಸಿದ ಸೌಲಭ್ಯಗಳನ್ನು ಸ್ಥಾಪನೆಯನ್ನು ಖಚಿತಪಡಿಸುವುದು.<br>• ಮಕ್ಕಳ ಹಕ್ಕುಗಳ ರಕ್ಷಣಾ ನಿಯಮಾವಳಿಯ ಪ್ರಕಾರ ಮತ್ತು ಜಿಲ್ಲಾ ನಿಯಂತ್ರಣ ಕಾಯ್ದೆಯಂತೆ ಮಕ್ಕಳ ರಕ್ಷಣೆಗಾಗಿರುವ ಎಲ್ಲಾ ವ್ಯವಸ್ಥೆಗಳು ಕಾರ್ಯನಿರ್ವಹಿಸುತ್ತಿದೆ ಎನ್ನುವ ಕುರಿತಾಗಿ ಮೇಲ್ವಿಚಾರಣೆ. |

# ಎಲ್ಲಾ ಹಂತದ ಕಾರ್ಯಪಡೆಗಳ ಜವಾಬ್ದಾರಿ ನಕ್ಷೆ

| | | | |
|---|---|---|---|
| **ಅನುಸರಣೆ** | • ಮಕ್ಕಳ ಸುರಕ್ಷತೆಯ ಉಲ್ಲಂಘನೆಗಳಿಗೆ ಪ್ರತಿಸ್ಪಂದಿಸುವ – ದೂರು ನೀಡುವ ವ್ಯವಸ್ಥೆ ಮತ್ತು ಪ್ರತಿಕ್ರಿಯೆಗಳು, ಕಾರ್ಯವಿಧಾನಗಳು.<br>• ಮಕ್ಕಳ ಹಕ್ಕುಗಳ ರಕ್ಷಣಾ ನಿಯಮಾವಳಿಗಳ ಅಲ್ಪಾವಧಿ ಮತ್ತು ದೀರ್ಘಾವಧಿಯ ಅನುಸರಣೆಗಳ ಮೇಲ್ವಿಚಾರಣೆ. | • ತಾಲೂಕು ಮಟ್ಟದಲ್ಲಿ ಸ್ವೀಕರಿಸಿದ ದೂರುಗಳು ಹಾಗೂ ಅವುಗಳಿಗೆ ತೆಗೆದುಕೊಂಡ ಕ್ರಮಗಳ ಪುನರಾವಲೋಕನ, ವ್ಯವಸ್ಥೆಗಳು ಮತ್ತು ಅವುಗಳ ಪ್ರತಿಸ್ಪಂದನೆಯ ಕುರಿತಾದ ಪುನರಾವಲೋಕನ.<br>• ಮಕ್ಕಳ ಹಕ್ಕುಗಳ ರಕ್ಷಣಾ ನಿಯಮಾವಳಿಗಳ ಅನುಷ್ಠಾನದ ಪುನರಾವಲೋಕನ. | • ಜಿಲ್ಲಾ ಮಟ್ಟದಲ್ಲಿ ಸ್ವೀಕರಿಸಿದ ದೂರುಗಳು ಹಾಗೂ ಅವುಗಳಿಗೆ ತೆಗೆದುಕೊಂಡ ಕ್ರಮಗಳ ಪುನರಾವಲೋಕನ, ವ್ಯವಸ್ಥೆಗಳು ಮತ್ತು ಅವುಗಳ ಪ್ರತಿಸ್ಪಂದನೆಯ ಕುರಿತಾದ ಪುನರಾವಲೋಕನ.<br>• ಮಕ್ಕಳ ಹಕ್ಕುಗಳ ರಕ್ಷಣಾ ನಿಯಮಾವಳಿಗಳ ಅನುಷ್ಠಾನದ ಪುನರಾವಲೋಕನ. |
| **ಬಿಕ್ಕಟ್ಟು ನಿರ್ವಹಣೆ** | • ಮಕ್ಕಳ ಮೇಲಿನ ದೌರ್ಜನ್ಯಗಳನ್ನು ತಡೆಗಟ್ಟುವುದು – ದೈಹಿಕ ಹಿಂಸೆ ಮತ್ತು ಕೌಟಂಬಿಕ ದೌರ್ಜನ್ಯವೂ ಸೇರಿದಂತೆ ಬೇರೆ ಬೇರೆ ರೀತಿಯ ಮಕ್ಕಳ ಮೇಲಿನ ದೌರ್ಜನ್ಯಗಳನ್ನು ನಿಭಾಯಿಸುವುದು. | • ದೈಹಿಕ ಹಿಂಸೆ ಮತ್ತು ಕೌಟಂಬಿಕ ದೌರ್ಜನ್ಯವೂ ಸೇರಿದಂತೆ ಮಕ್ಕಳ ಮೇಲಿನ ದೌರ್ಜನ್ಯಗಳ ಕುರಿತು ಜಾಗೃತಿ ಮೂಡಿಸುವುದು.<br>• ಕೈಗೊಂಡ ಕ್ರಮ ವರದಿಯ ಕುರಿತಾದ ಪುನರಾವಲೋಕನ | • ದೈಹಿಕ ಹಿಂಸೆ ಮತ್ತು ಕೌಟಂಬಿಕ ದೌರ್ಜನ್ಯವೂ ಸೇರಿದಂತೆ ಮಕ್ಕಳ ಮೇಲಿನ ದೌರ್ಜನ್ಯಗಳ ಕುರಿತು ಜಾಗೃತಿ ಮೂಡಿಸುವುದು.<br>• ಕೈಗೊಂಡ ಕ್ರಮ ವರದಿಯ ಕುರಿತಾದ ಪುನರಾವಲೋಕನ |
| **ಕಾನೂನು ಕ್ರಮ** | • ಕಾನೂನಿನ ಪ್ರಕಾರ ಅಪರಾಧಿಯ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವುದು. ಉಲ್ಲಂಘನೆ ಅಥವಾ ಅನನುವರ್ತನೆಗಳು ಪುನರಾವರ್ತಿತವಾಗುವುನ್ನು ಖಚಿತಪಡಿಸಿಕೊಳ್ಳಲು ತಡೆಗಟ್ಟುವ ಕ್ರಮಗಳನ್ನು ಪ್ರಾರಂಭಿಸುವುದು | • ತಾಲೂಕು ಮಟ್ಟದಲ್ಲಿ ಮಕ್ಕಳ ಸ್ನೇಹಿ ಕಾನೂನು ನೆರವು ಕೇಂದ್ರದೊಂದಿಗೆ ಸಂಯೋಜನೆ<br>• ಮಕ್ಕಳ/ಮಹಿಳಾ ಮಿತ್ರ, ಕಾರ್ಯಪಡೆ ಹಾಗೂ ಗ್ರಾಮ ಪಂಚಾಯತ್ ಸಾಮಾಜಿಕ ನ್ಯಾಯ ಸಮಿತಿಗೆ ಆಯಾ ಹಂತಗಳಲ್ಲಿ ಎತ್ತಿದ ಸಮಸ್ಯೆಗಳನ್ನು ನಿರ್ವಹಿಸಲು ಮಾಹಿತಿಗಳು, ಆಯಾ ಹಂತಗಳಲ್ಲಿ ಬಗೆಹರಿಯದ ಸಮಸ್ಯೆಗಳನ್ನು ಮುಂದಿನ ಹಂತಕ್ಕೆ ತೆಗೆದುಕೊಂಡು ಹೋಗಲು ಕಾಯ್ದೆ ಹಾಗೂ ಕಾನೂನಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಜಾಗೃತಿ ಮೂಡಿಸುವುದು ಮತ್ತು ಮಾಹಿತಿ ಕಾರ್ಯಾಗಾರ | • ಮಕ್ಕಳ ಸ್ನೇಹಿ ಕಾನೂನು ನೆರವು ಕೇಂದ್ರದ ಸ್ಥಾಪನೆ.<br>• ಜಿಲ್ಲಾ ಮಟ್ಟದಲ್ಲಿ ಮಕ್ಕಳ ಸ್ನೇಹಿ ಕಾನೂನು ನೆರವು ಕೇಂದ್ರದೊಂದಿಗೆ ಸಂಯೋಜನೆ<br>• ಮಕ್ಕಳ/ಮಹಿಳಾ ಮಿತ್ರ, ಕಾರ್ಯಪಡೆ ಹಾಗೂ ಗ್ರಾಮ ಪಂಚಾಯತ್ ಸಾಮಾಜಿಕ ನ್ಯಾಯ ಸಮಿತಿಗೆ ಆಯಾ ಹಂತಗಳಲ್ಲಿ ಎತ್ತಿದ ಸಮಸ್ಯೆಗಳನ್ನು ನಿರ್ವಹಿಸಲು ಮಾಹಿತಿಗಳು, ಆಯಾ ಹಂತಗಳಲ್ಲಿ ಬಗೆಹರಿಯದ ಸಮಸ್ಯೆಗಳನ್ನು ಮುಂದಿನ ಹಂತಕ್ಕೆ ತೆಗೆದುಕೊಂಡು ಹೋಗಲು ಕಾಯ್ದೆ ಹಾಗೂ ಕಾನೂನಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಜಾಗೃತಿ ಮೂಡಿಸುವುದು ಮತ್ತು ಮಾಹಿತಿ ಕಾರ್ಯಾಗಾರ |
| **ಮಾಹಿತಿ ನಿರ್ವಹಣೆ** | • ಮೂಲ ಮಾಹಿತಿ ಸಮೀಕ್ಷೆ (Base Line Survey)ಗಳನ್ನು ನಡೆಸುವುದು ಮತ್ತು ನಿಗದಿತವಾಗಿ ಅದರ ನವೀಕರಣವನ್ನು ಖಚಿತಪಡಿಸುವುದು.<br>• ಮಕ್ಕಳ ಹಕ್ಕುಗಳ ರಕ್ಷಣಾ ನಿಯಮಾವಳಿಗಳಿಗೆ (CRPP) ಸಂಬಂಧಿಸಿದ ಎಲ್ಲಾ ಅಂಕಿ–ಅಂಶಗಳು ಮತ್ತು ದಾಖಲೆಗಳನ್ನು ಸರಿಯಾಗಿ ನಿರ್ವಹಣೆಯಾವಗುವುದನ್ನು ಖಚಿತಪಡಿಸುವುದು.<br>• ಆರ್.ಆರ್.ಟಿ ಮತ್ತು ಮಕ್ಕಳ ಸಹಾಯವಾಣಿಗೆ ಸಂಬಂಧಿಸಿದ ಎಲ್ಲಾ ದಾಖಲೆಗಳು ಸರಿಯಾಗಿ ಮತ್ತು ವ್ಯವಸ್ಥಿತವಾಗಿ ನಿರ್ವಹಣೆಯಾಗುವುದನ್ನು ಖಚಿತಪಡಿಸುವುದು.<br>• ಮಕ್ಕಳು ಎತ್ತಿದ ಎಲ್ಲಾ ಸಮಸ್ಯೆಗಳು ಹಾಗೂ ಅವುಗಳನ್ನು ಪರಿಹರಿಸಲು | • ಗ್ರಾಮ ಪಂಚಾಯತ್‌ಗಳು ನಡೆಸಿದ ಮೂಲ ಮಾಹಿತಿ ಸಮೀಕ್ಷೆಗಳ ಕ್ರೋಢೀಕರಣ ಮತ್ತು ನಿಗದಿತವಾಗಿ ಅದರ ನವೀಕರಣವನ್ನು ಖಚಿತಪಡಿಸುವುದು.<br>• ಮಕ್ಕಳು ಎತ್ತಿದ ಎಲ್ಲಾ ಸಮಸ್ಯೆಗಳು ಹಾಗೂ ಅವುಗಳನ್ನು ಪರಿಹರಿಸಲು ಕೈಗೊಂಡ ಕ್ರಮಗಳನ್ನು ಸರಿಯಾಗಿ ದಾಖಲಿಸುವುದನ್ನು ಖಚಿತಪಡಿಸುವುದು.<br>• ಉತ್ತಮ ಅಭ್ಯಾಸಗಳನ್ನು ಗುರುತಿಸುವುದು ಮತ್ತು ತಳಮಟ್ಟದಲ್ಲಿ ಅಭಿವೃದ್ಧಿಪಡಿಸಿದ ಮಾನದಂಡಗಳ ಆಧಾರದ ಮೇಲೆ ಅವುಗಳನ್ನು ಪುರಸ್ಕರಿಸುವುದು | • ತಾಲೂಕು ಪಂಚಾಯತ್‌ಗಳು ನಡೆಸಿದ ಮೂಲ ಮಾಹಿತಿ ಸಮೀಕ್ಷೆಗಳ ಕ್ರೋಢೀಕರಣ ಮತ್ತು ನಿಗದಿತವಾಗಿ ಅದರ ನವೀಕರಣವನ್ನು ಖಚಿತಪಡಿಸುವುದು.<br>• ಮಕ್ಕಳು ಎತ್ತಿದ ಎಲ್ಲಾ ಸಮಸ್ಯೆಗಳು ಹಾಗೂ ಅವುಗಳನ್ನು ಪರಿಹರಿಸಲು ಕೈಗೊಂಡ ಕ್ರಮಗಳನ್ನು ಸರಿಯಾಗಿ ದಾಖಲಿಸುವುದನ್ನು ಖಚಿತಪಡಿಸುವುದು.<br>• ಗ್ರಾಮ ಮತ್ತು ತಾಲೂಕು ಮಟ್ಟಗಳಲ್ಲಿ ಮಕ್ಕಳು ಎತ್ತಿದ ಸಮಸ್ಯೆಗಳ ಪರಿಹಾರಕ್ಕೆ ಕೈಗೊಂಡ ಕ್ರಮಗಳ ಕುರಿತಾದ ಅನುಸರಣೆ.<br>• ರಚಿಸಲ್ಪಟ್ಟ ಮಕ್ಕಳ ರಕ್ಷಣಾ ವ್ಯವಸ್ಥೆಗಳ ಕಾರ್ಯನಿರ್ವಹಣೆಯ ಗುಣಮಟ್ಟವನ್ನು ವೃದ್ಧಿಸಲು ಅಗತ್ಯವಿರುವ ಮಾಹಿತಿಗಳನ್ನು ಸಂಗ್ರಹಿಸುವುದು ಮತ್ತು ಅದನ್ನು ಹಂಚಿಕೊಳ್ಳುವುದು. |

| | | | |
|---|---|---|---|
| | ಕೈಗೊಂಡ ಕ್ರಮಗಳನ್ನು ಸರಿಯಾಗಿ ದಾಖಲಿಸುವುದನ್ನು ಖಚಿತಪಡಿಸುವುದು. | | |
| **ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ** | • ಮಕ್ಕಳ ಹಕ್ಕುಗಳ ರಕ್ಷಣಾ ನಿಯಮಾವಳಿಯ ಅನುಷ್ಠಾನದ ಪ್ರಗತಿ ಮತ್ತು ಸ್ಥಾಪಿಸಲಾದ ಮಕ್ಕಳ ಹಕ್ಕುಗಳ ರಕ್ಷಣೆಯ ವ್ಯವಸ್ಥೆಯ ಕಾರ್ಯನಿರ್ವಹಣೆಯ ಮೇಲ್ವಿಚಾರಣೆ.<br>• ನಿಯಮಾವಳಿಯ ಅನುಷ್ಠಾನದ ನಿಯತಕಾಲಿಕ ಪುನರಾವಲೋಕನ | • ನಿಯಮಾವಳಿಯ ಅನುಷ್ಠಾನದ ನಿಯತಕಾಲಿಕ ಪುನರಾವಲೋಕನ<br>• ಮೇಲ್ವಿಚಾರಣೆ ಮತ್ತು ವರದಿ ವ್ಯವಸ್ಥೆಗಳ ಚೌಕಟ್ಟನ್ನು ರೂಪಿಸುವುದು. | • ನಿಯಮಾವಳಿಯ ಅನುಷ್ಠಾನದ ನಿಯತಕಾಲಿಕ ಪುನರಾವಲೋಕನ<br>• ಮೇಲ್ವಿಚಾರಣೆ ಮತ್ತು ವರದಿ ವ್ಯವಸ್ಥೆಗಳ ಚೌಕಟ್ಟನ್ನು ರೂಪಿಸುವುದು |

# ಅನುಬಂಧ – ii – ಉಡುಪಿ ಜಿಲ್ಲೆಯ ಮಕ್ಕಳ ಹಕ್ಕುಗಳ ರಕ್ಷಣಾ ನಿಯಮಾವಳಿ

## ಮಕ್ಕಳ ಸಹಾಯವಾಣಿ ನಿಯಮಾವಳಿ

# ಮಕ್ಕಳ ಸಹಾಯವಾಣಿ ನಿಯಮಾವಳಿಗಳು

**ಮಕ್ಕಳ ಸಹಾಯವಾಣಿಯ ಮೂಲ ಉದ್ದೇಶವು, ಉಡುಪಿ ಜಿಲ್ಲಾ ವ್ಯಾಪ್ತಿಯಲ್ಲಿ ಮಕ್ಕಳು ಯಾವುದೇ ಅಪಾಯ ಅಥವಾ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿದ್ದರೆ ತಕ್ಷಣ ಅವರ ಅಗತ್ಯತೆಗೆ ಸ್ಪಂದಿಸುವುದು. ಮುಂದುವರಿದ ಇದರ ಗುರಿಗಳೆಂದರೆ:**

- ಅವಕಾಶ ವಂಚಿತ, ಕಡೆಗಾಣಿಸಿದ, ಅಥವಾ ಶೋಷಿತವಾದ ಯಾವುದೇ ಮಗು ಮತ್ತು/ಅಥವಾ ಉಡುಪಿ ಜಿಲ್ಲೆಯಿಂದ ಯಾವುದೇ ಮಾಹಿತಿ ಬೇಕಿರುವ ಮಗುವಿಗೆ ತುರ್ತು ಸಂದರ್ಭದಲ್ಲಿ ಅಗತ್ಯವಾದ ಮಾಹಿತಿಯನ್ನು ಶುಲ್ಕರಹಿತ ದೂರವಾಣಿ ಕರೆಯ ಮೂಲಕ ಅಥವಾ ವೈಯಕ್ತಿಕ ಸಂವಹನದ ಮೂಲಕ ಸಹಾಯ ನೀಡುವುದು
- ತುರ್ತು ಘಟನೆ/ಪರಿಸ್ಥಿತಿಯಲ್ಲಿರುವ ಮಕ್ಕಳಿಗೆ ಪ್ರತಿಸ್ಪಂದಿಸಲು ಮತ್ತು ಸರಕಾರಿ ಮತ್ತು ಸರಕಾರೇತರ ಸಂಸ್ಥೆಗಳನ್ನು ಉಪಯೋಗಿಸುವಲ್ಲಿ ಹಾಗೂ ಮುಂದೆ ಅವರ ಪಾಲಕರು ಅಥವಾ ಪೋಷಕರೊಂದಿಗೆ ಸೇರಿಸುವಲ್ಲಿ ಅವರಿಗೆ ಸಹಾಯ ಮಾಡುವುದು
- ತೊಂದರೆ ಎದುರಿಸುತ್ತಿರುವ ಪರಿಸ್ಥಿತಿಯಲ್ಲಿರುವ ಮಗುವಿಗೆ ಪುನರ್ವಸತಿ ನೀಡುವ ಬೆಂಬಲ ವ್ಯವಸ್ಥೆಗಳೊಂದಿಗೆ ಸೇರಿಸಲು ಸೌಕರ್ಯಕಾರಿಕೆ ಒದಗಿಸುವುದು.
- ಮಕ್ಕಳು ಸಮಸ್ಯೆಗಳನ್ನು ಎದುರಿಸುವ ಸಂದರ್ಭದಲ್ಲಿ ಜೊತೆ ಸಂಸ್ಥೆಗಳಾದ ಪೊಲೀಸ್, ಆಸ್ಪತ್ರೆಗಳು, ಮುನ್ಸಿಪಲ್ ಕಾರ್ಪೊರೇಷನ್ ಅಧಿಕಾರಿ ವರ್ಗ, ಸಾರ್ವಜನಿಕರು/ವ್ಯಕ್ತಿಗಳ ಹಾಗೂ ಇತರ ಸರ್ಕಾರಿ ಇಲಾಖೆಗಳನ್ನು ಕಷ್ಟದ ಸಂದರ್ಭದಲ್ಲಿ ಮಕ್ಕಳು ಎದುರಿಸುವ ಸಮಸ್ಯೆಗಳ ಬಗ್ಗೆ ಸಂವೇದನೆ ಮೂಡಿಸುವುದು ಮತ್ತು ಮಧ್ಯಸ್ಥಿಕೆಗೆ ಅಗತ್ಯವಿರುವ ನಡೆಗಳು ಮತ್ತು ಕಾರ್ಯತಂತ್ರಗಳನ್ನು ರೂಪಿಸುವುದು
- ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು, ವಿಶೇಷವಾಗಿ ಕಾಳಜಿಯಿರುವ ವ್ಯಕ್ತಿಗಳು ಹಾಗೂ ಕಾರ್ಪೋರೇಟ್ ವಲಯಗಳು ಮಕ್ಕಳು ತೊಂದರೆ/ಸಮಸ್ಯೆಗಳನ್ನು ಎದುರಿಸುವ ಸಂದರ್ಭದಲ್ಲಿ ಸ್ಪಂದಿಸಲು ಅವಕಾಶ ನೀಡುವುದು.
- ಮಕ್ಕಳ ಸಹಾಯವಾಣಿಯ ಸಿಬ್ಬಂದಿ, ಸಾಮಾಜಿಕ ಕಾರ್ಯಕರ್ತರಿಗೆ, ಸ್ವಯಂ ಸೇವಕರಿಗೆ, ಪೊಲೀಸ್ ಸಿಬ್ಬಂದಿ ವರ್ಗಕ್ಕೆ ತರಬೇತಿಯನ್ನು ನೀಡುವುದರ ಜೊತೆಗೆ ಸಂಶೋಧನೆ, ತರಬೇತಿ, ದಾಖಲೀಕರಣ, ಸಮೀಕ್ಷೆ ಮತ್ತು ಅಧ್ಯಯನಗಳನ್ನು ಕೈಗೊಳ್ಳುವುದು

**ಮಕ್ಕಳ ಸಹಾಯವಾಣಿಯ ಸಹಭಾಗಿಗಳ ಪಾತ್ರ ಮತ್ತು ಜವಾಬ್ದಾರಿಗಳು**
**ಪೊಲೀಸರ ಪಾತ್ರ**

- ಪೊಲೀಸ್ ಇಲಾಖೆಯೊಂದೇ ಮಕ್ಕಳಿಗೆ ರಕ್ಷಣೆ ನೀಡಲು ಮತ್ತು ಅದಕ್ಕೆ ಸಂಬಂಧಿಸಿದ ವಿಷಯವಾಗಿ ಅಪರಾಧಿಗಳ ಮೇಲೆ ಪ್ರಕರಣಗಳನ್ನು ದಾಖಲಿಸುವ ಶಾಸನಬದ್ಧ ಸಂಸ್ಥೆಯಾಗಿರುತ್ತದೆ
- ಮಕ್ಕಳ ಮೇಲಾಗುವ ದೌರ್ಜನ್ಯ, ಹಿಂಸೆ ಇತ್ಯಾದಿಗಳಿಂದ ಮಕ್ಕಳ ಸಹಾಯವಾಣಿಯ ಮೂಲಕ ರಕ್ಷಣೆ ಬಯಸುವ ಮಕ್ಕಳಿಗೆ ರಕ್ಷಣೆಯ ಜವಾಬ್ದಾರಿಯನ್ನು ತೆಗೆದುಕೊಂಡು, ಪೊಲೀಸ್ ಇಲಾಖೆಯು ಮಕ್ಕಳ ಸಹಾಯವಾಣಿಯೊಂದಿಗೆ ಪ್ರಧಾನ ಸಹಭಾಗಿತ್ವವನ್ನು ಹೊಂದಿದೆ.
- ಅಧಿಕೃತ ದೂರುಗಳನ್ನು ನೋಂದಾಯಿಸಿಕೊಳ್ಳಲು ಪೊಲೀಸ್ ಇಲಾಖೆಯ ಸಹಾಯವನ್ನು ಕೋರುವುದು ಕಡೆಯ ಆಯ್ಕೆಯಾಗಿರುತ್ತದೆ ಹಾಗೂ ಎಲ್ಲಾ ಪ್ರಕರಣಗಳನ್ನು ಸಾಮಾಜಿಕ ಕಾರ್ಯಕರ್ತರು/ನೆಟ್‌ವರ್ಕಿಂಗ್ ಸಂಸ್ಥೆಗಳು ಹಾಗೂ ಸಂಯೋಜನಾ ಘಟಕದ ಪೋಲಿಸ್ ಸಿಬ್ಬಂದಿ ಅಥವಾ ಕೆಲವೊಮ್ಮೆ ಸ್ಥಳೀಯ ವ್ಯಾಪ್ತಿಯ ಪೋಲಿಸ್ ಠಾಣೆಯ ಜೊತೆ ಸೇರಿ ನಿರ್ವಹಿಸುವುದು ದಾಖಲಿಸುವುದು
- ಮಕ್ಕಳ ಸಹಾಯವಾಣಿ ಸೇವೆಯು ಉಡುಪಿ ಜಿಲ್ಲಾ ನಗರ ಪೊಲೀಸರೊಂದಿಗೆ ಅನುಮೋದಿತವಾದ ಚಟುವಟಿಕೆಯಾಗಿರುವುದರಿಂದ ಉಡುಪಿ ಜಿಲ್ಲಾ ಪೊಲೀಸ್ ವಿಭಾಗದ ಅಧಿಕಾರಿಗಳು ಮಕ್ಕಳ ಸಹಾಯವಾಣಿ ಸೇವೆಯನ್ನು ತಮ್ಮ ಕಛೇರಿಯಲ್ಲಿ ಸ್ಥಾಪಿಸುವ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕು. ಲೇಖನ ಸಾಮಗ್ರಿಗಳು,

ಪೀಠೋಪಕರಣಗಳು ಹಾಗೂ ಇನ್ನಿತರ ಅಗತ್ಯ ವಸ್ತುಗಳು ಹಾಗೂ ಸೌಲಭ್ಯಗಳು ಸಿಗುವಂತೆ ಅವರು ನೋಡಿಕೊಳ್ಳಬೇಕಾಗುತ್ತದೆ. ತಮ್ಮ ಘಟಕಗಳ ಕಾರ್ಯಸಂಯೋಜನೆಗೆ ಅವಕಾಶ ಮಾಡಿಕೊಡುವುದು. ನೆಟ್ ವರ್ಕಿಂಗ್ ಸಂಸ್ಥೆಗಳ ಸಹಯೋಗದೊಂದಿಗೆ ಕಾರ್ಯಕ್ರಮಗಳನ್ನು ನಡೆಸುವಾಗ ಸ್ಥಳೀಯ ಮಟ್ಟದಲ್ಲಿನ ಪೊಲೀಸ್ ಠಾಣೆಯ ಆಧಾರದ ಮೇಲೆ ಸೂಕ್ತ ಸಹಾಯವನ್ನು ಒದಗಿಸಬೇಕು.

**ಜಿಲ್ಲಾಡಳಿತದ ಪಾತ್ರ**

- ಸರಕಾರದ ನಿರೀಕ್ಷಣಾ ಗೃಹವು (ಬಾಲ ನ್ಯಾಯ ಕಾಯ್ದೆಯಡಿಯಲ್ಲಿನ ನಿಯಮಾವಳಿಯು ಸೂಚಿಸಿದಂತೆ) ಕಾಣೆಯಾದ ಮಕ್ಕಳು, ತಿರಸ್ಕೃತ ಮಕ್ಕಳು, ಮಾನಸಿಕವಾಗಿ, ದೈಹಿಕವಾಗಿ, ದುರ್ಬಲರಾಗಿದ್ದು, ತಮ್ಮ ಕುಟುಂಬದವರನ್ನು ಗುರುತಿಸಲಾರದ, ತಮ್ಮ ಮನೆಯ ವಿಳಾಸವನ್ನು ಗುರುತಿಸಲಾರದ ಮಕ್ಕಳನ್ನು ಸ್ವೀಕರಿಸುತ್ತದೆ. ಇಂತಹ ಮಕ್ಕಳನ್ನು ಲಿಖಿತ ಪ್ರವೇಶ ಪತ್ರದ ಆಧಾರದ ಮೇಲೆ ನಿರೀಕ್ಷಣಾ ಗೃಹಗಳಲ್ಲಿ ಸೇರಿಸಿಕೊಳ್ಳಲಾಗುತ್ತದೆ. ಈ ಸಂದರ್ಭದಲ್ಲಿ ಮಕ್ಕಳ ಸಹಾಯವಾಣಿ – ಸಂಯೋಜನಾ ಘಟಕವು ಅಗತ್ಯ ಪ್ರಕ್ರಿಯೆಗಳು ಪೂರ್ಣಗೊಂಡ ನಂತರ ಮೇಲೆ ಹೇಳಿದ ಸಂಸ್ಥೆಗೆ ಸೇರಿಸಲು ಮಕ್ಕಳನ್ನು ಶಿಫಾರಸ್ಸು ಮಾಡುತ್ತದೆ.
- 5 ವರ್ಷಕ್ಕಿಂತ ಕಡಿಮೆ ಪ್ರಾಯದ ಮಕ್ಕಳನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಸೂಕ್ತ ಸಂಸ್ಥೆ ಎಂದು ಮಾನ್ಯತೆ ನೀಡಿರುವ ಸಂಸ್ಥೆಗಳಿಗೆ ಸೇರ್ಪಡೆಗೆ ಸೂಚಿಸುವುದು. ಬಾಲ ನ್ಯಾಯ ಕಾಯ್ದೆಯಲ್ಲಿ ಹೇಳಿರುವಂತೆ ಮಕ್ಕಳಿಗೆ ಆಶ್ರಯ ನೀಡುವುದರ ಜೊತೆಗೆ ಕೆಲವು ಮಕ್ಕಳನ್ನು ಬಾಲ ಕಲ್ಯಾಣ ಮಂಡಳಿಯ ಅಧ್ಯಕ್ಷರ ಆದೇಶದ ಮೇಲೆ ಮಕ್ಕಳನ್ನು ದತ್ತು ತೆಗೆದುಕೊಳ್ಳಲು ಸಹ ವ್ಯವಸ್ಥೆ ಮಾಡುವುದು.

**ಸಂಯೋಜಕ ಘಟಕದ ಜವಾಬ್ದಾರಿಗಳು**

- ಸಂಯೋಜನಾ ಘಟಕವು ವಿವಿಧ ಭಾಗಿದಾರರಿಂದ ನಾಮನಿರ್ದೇಶನಗೊಂಡ ಸಂಯೋಜಕರು, ಮೂವರು ಮಹಿಳಾ ಪೊಲೀಸರು ಮತ್ತು ಐದು ಸಾಮಾಜಿಕ ಕಾರ್ಯಕರ್ತರನ್ನು ಒಳಗೊಂಡಿರುತ್ತದೆ. ಪ್ರಧಾನ ತಂಡದ ಅಭಿಪ್ರಾಯದೊಂದಿಗೆ ಸಂಯೋಜನಾ ತಂಡವು ಸಂಯೋಜನಾ ಘಟಕದ ಗಾತ್ರವನ್ನು(ಅಗತ್ಯ ವ್ಯಕ್ತಿಗಳನ್ನು) ನಿರ್ಣಯಿಸುತ್ತದೆ.
- ಬಿಕ್ಕಟ್ಟಿನ ಪರಿಸ್ಥಿತಿಯನ್ನು ಪರಿಹರಿಸಲು ಸೂಕ್ತವಾದ ಕ್ರಮಗಳನ್ನು ಕೈಗೊಳ್ಳಲು ಜವಾಬ್ದಾರಿ ಹೊಂದಿರುತ್ತದೆ
- ದಿನ ನಿತ್ಯದ ಚಟುವಟಿಕೆಗಳು, ದೂರವಾಣಿ ಮೂಲಕ ಅಥವಾ ವ್ಯಕ್ತಿಯ ಉಪಸ್ಥಿತಿಯಲ್ಲಿ ಸಮಾಲೋಚನೆ ನಡೆಸುವುದು, ಮಕ್ಕಳು ಹಾಗೂ ಹಿರಿಯರು ವರದಿ ನೀಡುವ ಪ್ರಕರಣಗಳ ಕಲಹ, ಬಿಕ್ಕಟ್ಟು ಬಗೆಹರಿಸುವುದು, ಅಥವಾ ರಾಜಿ ಮಾಡುವುದು ಸಂಯೋಜನಾ ಘಟಕದ ಜವಾಬ್ದಾರಿಯಾಗಿರುತ್ತದೆ. ಮಕ್ಕಳು / ಸಂಯೋಜಕ ಘಟಕವು ಸೂಚಿಸಿರುವ ಪ್ರಕರಣಗಳಿಗೆ ಸಂಬಂಧಿಸಿದಂತೆ ಸಹಯೋಗ ಸಂಸ್ಥೆಗಳೊಂದಿಗೆ ಪ್ರಕರಣಗಳ ಅನುಸರಣೆ, ಮಾಹಿತಿಯ ಪರಿಶೀಲನೆ ಕೂಡ ಅದರ ಜವಾಬ್ದಾರಿಯಾಗಿರುತ್ತದೆ.
- ಮಕ್ಕಳ ಸಮಸ್ಯೆಗಳು ಮತ್ತು ಹಕ್ಕುಗಳನ್ನು ಗುರುತಿಸುವಲ್ಲಿ ಸರ್ಕಾರೇತರ ಸಂಸ್ಥೆಗಳು, ವ್ಯಕ್ತಿಗಳು ಮತ್ತು ಇತರ ನೆಟ್‌ವರ್ಕ್‌ಗಳೊಂದಿಗೆ ಸಂಯೋಜನೆ.
- ಸ್ವೀಕರಿಸಿದ ಪ್ರತಿಯೊಂದು ಕರೆ ಹಾಗೂ ಪರಿಹರಿಸಿದ ಪ್ರತಿಯೊಂದು ಪ್ರಕರಣದ ದಾಖಲಾತಿ ನಿರ್ವಹಣೆ
- ಕೈಗೆತ್ತಿಕೊಂಡ ಸಮಸ್ಯೆಗಳು ಹಾಗೂ ಅದನ್ನು ಪರಿಹರಿಸಲು ಎದುರಿಸಿದ ಸವಾಲುಗಳ ಕುರಿತು ಜಿಲ್ಲಾ ಮಟ್ಟದ ಕಾರ್ಯಪಡೆಗೆ ಮಾಹಿತಿಯನ್ನು ನೀಡುವುದು.
- ಎಲ್ಲ ಸ್ಥರಗಳ ಕಾರ್ಯಪಡೆಗಳು ಮತ್ತು ಇತರ ನೆಟ್‌ವರ್ಕಿಂಗ್ ಏಜನ್ಸಿಗಳು ಜೊತೆ ಸೇರಿ ರೂಪಿಸಿದ ಮಾರ್ಗದರ್ಶಿಯಂತೆ ಮಕ್ಕಳ ಸಹಾಯವಾಣಿಯ ಕ್ಷೇತ್ರ ವಿಸ್ತರಣೆ, ಕಾರ್ಯ ವಿಸ್ತರಣೆ ಮಾಡುವ ಜವಾಬ್ದಾರಿ.

# ಮಕ್ಕಳ ಸಹಾಯವಾಣಿ ನಿಯಮಾವಳಿಗಳು

- ಎಲ್ಲಾ ಪೊಲೀಸ್ ಠಾಣೆ, ಹೊಯ್ಸಳ ಸೇವೆ(ಸಂಚಾರಿ ಪೋಲಿಸ್ ಘಟಕ), ಶಾಲೆಗಳು, ಕಾಲೇಜುಗಳು ಮತ್ತು ಇನ್ನಿತರ ಸಂಸ್ಥೆಗಳ ಜೊತೆ ಸಂಪರ್ಕ ಬೆಳೆಸುವುದು.
- ಪ್ರಕರಣಗಳ ವಿವರಗಳನ್ನು ಪಡೆಯಲು ಅಗತ್ಯವಿರುವಾಗ ಮನೆ/ಶಾಲೆ/ಪ್ರದೇಶಗಳ ಭೇಟಿ ಮತ್ತು ಮಕ್ಕಳನ್ನು ಸೇರಿಸಿದ ಸಂಸ್ಥೆಗಳೊಂದಿಗೆ ಮತ್ತು ಕ್ಷೇತ್ರದೊಂದಿಗೆ ಮುಂದಿನ ಅನುಸರಣೆ.
- ಮಕ್ಕಳ ಸಹಾಯವಾಣಿಯ ಸಹಯೋಗದೊಂದಿಗೆ ಕಾರ್ಯ ನಿರ್ವಹಿಸಲು ಇಚ್ಛಿಸುವ ಸ್ವಯಂ ಸೇವಕರು, ಸಂಸ್ಥೆಗಳು, ಕಾರ್ಪೋರೇಟ್ ಸಂಸ್ಥೆಗಳ ಮಾಹಿತಿಯ ಡಾಟಾಬೇಸ್ ತಯಾರಿಸುವುದು.
- ಈ ಸಾಮುದಾಯಿಕ ಒಗ್ಗೂಡುವಿಕೆಯ ಬಗ್ಗೆ ಮತ್ತು ಮಕ್ಕಳಿಗೆ ಹೆಚ್ಚಿನ ಸಹಕಾರ ನೀಡಲು ಮಕ್ಕಳ ಸಹಾಯವಾಣಿಯ ಕುರಿತು ಸಭೆಗಳಲ್ಲಿ, ಸೆಮಿನಾರ್‌ಗಳಲ್ಲಿ, ಸಾಮಾಜಿಕ ಕ್ಲಬ್‌ಗಳು, ಶಾಲೆಗಳು ಮತ್ತು ಕಾಲೇಜುಗಳಲ್ಲಿ ಹಾಗೂ ಪಂಚಾಯತ್, ತಾಲೂಕು ಮತ್ತು ಜಿಲ್ಲಾ ಸಭೆಗಳಲ್ಲಿ ಮಾಹಿತಿ ಪ್ರದರ್ಶನ ಮಾಡುವುದು.

**ಕಾರ್ಯಪಡೆಯ ಜವಾಬ್ದಾರಿಗಳು**

ಜಾರಿಪಡೆ ಮತ್ತು ಜಿಲ್ಲಾಡಳಿತವು ಸಾಮೂಹಿಕವಾದ ಪ್ರಯತ್ನವನ್ನು ಈ ಕೆಳಗಿನ ವಿಷಯಗಳ ಕುರಿತು ಗಮನ ಹರಿಸುವುದು

- ಮಕ್ಕಳ ಸಹಾಯವಾಣಿ ಉದ್ದೇಶವನ್ನು ಪೂರೈಸುವಲ್ಲಿ ಬೇಕಾದ ಯೋಜನೆಗಳನ್ನು ರೂಪಿಸುವುದು
- ಮಕ್ಕಳ ಸಹಾಯವಾಣಿಗೆ ಬೇಕಿರುವ ಸಂಪನ್ಮೂಲ ಮತ್ತು ಹಣಕಾಸು ಜವಾಬ್ದಾರಿತನ.
- ಸಂಯೋಜನಾ ಘಟಕ ಸ್ಥಾಪನೆ ಜವಾಬ್ದಾರಿ.
- ಸಂಯೋಜನಾ ಘಟಕದ ಸುಗಮ ಕಾರ್ಯಾಚರಣೆಗೆ ಸಂಯೋಜನಾ ತಂಡದ ಜೊತೆ ಸೇರಿ ಮಾರ್ಗದರ್ಶಿಯನ್ನು ರೂಪಿಸುವುದು
- ಮಕ್ಕಳ ಸಹಾಯವಾಣಿ ಸಹಾಯಕ ಸಂಸ್ಥೆಗಳನ್ನು ನೋಂದಾಯಿಸಿಕೊಳ್ಳಲು ಇರಬೇಕಾದ ಮಾನದಂಡ/ಬದ್ಧತೆಗಳನ್ನು ರೂಪಿಸುವ ಜವಾಬ್ದಾರಿ
- ಮಕ್ಕಳ ಸಹಾಯವಾಣಿಗೆ ಕಾರ್ಯಚಟುವಟಿಕೆಗಳನ್ನು ಯೋಜಿಸುವ, ತರಬೇತಿ ನೀಡುವ, ಮೇಲ್ವಿಚಾರಣೆ ನಡೆಸುವ ಮತ್ತು ಕಾರ್ಯಕ್ರಮಗಳ / ಚಟುವಟಿಕೆಗಳ ಮೌಲ್ಯಮಾಪನ ಮಾಡುವ ಜವಾಬ್ದಾರಿ

**ಸರ್ಕಾರೇತರ ಸಂಸ್ಥೆಗಳು / ವ್ಯಕ್ತಿಗಳ ಪಾತ್ರ**

**ಬಿಕ್ಕಟ್ಟಿನಲ್ಲಿ ಮಧ್ಯಸ್ಥಿಕೆ ವಹಿಸುವ ಏಜನ್ಸಿಗಳು**

ಗುರುತಿಸಿರುವ ಸರ್ಕಾರೇತರ ಸಂಸ್ಥೆಗಳು/ವ್ಯಕ್ತಿಗಳು ಬದ್ಧತೆಯ ಅರ್ಜಿಯಲ್ಲಿ ಹೇಳಿರುವಂತೆ ಹಗಲು/ರಾತ್ರಿಯ ನಿರ್ದಿಷ್ಟ ಸಮಯದಲ್ಲಿ, ಭೌಗೋಳಿಕ ಪ್ರದೇಶದಲ್ಲಿ ಬರಲು, ವ್ಯವಸ್ಥೆ ಒದಗಿಸುವಲ್ಲಿ, ಮಕ್ಕಳ ಹಿತಾಸಕ್ತಿಗಳನ್ನು ಪೂರೈಸಲು ಒಪ್ಪಿಗೆ ಇರಬೇಕು. ಒಂದು ವೇಳೆ ನಿಗದಿತ 15–20ನಿಮಿಷಗಳಲ್ಲಿ ಮಕ್ಕಳ ಸಹಾಯವಾಣಿ/ ಸಂಯೋಜನಾ ಘಟಕದ ಸಿಬ್ಬಂದಿಗಳು ಇಂತಹ ಸ್ಥಳಕ್ಕೆ ಹೋಗಲು ಸಾಧ್ಯವಾಗದ ಪರಿಸ್ಥಿತಿಯಲ್ಲಿ, ದೂರವನ್ನು ಹಾಗೂ ಸಮಯದ ಕೊರತೆಯನ್ನು ಪರಿಗಣಿಸಿ, ಬಿಕ್ಕಟ್ಟು ಮಧ್ಯಸ್ಥಿಕಾ ಸಂಸ್ಥೆಗಳಾಗಿ ಪ್ರತಿಸ್ಪಂದಿಸಲು ಬದ್ಧವಾಗಿರುವ ಸ್ಥಳೀಯ ಸಂಸ್ಥೆಗಳು ಮಕ್ಕಳ ಪರವಾಗಿ/ಮಕ್ಕಳಿಗಾಗಿ ಈ ಜವಾಬ್ದಾರಿಯನ್ನು ತೆಗೆದುಕೊಳ್ಳುವುದು. ಮಕ್ಕಳಿಗೆ ಕ್ಷಿಪ್ರವಾಗಿ ಸ್ಪಂದಿಸಲು ಸಹಾಯ/ಸಹಕಾರ ನೀಡಲು, ಬಿಕ್ಕಟ್ಟಿನಲ್ಲಿ ಮಧ್ಯಸ್ಥಿಕೆ ವಹಿಸುವ ಏಜನ್ಸಿಗಳಾಗಿ ಮಕ್ಕಳ ಸಹಾಯವಾಣಿಯೊಂದಿಗೆ ನೋಂದಾಯಿತವಾದ ಸರ್ಕಾರೇತರ ಸಂಸ್ಥೆಗಳು/ವ್ಯಕ್ತಿಗಳಿಗೆ ಅಗತ್ಯವಿರುವ ಮಾಹಿತಿಯನ್ನು ನೀಡಬೇಕು. ಸ್ಥಳೀಯ ಸಂಚಾರಿ ಪೋಲಿಸ್ ಘಟಕ/ ವೈದ್ಯಕೀಯ ಸಹಾಯದಂತಹ ಅಗತ್ಯತೆಗಳಿಗಾಗಿ ಬಿಕ್ಕಟ್ಟು ಮಧ್ಯಸ್ಥಿಕೆ ವಹಿಸುವ ಏಜನ್ಸಿಗಳಿಗೆ ಸಂಯೋಜನಾ ಘಟಕವೂ ಸಹ ಹೆಚ್ಚುವರಿ ಸಹಕಾರವನ್ನು ನೀಡಬೇಕು

**ಸಹಾಯಕ ಸೇವಾ ಸಂಸ್ಥೆಗಳು**

ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಮಕ್ಕಳಿಗೆ ಬೇಕಾಗುವ ಅಲ್ಪಾವಧಿ/ಧೀರ್ಘಾವಧಿಯ ಆಶ್ರಯ, ಆಹಾರ, ವೈದ್ಯಕೀಯ ಸಹಾಯ, ವಸತಿ ವ್ಯವಸ್ಥೆ, ಸಮಾಲೋಚನೆ, ವೃತ್ತಿ ಶಿಕ್ಷಣ ಮುಂತಾದವುಗಳನ್ನು ಪೂರೈಸುವ ಹೊಣೆಗಾರಿಕೆ ಹೊಂದಿರುವ ಸಂಸ್ಥೆಗಳು ಇವಾಗಿರುತ್ತವೆ. ಈ ಕ್ಷೇತ್ರಗಳಲ್ಲಿ ಈಗಾಗಲೇ ಹಲವಾರು ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿದ್ದು ಮಕ್ಕಳ ಹಿತಾಸಕ್ತಿಗಳಿಗೆ ಸ್ಪಂದಿಸಬಲ್ಲರು. ಮಕ್ಕಳ ಸಹಾಯವಾಣಿ ಸಹಭಾಗಿ ಸಂಸ್ಥೆಗಳು ಮಕ್ಕಳ ಸಹಾಯವಾಣಿ – ಸಂಯೋಜಕ ಘಟಕವು ಸೂಚಿಸಿದ ಮಕ್ಕಳಿಗೆ ಸ್ಪಂದಿಸುವುದು ಅವರ ಹೆಚ್ಚುವರಿ ಜವಾಬ್ದಾರಿಯಾಗಿರುತ್ತದೆ.

# ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ

## ಆಯ್ದ ಭಾಗ: ಶಿಕ್ಷಣ ಸಂಸ್ಥೆಗಳಿಗೆ ಗಮನಿಕೆ ಪಟ್ಟಿ

ಪುಟ: 123 – 162

# ಶಿಕ್ಷಣ ಸಂಸ್ಥೆಗಳಿಗೆ ಮಕ್ಕಳ ಸುರಕ್ಷತಾ ಗಮನಿಕೆ ಪಟ್ಟಿ[1]

ಮಕ್ಕಳ ಸುರಕ್ಷತಾ ಗಮನಿಕೆ ಪಟ್ಟಿಯು ಮಕ್ಕಳ ಸುರಕ್ಷತೆಯ ವಿವಿಧ ಆಯಾಮಗಳನ್ನು ಪರಿಗಣಿಸಿ, ಸುರಕ್ಷತೆ ಮತ್ತು ರಕ್ಷಣೆಯ ಪ್ರಮುಖ ವಲಯಗಳ ತಪಾಸಣೆಗೆ ಈ ಮುಂದಿನ ಸೂಚಕಗಳನ್ನು ಒದಗಿಸಿದೆ: ಭೌತಿಕ ಸುರಕ್ಷತೆಯು ಮೂಲಭೂತ ಸೌಕರ್ಯಗಳು, ಆರೋಗ್ಯ ಮತ್ತು ಸಾರಿಗೆಯನ್ನು, ವೈಯಕ್ತಿಕ, ಸಾಮಾಜಿಕ ಮತ್ತು ಭಾವನಾತ್ಮಕ ಸುರಕ್ಷತೆ, ಸೈಬರ್ ಸುರಕ್ಷತೆ, ತುರ್ತು ಪರಿಸ್ಥಿತಿಗೆ ಸನ್ನದ್ಧತೆ ಹಾಗೂ ವಿಪತ್ತು ನಿರ್ವಹಣೆಯನ್ನು ಒಳಗೊಂಡಿದೆ.

ಮಕ್ಕಳ ಸುರಕ್ಷತೆ ಮತ್ತು ರಕ್ಷಣೆಯನ್ನು ಖಚಿತಪಡಿಸಿಕೊಳ್ಳಲು, ಮಕ್ಕಳ ಮೇಲಿನ ಹಲ್ಲೆಯೂ ಸೇರಿದಂತೆ ಸುರಕ್ಷತಾ ಉಲ್ಲಂಘನೆಯ ಪ್ರಕರಣಗಳಲ್ಲಿ ವರದಿ ಪ್ರಕ್ರಿಯೆಗಳಿಗೆ ಸಂಬಂಧಿಸಿದ ವ್ಯವಸ್ಥೆಯನ್ನು ಮಾಪನಮಾಡಲು ಕಾರ್ಯವಿಧಾನಗಳನ್ನು ನೀಡಲಾಗಿದೆ.

ಶಿಕ್ಷಣ ಸಂಸ್ಥೆಗಳ ಪ್ರಾಧಿಕಾರವು ಸಿಬ್ಬಂದಿಗಳು, ಪೋಷಕರು, ವಿದ್ಯಾರ್ಥಿಗಳೊಡನೆ ಸಮಾಲೋಚನೆ ನಡೆಸಿ, ಶಾಲೆಯ ಅಗತ್ಯಗಳಿಗನುಗುಣವಾಗಿ ಗಮನಿಕೆ ಪಟ್ಟಿಯನ್ನು ಅಳವಡಿಸಿಕೊಳ್ಳಬಹುದಾಗಿದೆ. ಏನೇ ಆದರೂ, ಕಡ್ಡಾಯವೆಂದು(M) ಗುರುತಿಸಲಾದ ಸೂಚಕಗಳಿಗೆ ಶಿಕ್ಷಣ ಸಂಸ್ಥೆಗಳು ಬದ್ಧವಾಗಿರಬೇಕು.

| ವಿಭಾಗ – 1: ಭೌತಿಕ ಸುರಕ್ಷತೆ – ಮೂಲಭೂತ ಸೌಕರ್ಯ, ಆರೋಗ್ಯ ಮತ್ತು ಸಾರಿಗೆ | | | | |
|---|---|---|---|---|
| ವಿಭಾಗ–1 A ಮೂಲಭೂತ ಸೌಕರ್ಯ[2] | | | | |
| ಕ್ರ. ಸಂ. | ಸೂಚಕಗಳು | ಹೌದು/ ಇಲ್ಲ | ಷರಾ | ಕಡ್ಡಾಯವಾದುದು (M)/ ಶಿಫಾರಸ್ಸು ಮಾಡಲಾದುದು (R) |
| 1 | ಶಾಲೆಯು ಕಾಂಪೌಂಡ್ ಗೋಡೆಯನ್ನು ಹೊಂದಿರುವುದು ಅಥವಾ ಕಾಂಪೌಂಡ್ ಗೋಡೆ ಇಲ್ಲದ ಕಡೆ ತಾತ್ಕಾಲಿಕ ವ್ಯವಸ್ಥೆ(ಬೇಲಿ)ಯನ್ನು ಮಾಡಿಕೊಳ್ಳುವುದು. | | ಸಾರ್ವಜನಿಕ ಶಿಕ್ಷಣ ಇಲಾಖೆಯು ಕಾಂಪೌಂಡ್ ಗೋಡೆ ಕಡ್ಡಾಯವೆಂದು 2014ರ ಸುತ್ತೋಲೆಯಲ್ಲಿ ತಿಳಿಸಿದೆ. http://www.schooleducation.kar.nic.in/pdffiles/NewSchRegnAmndmt121114.pdf | M |

1 ಡಾ॥.ಸಂಗೀತಾ ಭಾಟಿಯರವರು ನಾರ್ತ್ ವೆಸ್ಟ್ ಚಾಪ್ಟರ್ ಸಹೋದಯ, ದೆಹಲಿ ಸಹಯೋಗದೊಂದಿಗೆ ಬರೆದ ಸುರಕ್ಷತಾ ಗಮನಿಕೆ ಪಟ್ಟಿಯನ್ನು ಕೇಂದ್ರ ಪ್ರೌಢ ಶಿಕ್ಷಣ ಮಂಡಳಿಯ ತ್ರೈಮಾಸಿಕ ಲಘು ಪ್ರಕಟಣೆಯ Vol 48, No: 2, ಏಪ್ರಿಲ್ – ಜೂನ್ 2009 ರಲ್ಲಿ ಪ್ರಕಟಿಸಿದೆ. ಸದರಿ ಗಮನಿಕೆ ಪಟ್ಟಿಯನ್ನು ಸುರಕ್ಷತಾ ಗಮನಿಕೆ ಪಟ್ಟಿಯಿಂದ ಪಡೆದು, ಕರ್ನಾಟಕ ರಾಜ್ಯದ ಅಗತ್ಯಕ್ಕೆ ತಕ್ಕಂತೆ ಮಾರ್ಪಾಟುಮಾಡಿ ಬಳಸಿಕೊಳ್ಳಲಾಗಿದೆ.

2 ಶಾಲೆಗಳಲ್ಲಿನ ಮೂಲಭೂತ ಸೌಕರ್ಯಗಳ ಮಾನದಂಡಗಳ ಬಗ್ಗೆ ಕರ್ನಾಟಕ ಶೈಕ್ಷಣಿಕ ಸಂಸ್ಥೆಗಳ ನೋಂದಣಿ ಮತ್ತು ವಾಣಿಜ್ಯ ಸಂಸ್ಥೆಗಳ ಗುರುತಿಸುವಿಕೆ) ನಿಯಮಗಳು, 1999 (ಕರ್ನಾಟಕ ನಿಯಮಗಳು, 1995) ರಲ್ಲಿನ ಪುಟ ಸಂಖ್ಯೆ 196 ಮತ್ತು ಕರ್ನಾಟಕ ಟ್ಯುಟೋರಿಯಲ್ ಸಂಸ್ಥೆಗಳು (ನೋಂದಣಿ ಮತ್ತು ನಿಯಂತ್ರಣ) ನಿಯಮಗಳು, 2001 ರ ಪುಟ ಸಂಖ್ಯೆ http://www.schooleducation.kar.nic.in/pdffiles/Compendium_Vol1.pdf, ಮತ್ತು ಸಾರ್ವಜನಿಕ ಶಿಕ್ಷಣ ಇಲಾಖೆಯ ಸುತ್ತೋಲೆ ://www.schooleducation.kar.nic.in/pdffiles/NewSchRegnAmndmt121114.pdf ಮತ್ತು ಶಿಕ್ಷಣ ಹಕ್ಕು ಕಾಯ್ದೆ 2009 https://www.childlineindia.org.in/CP-CR-Downloads/RTE,2009.pdf ದೊರೆಯುತ್ತದೆ.

| ಕ್ರ. ಸಂ. | ಸೂಚಕಗಳು | ಹೌದು/ ಇಲ್ಲ | ಷರಾ | ಕಡ್ಡಾಯ/ ಶಿಫಾರಸ್ಸು ಮಾಡಲಾದುದು |
|---|---|---|---|---|
| 2 | ಸಂಬಂಧಿಸಿದ ಕಾನೂನುಗಳಲ್ಲಿ ವಿವರಿಸಿರುವಂತೆ ಶಾಲೆಯ ಆವರಣ ಮತ್ತು ತರಗತಿ ಕೊಠಡಿಗಳು ಸಾಕಷ್ಟು ಕಿಟಕಿ ಮತ್ತು ಬಾಗಿಲಗಳು ಹಾಗೂ ಸೂಕ್ತ ಗಾಳಿ ಮತ್ತು ಬೆಳಕಿನ ವ್ಯವಸ್ಥೆಯನ್ನು ಹೊಂದಿರಬೇಕು | | ಕನಿಷ್ಠ ನಿರ್ಧಿಷ್ಟತೆಗಳನ್ನು ಕರ್ನಾಟಕ ನಿಯಮಗಳು, 1995 ಮತ್ತು ಶಿಕ್ಷಣ ಹಕ್ಕು ಕಾತ್ದೆಗಳಲ್ಲಿ ನೀಡಲಾಗಿದೆ: http://www.schooleducation.kar.nic.in/pdffiles/Compendium_Vol1.pdf&https://www.childlineindia.org.in/CP-CR-Downloads/RTE,2009.pdf | **M** |
| 3 | ಕೊಠಡಿಯ ನೆಲಹಾಸು ಗುಂಡಿ ಅಥವಾ ಮುರಿದ ಮೇಲ್ಮೈಯನ್ನು ಹೊಂದಿರಬಾರದು.<br><br>ಮೇಲ್ಛಾವಣಿ ಗಟ್ಟಿಯಾಗಿದ್ದು, ಸೋರುತ್ತಿರಬಾರದು ಮತ್ತು ಮುರಿದಿರಬಾರದು.<br><br>ಮೆಟ್ಟಿಲುಗಳನ್ನು ಹತ್ತಲು ಸೂಕ್ತ ಹಿಡಿಕೆಗಳನ್ನು ಅಳವಡಿಸಿರಬೇಕು ಮತ್ತು ಸುಸ್ಥಿತಿಯಲ್ಲಿರಬೇಕು.<br><br>ಮೇಲ್ಛಾವಣಿ, ನೆಲಹಾಸು ಮತ್ತು ಮೆಟ್ಟಿಲುಗಳು ಯಾವುದೇ ರೀತಿಯಲ್ಲಿ ಹಾಳಾಗಿರಬಾರದು ಮತ್ತು ಅವುಗಳ ಅಂಚುಗಳು ಚಾಚಿಕೊಂಡಿದ್ದು, ಮಕ್ಕಳಿಗೆ ಹಾನಿಯುಂಟು ಮಾಡುವಂತಿರಬಾರದು.<br><br>ಶಾಲೆಯ ಆವರಣದಲ್ಲಿ ಯಾವುದೇ ರೀತಿಯ ಹರಿತವಾದ ವಸ್ತುಗಳು ಹೊರಗೆ ಚಾಚಿಕೊಂಡಿದ್ದು, ಮಕ್ಕಳಿಗೆ ಹಾನಿಯುಂಟು ಮಾಡುವಂತಿರಬಾರದು. | | ಬೆಂಗಳೂರು ಮಹಾನಗರ ಪಾಲಿಕೆಯ ಬಿಲ್ಡಿಂಗ್ ಬೈಲಾ–2003 ರ ಪ್ರಕಾರ ಎಲ್ಲಾ ಶಿಕ್ಷಣ ಸಂಸ್ಥೆಗಳು ಸಕ್ಷಮ ಪ್ರಾಧಿಕಾರದಿಂದ ಪಡೆದ ಕಟ್ಟಡ ಪರವಾನಗಿ, ವಾಸದ ಪ್ರಮಾಣ ಪತ್ರವನ್ನು ಹೊಂದಿರುವುದು: http://bbmp.gov.in/documents/10180/504904/Bangalore-Building-Byelaws-+2003.pdf/95195b55-ef62-4b68-bb9e-dc794344c18a | **M** |

| | | | | |
|---|---|---|---|---|
| 4 | ಕಿಟಕಿಗಳು ಕಬ್ಬಿಣದ ಸರಳುಗಳ ರಕ್ಷಣೆಯನ್ನು ಹೊಂದಿರಬೇಕು. ಕಟ್ಟಡದ ದಂಡೆಗೋಡೆ (parapet) ಮತ್ತು ಮೇಲ್ಛಾವಣಿಗಳು ಸೂಕ್ತ ಎತ್ತರದವರೆಗೆ ಕಂಬಿತಡೆಯನ್ನು ಹೊಂದಿರಬೇಕು.<br>ಮುಖ್ಯದ್ವಾರ ಮತ್ತು ಗೇಟ್‌ಗಳನ್ನು ಸುಸ್ಥಿತಿಯಲ್ಲಿಟ್ಟಿರಬೇಕು. | | ಶಿಕ್ಷಣ ಸಂಸ್ಥೆಗಳು ರಾಷ್ಟ್ರೀಯ ಕಟ್ಟಡಗಳ ಸಂಹಿತೆಯಲ್ಲಿ ವಿವರಿಸಿರುವ ಅಂಶಗಳನ್ನು ಪಾಲಿಸುವುದು. | M |
| 5 | ಎಲ್ಲಾ ವಿದ್ಯುತ್ ಸಂಪರ್ಕ ತಂತಿಗಳನ್ನು ಹೊರಗೆ ಕಾಣದಂತೆ ಅಳವಡಿಸಿರುವುದು ಅಥವಾ ಅದನ್ನು ಸುರಕ್ಷತಾ ಪಟ್ಟಿಯಿಂದ ಸುತ್ತಿರಬೇಕು. ಸ್ವಿಚ್ ಪಟ್ಟಿಗೆಗಳನ್ನು ಸೂಕ್ತವಾಗಿ ನಿರ್ವಹಿಸುವುದು ಮತ್ತು ಮಕ್ಕಳಿಗೆ ನಿಲುಕದ ಎತ್ತರದ ಸ್ಥಳದಲ್ಲಿ ಅಳವಡಿಸಿರುವುದು.<br>ವಿದ್ಯುತ್ ಉಪಕರಣಗಳನ್ನು ನಿಯಮಿತವಾಗಿ ಪರಿಶೀಲಿಸುವುದು ಮತ್ತು ನಿರ್ವಹಿಸುವುದು.<br>ಫ್ಯಾನ್‌ಗಳಿಂದ ಮಕ್ಕಳಿಗೆ ಹಾನಿ ಸಂಭವಿಸದಂತೆ ಎತ್ತರದಲ್ಲಿ ಹಾಕಿಸಿರಬೇಕು. | | | M |
| 6 | ಬೆಂಚುಗಳು ಮತ್ತು ಡೆಸ್ಕ್‌ಗಳು ಗಟ್ಟಿಮುಟ್ಟಾಗಿರಬೇಕು. ಅವುಗಳು ಮರ, ಪ್ಲಾಸ್ಟಿಕ್, ಲೋಹದಿಂದ ಮಾಡಿದ್ದಾಗಿದ್ದರೂ, ಸಹ ಅವುಗಳ ಅಂಚುಗಳು ದುಂಡಾಗಿರಬೇಕು ಮತ್ತು ಮುರಿದಿರಬಾರದು. | | | M |
| 7 | ಶಾಲೆಯಲ್ಲಿರುವ ಚರಂಡಿ, ತೊಟ್ಟಿ, ಕೈಪಂಪು ಮತ್ತು ನೀರು ಶೇಖರಣಾ ಟ್ಯಾಂಕ್‌ಗಳನ್ನು ಮುಚ್ಚಿರಬೇಕು.<br><br>ಶಾಲೆಯ ಸಮೀಪದಲ್ಲಿರುವ ಚರಂಡಿಗಳನ್ನು ಮುಚ್ಚಿರಬೇಕು.<br><br>ನೀರು ಶೇಖರಣಾ ಟ್ಯಾಂಕ್‌ಗಳು ಮತ್ತು ನೀರು ಸಂಗ್ರಹಣಾ ತೊಟ್ಟಿಗಳನ್ನು ನಿಯಮಿತವಾಗಿ ಶುಚಿಗೊಳಿಸುವುದು. | | ಮಕ್ಕಳ ಸುರಕ್ಷತೆ ಮತ್ತು ರಕ್ಷಣೆ– ಕೈಪಂಪು ಮತ್ತು ನೀರು ಶೇಖರಣಾ ಟ್ಯಾಂಕ್‌ಗಳು ಮುಂತಾದವುಗಳಿಗೆ ಸಂಬಂಧಿಸಿದಂತೆ ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯದ ಮಾರ್ಗಸೂಚಿಗಳನ್ನು ಪಾಲಿಸುವುದು.<br>ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯದ ಸುತ್ತೋಲೆ: | M<br><br>R |

| | | | | |
|---|---|---|---|---|
| | | | http://mhrd.gov.in/sites/upload_files/mhrd/files/upload_document/20141014_131513.pdf ಮತ್ತು ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು ಹೊರಡಿಸಿರುವ ಬೋರ್‌ವೆಲ್ ಮತ್ತು ಮುಚ್ಚದೇ ಬಿಟ್ಟಿರುವ ಬೋರ್ ವೆಲ್‌ಗಳಿಗೆ ಚಿಕ್ಕ ಮಕ್ಕಳು ಬಿದ್ದು ಸಂಭವಿಸಬಹುದಾದ ಗಂಭಿರ ಆಕಸ್ಮಿಕಗಳನ್ನು ತಡೆಗಟ್ಟುವ ಮಾರ್ಗಸೂಚಿಗಳು: http://www.dmrelief.rajasthan.gov.in/documents/sc110210.pdf ಪರಿಶೀಲನೆಗಾಗಿ ನೀರು ಶೇಖರಣಾ ಟ್ಯಾಂಕ್‌ಗಳು ಮತ್ತು ನೀರು ಸಂಗ್ರಹಣಾ ತೊಟ್ಟಿಗಳನ್ನು ಶುಚಿಗೊಳಿಸಿದ ದಿನಾಂಕವನ್ನು ನಮೂದಿಸುವುದು | R |
| 8 | ಮದ್ಯಾಹ್ನದ ಬಿಸಿಯೂಟ ಕಾರ್ಯಕ್ರಮಕ್ಕಾಗಿ ಸಂಗ್ರಹಣಾ ಸೌಲಭ್ಯದೊಂದಿಗೆ ಪ್ರತ್ಯೇಕ ಅಡುಗೆ ಕೋಣೆಯ ವ್ಯವಸ್ಥೆಯನ್ನು ಹೊಂದಿರಬೇಕು.<br><br>ಅಡುಗೆ ಕೋಣೆ ಸ್ವಚ್ಛತೆ ಮತ್ತು ನೈರ್ಮಲ್ಯವನ್ನು ಹೊಂದಿರಬೇಕು. ಕೀಟಗಳು, ಇಲಿ ಮತ್ತು ಹೆಗ್ಗಣಗಳಿಂದ ಮುಕ್ತವಾಗಿರಬೇಕು.<br><br>ಅಡುಗೆ ಪದಾರ್ಥಗಳನ್ನು ಸ್ವಚ್ಛವಾದ ಡಬ್ಬಗಳಲ್ಲಿ, ನೈರ್ಮಲ್ಯಕರವಾಗಿ ಸಂಗ್ರಹಿಸಿಡಬೇಕು. | | ಮಕ್ಕಳಿಗೆ ನೀಡುವ ಆಹಾರ ಸ್ವಚ್ಛ ಮತ್ತು ನೈರ್ಮಲ್ಯಕರವಾಗಿರಬೇಕು: http://www.schooleducation.kar.nic.in/mms/mmspdfs/cir_cs_gok.pdf | M<br><br>M<br><br>M |

| | | | | |
|---|---|---|---|---|
| 9 | ಕುಡಿಯುವ ನೀರು ಮತ್ತು ನೀರಿನ ಶುದ್ಧೀಕರಣ ಯಂತ್ರಗಳಿರಬೇಕು.<br><br>ನೀರನ್ನು ಸಾಕಷ್ಟು ಸಂಖ್ಯೆಯ ನಲ್ಲಿಗಳ ಮೂಲಕ ಒದಗಿಸಬೇಕು.<br><br>ನೀರನ್ನು ಪೂರೈಸುವ ಜಾಗದಲ್ಲಿ ನೀರು ನಿಲ್ಲದಂತೆ ನೋಡಿಕೊಳ್ಳುವುದು. | | ನೀರಿನ ಗುಣಮಟ್ಟವನ್ನು ನಿಯಮಿತವಾಗಿ ಪರೀಕ್ಷಿಸುವುದು.<br>ಕರ್ನಾಟಕ ನಿಯಮಗಳು 1985ರ ಪುಟ ಸಂಖ್ಯೆ–115ರ ಪ್ರಕಾರ ಎಲ್ಲಾ ವಿದ್ಯಾರ್ಥಿಗಳಿಗೆ ಸುರಕ್ಷಿತ ಮತ್ತು ಕುಡಿಯಲು ಯೋಗ್ಯವಾದ ನೀರನ್ನು ಅನುಕೂಲಕರ ಸ್ಥಳದಲ್ಲಿ ಇಡುವುದು ಮತ್ತು ಸಾಕಷ್ಟು ಪ್ರಮಾಣದಲ್ಲಿ ಪೂರೈಸುವುದು: http://www.schooleducation.kar.nic.in/pdffiles/Compendium_Vol1.pdf<br>ಮತ್ತು ಶಿಕ್ಷಣ ಹಕ್ಕು ಕಾಯ್ದೆಯ ಶೆಡ್ಯೂಲ್: https://www.childlineindia.org.in/CP-CR-Downloads/RTE,2009.pdf | R<br><br>R<br><br>M |
| 10 | ಶಾಲೆಯು ಬಾಲಕರಿಗೆ ಬಳಕೆಯೋಗ್ಯ ಪ್ರತ್ಯೇಕ ಶೌಚಾಲಯವನ್ನು ಹೊಂದಿರಬೇಕು.<br><br>ಶಾಲೆಯು ಬಾಲಕಿಯರಿಗೆ ಬಳಕೆಯೋಗ್ಯ ಪ್ರತ್ಯೇಕ ಶೌಚಾಲಯವನ್ನು ಹೊಂದಿರಬೇಕು<br><br>ಶೌಚಾಲಯಗಳ ಸಂಖ್ಯೆ ವಿದ್ಯಾರ್ಥಿಗಳ ಸಂಖ್ಯೆಯ ಪ್ರಮಾಣಕ್ಕೆ ಅನುಗುಣವಾಗಿರಬೇಕು.<br>ಶೌಚಾಲಯದಲ್ಲಿ ಸ್ವಚ್ಛತೆಯ ನಿರ್ವಹಣೆ ಮಾಡಿರಬೇಕು.<br>ಎಲ್ಲಾ ಬಗೆಯ ಸೋಂಕು ನಿವಾರಕಗಳು ಮತ್ತು ಶೌಚಾಲಯ ಶುದ್ಧೀಕರಣ ವಸ್ತುಗಳು ಮಕ್ಕಳಿಗೆ ಸಿಗದ ಸ್ಥಳಗಳಲ್ಲಿರಬೇಕು. | | ಸರ್ವ ಶಿಕ್ಷಣ ಅಭಿಯಾನ ಅಥವಾ ಸಕ್ಷಮ ಪ್ರಾಧಿಕಾರದ ನೀತಿಗನುಗುಣವಾಗಿರಬೇಕು.<br>ಕರ್ನಾಟಕ ನಿಯಮಗಳು 1985ರ ಪುಟ ಸಂಖ್ಯೆ 115: http://www.schooleducation.kar.nic.in/pdffiles/Compendium_Vol1.pdf | M<br><br>R<br><br>M<br><br>M |

| | | | | |
|---|---|---|---|---|
| 11 | ಪ್ರತ್ಯೇಕ ಕ್ರೀಡಾ ಕೊಠಡಿಯಿದ್ದಲ್ಲಿ, ಅದು ಸೂಕ್ತ ಗಾಳಿ ಬೆಳಕಿನಿಂದ ಕೂಡಿದ್ದು, ಸುಸಜ್ಜಿತವಾಗಿರಬೇಕು.<br>ತರಬೇತಿ ಹೊಂದಿದ ಸಿಬ್ಬಂದಿಯ ಮೇಲ್ವಿಚಾರಣೆಯಲ್ಲಿ ಸಭಾಂಗಣ ಮತ್ತು ವ್ಯಾಯಾಮ ಶಾಲೆಗಳನ್ನು ಮಕ್ಕಳು ಬಳಸುವುದು.<br>ಶಾಲಾ ಆಟದ ಮೈದಾನಗಳು, ಜೋಕಾಲಿಗಳು, ಜಾರುಬಂಡೆಗಳು, ಸುರಕ್ಷಿತವಾಗಿರಬೇಕು ಮತ್ತು ಅವುಗಳನ್ನು ನಿಯಮಿತವಾಗಿ ನಿರ್ವಹಿಸುವುದು.<br>ಕ್ರೀಡಾ ಸಾಧನಗಳ ಸಮೀಪದಲ್ಲಿ ಅವುಗಳ ಬಳಕೆಯ ಬಗ್ಗೆ ಸೂಚನೆಗಳನ್ನು ಪ್ರಕಟಿಸುವುದು. | | ನಿಯಮಿತವಾಗಿ ನಿರ್ವಹಣಾ ಪ್ರಮಾಣ ಪತ್ರಗಳನ್ನು ಪಡೆಯುವುದು. | **R**<br><br>**R** |
| 12 | ಮಕ್ಕಳು ತರಬೇತಿ ಹೊಂದಿದ ಸಿಬ್ಬಂದಿಯ ಮೇಲ್ವಿಚಾರಣೆಯಲ್ಲಿ ಕಂಪ್ಯೂಟರ್ ಮತ್ತು ಪ್ರಯೋಗಾಲಯಗಳನ್ನು ಬಳಸುವುದು. | | | **M** |
| 13 | ಎಲ್ಲಾ ಅಪಾಯಕಾರಿ ವಸ್ತುಗಳನ್ನು ಮಕ್ಕಳ ಕೈಗೆಟುಕದಂತೆ ಶೇಖರಿಸುವುದು ಮತ್ತು ಬೀಗಹಾಕುವುದು. | | ಸ್ಫೋಟಕಗಳ ಕಾಯ್ದೆ 1884 ರ ಗ್ಯಾಸ್ ಸಿಲಿಂಡರ್ ನಿಯಮಗಳು, 2004 ರಲ್ಲಿನ 44ನೇ ನಿಯಮದಂತೆ ಕೆಳಕಂಡವುಗಳನ್ನು ಪರವಾನಗಿ ಪಡೆದು ಶೇಖರಿಬಹುದಾಗಿದೆ.<br>1. 100 ಕೇಜಿ ಅಥವಾ ಹೆಚ್ಚಿನ ತೂಕದ ಎಲ್‌ಪಿಜಿ.<br>2. 25 ಸಿಲಿಂಡರ್‌ಗಳು ಅಥವಾ 200 ಕೇಜಿಗಿಂತ ಹೆಚ್ಚಿನ ತೂಕದ (ಆ ಸಂದರ್ಭದಲ್ಲಿ ಯಾವುದು ಕಡಿಮೆ ಇರುತ್ತದೆಯೋ ಅದು) ಉರಿಯಬಹುದಾದ, ಆದರೆ ವಿಷಕಾರಿಯಲ್ಲದ ಅನಿಲ. | **M** |

| | | | | |
|---|---|---|---|---|
| | | | 3. 200 ಅಥವಾ ಹೆಚ್ಚಿನ ಉರಿಯಬಹುದಾದ, ಆದರೆ ವಿಷಕಾರಿಯಲ್ಲದ ಅನಿಲದ ಸಿಲಿಂಡರ್‌ಗಳು.<br>4. 5 ಕ್ಕಿಂತ ಹೆಚ್ಚಿನ ಯಾವುದೇ ವಿಷಕಾರಿ ಅನಿಲದ ಸಿಲಿಂಡರ್‌ಗಳು<br>5. 50 ಕ್ಕಿಂತ ಹೆಚ್ಚಿನ ದ್ರವ ರೂಪದಲ್ಲಿರುವ ಅಸಿಟಿಲೀನ್ ಸಿಲಿಂಡರ್‌ಗಳು | |
| 14 | ಶಾಲೆಯು ಸೂಕ್ತವಾದ ಕಸ ಮತ್ತು ತ್ಯಾಜ್ಯ ವಿಲೇವಾರಿ ವ್ಯವಸ್ಥೆಯನ್ನು ಹೊಂದಿರಬೇಕು.<br><br>ಶಾಲೆಯು ಸೂಕ್ತವಾದ ಒಳಚರಂಡಿ ವ್ಯವಸ್ಥೆಯನ್ನು ಹೊಂದಿರಬೇಕು | | 10 ಕೇಜಿಗಿಂತ ಹೆಚ್ಚು ತ್ಯಾಜ್ಯವನ್ನು ಉತ್ಪಾದಿಸುವ ಶಿಕ್ಷಣ ಸಂಸ್ಥೆಗಳನ್ನು ಬೃಹತ್ ಉತ್ಪಾದಕರೆಂದು BBMPಯ ಮುನಿಸಿಪಲ್ ಘನ ತ್ಯಾಜ್ಯ ಕುರಿತ ಸಾರ್ವಜನಿಕ ಅಧಿಸೂಚನೆಯನ್ವಯ ಪರಿಗಣಿಸಲಾಗುತ್ತದೆ : http://218.248.45.169/download/swm/publicnotice1.pdf ಮತ್ತು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಕಾಯ್ದೆ: http://dpal.kar.nic.in/.%5C36%20of%201964%20(E).pdf | **M**<br><br>**R** |
| 15 | ಎಲಿವೇಟರ್ (ಇದ್ದಲ್ಲಿ)ಗಳಿಗೆ, ವಿದ್ಯುತ್ ಪರೀಕ್ಷಾಧಿಕಾರಿ ಇಲಾಖೆಯಿಂದ ಪರವಾನಗಿಯನ್ನು ಪಡೆದಿರಬೇಕು ಮತ್ತು ಕಾನೂನಿನಡಿಯಲ್ಲಿ ಹೇಳಿರುವಂತೆ ನಿರ್ವಹಣೆ ಮತ್ತು ಫಿಟ್‌ನೆಸ್‌ಅನ್ನು ಪೂರೈಸುವುದು. | | ಎಲ್ಲಾ ಸಂದರ್ಭಗಳಲ್ಲಿ ಎಲಿವೇಟರ್‌ಗಳನ್ನು ಜನರೇಟರ್ ಮೂಲಕ ನಡೆಸುವುದು. ಎಲಿವೇಟರ್‌ಗಳನ್ನು ಶಿಕ್ಷಣ ಸಂಸ್ಥೆಗಳು ಪ್ರತಿ ಮೂರು ತಿಂಗಳಿಗೊಮ್ಮೆ | **M** |

| | | | | |
|---|---|---|---|---|
| | ವಾರ್ಷಿಕ ತಪಾಸಣೆ ಮತ್ತು ನಿರ್ವಹಣೆ ವರದಿಗಳನ್ನು ಇನ್ಸ್‌ಪೆಕ್ಟರ್ ಆಫ್ ಲಿಫ್ಟ್ಸ್, ಎಸ್ಕಲೇಟರ್ಸ್ ಮತ್ತು ಪ್ಯಾಸೆಂಜರ್ ಕನ್ವಯರ್ಸ್‌ಗೆ ಸಲ್ಲಿಸುವುದು. | | ಪರೀಕ್ಷಿಸುವುದು. ಶಿಕ್ಷಣ ಸಂಸ್ಥೆಗಳು ಸುರಕ್ಷತೆಗೆ ಸಂಬಂಧಿಸಿದಂತೆ ವಾರ್ಷಿಕವಾಗಿ ವರದಿಮಾಡುವ ಜವಾಬ್ದಾರಿಗಳನ್ನು ಹೊಂದಿರುತ್ತವೆ. ನಿರ್ವಹಣೆ ಮಾಡುವ ವ್ಯಕ್ತಿಯು ಚೀಫ್ ಇನ್ಸ್‌ಪೆಕ್ಟರ್ ಆಫ್ ಲಿಫ್ಟ್, ಇನ್ಸ್‌ಪೆಕ್ಟರ್ ಆಫ್ ಲಿಫ್ಟ್ಸ್ ಎಸ್ಕಲೇಟರ್ಸ್ ಮತ್ತು ಪ್ಯಾಸೆಂಜರ್ ಕನ್ವಯರ್ಸ್‌ನಲ್ಲಿ ನೊಂದಾಯಿಸಿರಬೇಕು.<br>ಕರ್ನಾಟಕ ಇನ್ಸ್‌ಪೆಕ್ಟರ್ ಆಫ್ ಲಿಫ್ಟ್ಸ್, ಎಸ್ಕಲೇಟರ್ಸ್ ಮತ್ತು ಪ್ಯಾಸೆಂಜರ್ ಕನ್ವಯರ್ಸ್ ಕಾಯ್ದೆ, 2012: http://www.dpal.kar.nic.in/pdf_files/9of%202013(E).pdf ಮತ್ತು ಕರ್ನಾಟಕ ಇನ್ಸ್‌ಪೆಕ್ಟರ್ ಆಫ್ ಲಿಫ್ಟ್ಸ್, ಎಸ್ಕಲೇಟರ್ಸ್ ಮತ್ತು ಪ್ಯಾಸೆಂಜರ್ ಕನ್ವಯರ್ಸ್ ನಿಯಮಗಳು, 2015: http://www.ksei.gov.in/Acts%20&%20Rules/Karnataka%20LEP%20Rules,2015.pdf ಮತ್ತು ವಿದ್ಯುತ್ ಪರೀಕ್ಷಾಧಿಕಾರಿ ಇಲಾಖೆಯ ಲಿಫ್ಟ್ಸ್ ಅಥವಾ ಎಸ್ಕಲೇಟರ್ಸ್ ಅಥವಾ ಪ್ಯಾಸೆಂಜರ್ ಕನ್ವಯರ್ಸ್‌ನ ನಿರ್ವಹಣೆಗೆ ಸಂಬಂಧಿಸಿದ ಸುತ್ತೋಲೆ: http://www.ksei.gov.in/Lift%20circular.jpg | **M** |
| 16 | ಟ್ರಾನ್ಸ್‌ಫಾರ್ಮರ್, ಜನರೇಟರ್ (ಇದ್ದಲ್ಲಿ) BESCOM ನಿಂದ ಪರವಾನಗಿಯನ್ನು | | ಭಾರತೀಯ ವಿದ್ಯುತ್ ಕಾಯ್ದೆ, 2003ರ ಪ್ರಕಾರ ಪರವಾನಗಿ | **M** |

| | | | | |
|---|---|---|---|---|
| | ಪಡೆಯುವುದು ಮತ್ತು ಮಾಲಿನ್ಯ ನಿಯಂತ್ರಣಾ ಮಂಡಳಿಯಿಂದ ಲಿಖಿತ ಒಪ್ಪಿಗೆಯನ್ನು ಪಡೆದು ಅವುಗಳನ್ನು ಸ್ಥಾಪಿಸುವುದು. ಇವುಗಳನ್ನು ಸುರಕ್ಷಿತ ಪ್ರದೇಶದಲ್ಲಿ, ಸೂಕ್ತ ನಿರ್ವಹಣೆಯೊಂದಿಗೆ, ಬೀಗಹಾಕಿರುವ ಪ್ರದೇಶದಲ್ಲಿಡುವುದು. | | ಮತ್ತು ತೆರವನ್ನು ಪಡೆದಿರಬೇಕು: http://aptel.gov.in/pdf/The%20Electricity%20Act_2003.pdf ಕೇಂದ್ರ ವಿದ್ಯುತ್ ಪ್ರಾಧಿಕಾರ (ವಿದ್ಯುತ್ ಪೂರೈಕೆ ಮತ್ತು ಸುರಕ್ಷತಾ ಕ್ರಮಗಳು) ನಿಯಮಗಳು, 2010: :http://www.cea.nic.in/reports/regulation/regulation_elec_safety.pdf Air Act, 1981 ಅಡಿಯಲ್ಲಿ ಹೊರಸೂಸುವಿಕೆ (emission)ಯ ಸ್ವಯಂ ಮೇಲ್ವಿಚಾರಣಾ ವಿಶ್ಲೇಷಣೆಯು ಕಡ್ಡಾಯವಾಗಿದೆ. ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯದ ಮಾರ್ಗಸೂಚಿಗಳು: http://mhrd.gov.in/sites/upload_files/mhrd/files/upload_document/EDU.pdf | |
| 17 | ಶಾಲಾ ಪರಿಸರವು ಇಲಾಖೆಯ ಮಾರ್ಗಸೂಚಿ ಮತ್ತು MHRD ಗುಣಮಟ್ಟಗಳಿಗನುಗುಣವಾಗಿ ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಹೊಂದುವ ಮೂಲಭೂತ ಸೌಕರ್ಯಗಳನ್ನು ಹೊಂದಿರುವುದರೊಂದಿಗೆ, ಅಂಗವೈಕಲ್ಯ ಸ್ನೇಹಿಯಾಗಿರಬೇಕು. ಶಾಲೆಯಲ್ಲಿನ ಸೌಲಭ್ಯಗಳಾದ ತರಗತಿ ಕೊಠಡಿಗಳು, ಆಟದ ಪ್ರದೇಶಗಳು, ಶೌಚಾಲಯಗಳು, ಕುಡಿಯುವ ನೀರು, | | MHRD ಮಾರ್ಗಸೂಚಿಗಳು http://mhrd.gov.in/sites/upload_files/mhrd/files/upload_document/EDU.pdf ರಲ್ಲಿ ಲಭ್ಯವಿದೆ | **M** |

| | | | | |
|---|---|---|---|---|
| | ಪ್ರಯೋಗಾಲಯಗಳು ಮತ್ತು ಎಲ್ಲಾ ಕೊಠಡಿಗಳು ವಿಕಲಚೇತನ ಮಕ್ಕಳಿಗೆ ಲಭ್ಯವಾಗುವಂತಿರಬೇಕು.<br>ಶಾಲೆ ಮತ್ತು ಸಂಬಂಧಿಸಿದ ಅಧಿಕಾರಿಗಳು ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ನೀಡಲಾದ ಎಲ್ಲಾ ಸಹಾಯಕ ಸಾಧನಗಳನ್ನು ಸುಸ್ಥಿತಿಯಲ್ಲಿಡುವುದು. | | | |
| 18 | ತುರ್ತು ಸಂದರ್ಭಗಳಲ್ಲಿ ಪ್ರಕಟಣೆಗಳನ್ನು ಮಾಡಲು ಶಾಲೆಯಲ್ಲಿ ಸಾಧ್ಯವಿರುವೆಡೆ Public Addressal ವ್ಯವಸ್ಥೆಯನ್ನು ಮಾಡುವುದು. ಒಂದು ವೇಳೆ ಲಭ್ಯವಿಲ್ಲದಿದ್ದಲ್ಲಿ, ಶಾಲೆಯಲ್ಲಿರುವ ಗಂಟೆಯನ್ನು ಉಪಯೋಗಿಸುವುದು. | | | **M** |
| 19 | ಸಿಗರೇಟ್ ಹಾಗೂ ಇತರೆ ತಂಬಾಕು ಉತ್ಪನ್ನಗಳನ್ನು ಶಿಕ್ಷಣ ಸಂಸ್ಥೆಯಿಂದ 100 ಯಾರ್ಡ್ ವಿಸ್ತೀರ್ಣದೊಳಗೆ ಮಾರಾಟ ಮಾಡುವುದನ್ನು ಕಡ್ಡಾಯವಾಗಿ ನಿಷೇಧಿಸಿದೆ ಎಂಬ ಫಲಕವನ್ನು ಶಿಕ್ಷಣ ಸಂಸ್ಥೆಯಲ್ಲಿ ಹಾಕುವುದು<br><br>ಶಾಲೆಯ ಬಳಿಯಲ್ಲಿ ಯಾವುದೇ ಅಶ್ಲೀಲ ವಸ್ತುಗಳ ಪ್ರದರ್ಶನ ಅಥವಾ ವ್ಯಸನಕಾರಿ ಪದಾರ್ಥಗಳ ಮಾರಾಟ ಮಾಡುವುದು ಕಂಡುಬಂದಲ್ಲಿ ಶಾಲಾ ಆಡಳಿತ ಮಂಡಳಿಯು ಶಿಕ್ಷಣ ಇಲಾಖೆಗೆ ವರದಿಮಾಡುವುದು. | | ಶಿಕ್ಷಣ ಸಂಸ್ಥೆಗಳ ಸುತ್ತ–ಮುತ್ತ ಸಿಗರೇಟ್ ಹಾಗೂ ಇತರೆ ತಂಬಾಕು ಉತ್ಪನ್ನಗಳ ಮಾರಾಟ ನಿಷೇಧ ನಿಯಮಗಳು: 2004: http://www.cancerfoundationofindia.org/activities/tobacco-control/notifications/september-1-2004.pdf ಸಿಗರೇಟ್ ಹಾಗೂ ಇತರೆ ತಂಬಾಕು ಉತ್ಪನ್ನಗಳ (ಜಾಹೀರಾತು ನಿಷೇಧ, ವ್ಯಾಪಾರ ಮತ್ತು ವಾಣಿಜ್ಯ, ಉತ್ಪಾದನೆ, ಪೂರೈಕೆ ಮತ್ತು ವಿತರಣೆ ನಿಯಂತ್ರಣ) ಕಾಯ್ದೆ 2003: http://www.who.int/fctc/reporting/Annexthreeindia.pdf | **M**<br><br>**M** |

| ವಿಭಾಗ–1 B ಆರೋಗ್ಯ | | | | |
|---|---|---|---|---|
| ಕ್ರ. ಸಂ. | ಸೂಚಕಗಳು | ಹೌದು/ ಇಲ್ಲ | ಷರಾ | ಕಡ್ಡಾಯ/ ಶಿಫಾರಸ್ಸು ಮಾಡಲಾದುದು |
| 1 | ತುರ್ತು ಚಿಕಿತ್ಸೆಗೆ ಅವಶ್ಯವಿರುವ ಔಷಧಗಳನ್ನೊಳಗೊಂಡ ಪ್ರಥಮ ಚಿಕಿತ್ಸಾ ಪೆಟ್ಟಿಗೆಯನ್ನು ಹೊಂದುವುದು ಮತ್ತು ಔಷಧಿಗಳ ಅವಧಿ ಮುಕ್ತಾಯವಾಗಿರಬಾರದು. | | | M |
| 2 | ತುರ್ತು ವೈದ್ಯಕೀಯ ಚಿಕಿತ್ಸೆಗಾಗಿ ಖಾಸಗಿ ಸೇವೆಗಳನ್ನು ಒಳಗೊಂಡು ವೈದ್ಯರ, ಆಸ್ಪತ್ರೆಯ, ಆಂಬುಲೆನ್ಸ್‌ಗಳ ದೂರವಾಣಿ ಸಂಖ್ಯೆಗಳನ್ನು ಮುಖ್ಯ ಸ್ಥಳಗಳಲ್ಲಿ ಪ್ರದರ್ಶಿಸುವುದು.<br>1. ವೈದ್ಯರ ಹೆಸರು, ವಿಳಾಸ ಮತ್ತು ದೂರವಾಣಿ ಸಂಖ್ಯೆ<br>2. ಆಸ್ಪತ್ರೆಯ ಹೆಸರು, ವಿಳಾಸ ಮತ್ತು ದೂರವಾಣಿ ಸಂಖ್ಯೆ<br>3. ಆಂಬುಲೆನ್ಸ್ ದೂರವಾಣಿ ಸಂಖ್ಯೆ<br>4. ತುರ್ತು ಆಂಬುಲೆನ್ಸ್ ಸಂಖ್ಯೆ 108 | | ವೈದ್ಯರುಗಳು ವರ್ಗಾವಣೆಯಾಗುವುದರಿಂದ, ಮಾಹಿತಿಯನ್ನು ಪ್ರತಿ 3 ತಿಂಗಳಿಗೊಮ್ಮೆ ನವೀಕರಿಸುವುದು. | M |
| 3 | ತುರ್ತು ಸಂದರ್ಭಗಳಲ್ಲಿ ಆಂಬುಲೆನ್ಸ್ ಸೌಲಭ್ಯವನ್ನು ಪಡೆಯಲು ಅವಕಾಶಗಳಿವೆ (ಆಂಬುಲೆನ್ಸ್ ಸಹಾಯ ವಾಣಿ 108). | | | M |
| 4 | ಶಿಕ್ಷಣ ಇಲಾಖೆ (ಡಿ.ಒ.ಇ)ಯು ನಿಗದಿಪಡಿಸಿದ ರೀತಿಯಲ್ಲಿ ಶಾಲೆಯು ನಿಯಮಿತವಾಗಿ ಆರೋಗ್ಯ ತಪಾಸಣೆಯನ್ನು ನಡೆಸುವುದು<br>ಶಾಲೆಯು ಪ್ರತಿ ಮಗುವಿನ ವೈದ್ಯಕೀಯ ದಾಖಲೆಗಳನ್ನು ನಿರ್ವಹಿಸುತ್ತದೆ. | | | R |
| 5 | ನಿರ್ದಿಷ್ಟ ಮತ್ತು ಮಹತ್ವದ ಮಾಹಿತಿ ಉದಾಹರಣೆ ರಕ್ತದ ಗುಂಪು, ಅಲರ್ಜಿ ಹಾಗೂ ಒದಗಿಸಬೇಕಾದ ಅಗತ್ಯ ಔಷದ ಮತ್ತು ಮಕ್ಕಳು ಹೊಂದಿರುವ ನಿರ್ದಿಷ್ಟ ಆರೋಗ್ಯ ಸಮಸ್ಯೆಗಳಾದ ಮೂರ್ಛೆರೋಗ ಮತ್ತು ಮನೋ–ಸಾಮಾಜಿಕ (psycho-social) ಸಮಸ್ಯೆಗಳ ಬಗ್ಗೆ ಮಾಹಿತಿಯನ್ನು ಪೋಷಕರ ನೆರವಿನಿಂದ ಅಪ್‌ಡೇಟ್ ಮಾಡಲಾಗಿದೆ. | | | R |

| | | | | |
|---|---|---|---|---|
| 6 | ತುರ್ತು ಸಂಧರ್ಭದಲ್ಲಿ ಕರೆ ಮಾಡಿದ ತಕ್ಷಣ ಭೇಟಿ ನೀಡುವಂತಹ ಒಬ್ಬ ವೈದ್ಯರು ಇರುವರು. | | | M |
| 7 | ಶಾಲೆಯು ಸ್ಥಳೀಯ ಆಸ್ಪತ್ರೆಯೊಂದಿಗೆ ಟೈ–ಅಪ್ ಮಾಡಿಕೊಂಡಿದೆ. | | | M |
| 8 | ಶಾಲೆಯಲ್ಲಿನ ಕ್ಯಾಂಟೀನ್ ಅಥವಾ ಶಾಲಾ ಆವರಣದಲ್ಲಿರುವ ಆಹಾರ ಪದಾರ್ಥಗಳನ್ನು ಪೂರೈಸುವ ಸ್ಥಳವು ಸಂಬಂಧಿಸಿದ ಕಾನೂನಿನಡಿ ನೋಂದಾಯಿಸಲ್ಪಟ್ಟಿದೆ ಅಥವಾ ಪರವಾನಗಿಯನ್ನು ಹೊಂದಿದೆ. | | ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆಯ ಪ್ರಕಾರ ನೋಂದಣಿ ಅಥವಾ ಪರವಾನಗಿಯನ್ನು ಪಡೆಯುವುದು ಕಡ್ಡಾಯವಾಗಿದೆ. ಆಹಾರ ಸುರಕ್ಷತೆ ಮತ್ತು ಗುಣಮಟ್ಟ ನಿಯಮಗಳು http://www.fssai.gov.in/AboutFSSAI/FSSAct.aspx ದೊರೆಯುತ್ತದೆ. ಅಲ್ಲದೇ ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಮಂತ್ರಾಲಯದ ಮಾರ್ಗಸೂಚಿಯನ್ನು http://wcd.nic.in/sites/default/files/merged_document_3.pdf.ಗಮನಿಸುವುದು. | M |
| 9 | ಉತ್ತಮ ಗುಣಮಟ್ಟದ ಮಧ್ಯಾಹ್ನದ ಬಿಸಿಯೂಟವನ್ನು ಶಿಕ್ಷಕರ/ಸಿಬ್ಬಂದಿಯ ಮೇಲ್ವಿಚಾರಣೆಯಲ್ಲಿ ಬಡಿಸುವುದು. | | ಇದು ಮಧ್ಯಾಹ್ನದ ಬಿಸಿಯೂಟವನ್ನು ನೀಡುವ ಶಾಲೆಗಳಿಗೆ ಅನ್ವಯಿಸುತ್ತದೆ. ಸರ್ಕಾರಿ ಶಾಲೆಗಳು ಶಿಕ್ಷಣ ಇಲಾಖೆ ಮೆನುವಿನ ಪ್ರಕಾರ ಊಟವನ್ನು ನೀಡುವುದು. http://www.schooleducation.kar.nic.in/mms/mmspdfs/cir_cs_gok.pdf | M |
| 10 | ಸಮತೋಲನ ಆಹಾರ, ಕಡಿಮೆ ಪೌಷ್ಠಿಕ ಆಹಾರಗಳಿಗೆ ಬದಲಾಗಿ ಪೌಷ್ಠಿಕ ಆಹಾರ ಸೇವನೆ, ನಿಯಮಿತ ಆಹಾರ ಸೇವನೆಯ ಅಭ್ಯಾಸಗಳು, ವೈಯಕ್ತಿಕ ನೈರ್ಮಲ್ಯ ಇತ್ಯಾಧಿಗಳನ್ನೊಳಗೊಂಡ ಆರೋಗ್ಯ ವಿಷಯಗಳ ಬಗ್ಗೆ ವಿದ್ಯಾರ್ಥಿಗಳಿಗೆ ಆರೋಗ್ಯ ಶಿಕ್ಷಣವನ್ನು ನೀಡಲಾಗಿದೆ. | | ಆಹಾರ ಮತ್ತು ಗುಣಮಟ್ಟ ಪ್ರಾಧಿಕಾರದ ಮಾರ್ಗಸೂಚಿಗಳನ್ವಯ ಶಾಲಾ ಕ್ಯಾಂಟೀನ್‌ಗಳು ಆರೋಗ್ಯದಾಯಕ ಮತ್ತು ಪೌಷ್ಠಿಕ ಆಹಾರಗಳನ್ನು ಹೊಂದುವುದು: http://ncpcr.gov.in/showfile.php?lang=1&level=1&&sublinkid=238&lid=456 | R |

| ವಿಭಾಗ–1 C ಸಾರಿಗೆ[3] | | | | |
|---|---|---|---|---|
| **ಕ್ರ. ಸಂ.** | **ಸೂಚಕಗಳು** | **ಹೌದು/ ಇಲ್ಲ** | **ಷರಾ** | **ಕಡ್ಡಾಯ/ ಶಿಫಾರಸ್ಸು ಮಾಡಲಾದುದು** |
| 1 | ಮೋಟಾರು ವಾಹನ ಕಾಯ್ದೆ 1988ರ ವಿಭಾಗ 74 ರನ್ವಯ ವಾಹನವು ಕಡ್ಡಾಯವಾಗಿ ಪರವಾನಗಿಯನ್ನು ಹೊಂದುವುದು.<br><br>ಶಾಲೆಯು ಹೊಂದಿರುವ ಹಾಗೂ ಶಾಲೆಯಿಂದ ನಿರ್ವಹಿಸಲ್ಪಡುತ್ತಿರುವ, ಮಕ್ಕಳನ್ನು ಶಾಲೆಗೆ ಕರೆತರುವ ಹಾಗೂ ಶಾಲೆಯಿಂದ ಕರೆದೊಯ್ಯುವ ಎಲ್ಲಾ ವಾಹನಗಳಾದ ಬಸ್ಸು, ವ್ಯಾನ್, ಕ್ಯಾಬ್‌ಗಳು RTO ಯಿಂದ ದೃಢತೆಯ ಪ್ರಮಾಣ ಪತ್ರಗಳನ್ನು ಪಡೆಯುವುದು.<br>ವಾಹನವು ನೋಂದಾಯಿತ ದಿನದಿಂದ 15 ವರ್ಷಗಳ ಅವಧಿಯ ಒಳಗಿನದ್ದಾಗಿರಬೇಕು. | | ಚಾಲಕನ ಪರವಾನಗಿ ಮತ್ತು ವಾಹನದ ನಂಬರನ್ನು ಮುಂಬಾಗದಲ್ಲಿ ಪ್ರದರ್ಶಿಸುವುದು. | M |

[3] ಶಾಲೆಯ ಸಾರಿಗೆ ವ್ಯವಸ್ಥೆಯು ಗೌರವಾನ್ವಿಯ ಸರ್ವೋಚ್ಚ ನ್ಯಾಯಾಲಯದ ಮಾರ್ಗಸೂಚಿಗಳು ರಿಟ್ ಅರ್ಜಿ (ಸಿವಿಲ್) ಸಂಖ್ಯೆ No.13029/1985 ದಿನಾಂಕ: 20-11-97 ರಿಂದ ನಿಯಂತ್ರಿಸಲ್ಪಟ್ಟಿದೆ. ಇದು http://judis.nic.in/supremecourt/imgs1.aspx?filename=20592,ರಲ್ಲಿ ದೊರೆಯುತ್ತದೆ. ಶಾಲಾ ವಾಹನಗಳಲ್ಲಿನ ರಕ್ಷಣೋಪಚಾರ ಕುರಿತು ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ: no. SaaRiE 01 SaEPa 2011, ದಿನಾಂಕ: 18-1-2013 ಮತ್ತು ಅಧಿಸೂಚನೆ So.SaaAaa/Initiation-3/PR-197/2005-06 ದಿನಾಂಕ: 22-11-2014 ಮತ್ತು ಪೋಲಿಸ್ ಆಯುಕ್ತರ ಅಧಿಸೂಚನೆ: 157/MAG(1)/others/2014, ದಿನಾಂಕ: 26-07-2014 ಗಳು http://www.bcp.gov.in//upload_press_release/20147298522277/All%20School%20proceedings%20Press%20Note.pdf. ದೊರೆಯುತ್ತವೆ. ಇದರೊಂದಿಗೆ ಮೋಟಾರು ವಾಹನ ಕಾಯ್ದೆ, 1988 http://morth.nic.in/index2.asp?slid=95&  sublinkid=54&lang=1 ಮತ್ತು ಮೋಟಾರು ವಾಹನ ನಿಯಮಗಳು, 1989http://rto.kar.nic.in/Revised%20M.V.%20VEHICLES% 20RULES%20Corrected.pdf (ಮೋಟಾರು ವಾಹನ ಕಾಯ್ದೆ ಮತ್ತು ನಿಯಮಗಳು) ಮತ್ತು ಮೋಟಾರು ವಾಹನಗಳು (ಶಾಲಾ ಮಕ್ಕಳನ್ನು ಕೊಂಡೊಯ್ಯುವಲ್ಲಿ ನಿರತರಾಗಿರುವ ವಾಹನಗಳಿಗೆ ಶರತ್ತುಗಳು) ನಿಯಮಗಳು, 2012.

| ಕ್ರ. ಸಂ. | ಸೂಚಕಗಳು | ಹೌದು/ ಇಲ್ಲ | ಷರಾ | ಕಡ್ಡಾಯ/ ಶಿಫಾರಸ್ಸು ಮಾಡಲಾದುದು |
|---|---|---|---|---|
| 2 | **ವಾಹನದ ಹೊರಭಾಗ:**<br>• ಶಾಲಾ ಬಸ್ಸುಗಳ ಹೊರನೋಟವು RTO ನಿಯಮಗಳಿಗೆ ಅನುಗುಣವಾಗಿರಬೇಕು.<br>• ಶಾಲಾ ಮಕ್ಕಳನ್ನು ಕರೆದೊಯ್ಯುವ ವಾಹನಗಳ ಮುಂಬಾಗ ಮತ್ತು ಹಿಂಬಾಗದಲ್ಲಿ 'ಶಾಲಾ ವಾಹನ' ಎಂದು ಶಾಶ್ವತವಾಗಿ ಬರೆಸುವುದು.<br>• ಒಂದು ವೇಳೆ ಬಾಡಿಗೆ ವಾಹನವಾಗಿದ್ದರೆ, 'ಶಾಲಾ ಕರ್ತವ್ಯದ ಮೇರೆಗೆ' ಎಂದು ಶಾಶ್ವತವಾಗಿ ಬರೆಸುವುದು.<br>• ಶಾಲೆಯ ಹೆಸರು ಮತ್ತು ದೂರವಾಣಿ ಸಂಖ್ಯೆಯನ್ನು ವಾಹನದ ಮೇಲೆ ಬರೆಸುವುದು. | | (ವಾಹನವು ಹಳದಿ ಬಣ್ಣದ್ದಾಗಿರಬೇಕು ಮತ್ತು ಮಧ್ಯದಲ್ಲಿ ಬಸ್ಸಿನ ಸುತ್ತ 150mm ನ ಹಸಿರು ಬಣ್ಣದ ಗೆರೆಯನ್ನು ಹಾಕಿಸಿರಬೇಕು ಹಾಗೂ ಬಸ್ಸಿನ ನಾಲ್ಕೂ ಭಾಗಗಳಲ್ಲಿ 'ಶಾಲಾ ವಾಹನ' ಎಂದು ಬರೆಸಿರಬೇಕು) | M |
| 3 | **ಚಾಲಕರು:**<br>• ಶಾಲಾ ವಾಹನವನ್ನು ಚಾಲನೆಮಾಡುವ ಚಾಲಕ ಭಾರೀ ವಾಹನಗಳ ಚಾಲನೆಯಲ್ಲಿ ಕನಿಷ್ಠ 05 ವರ್ಷಗಳ ಅನುಭವ ಹೊಂದಿರುವುದು ಅಥವಾ ಲಘು ಮೋಟಾರು ವಾಹನಗಳ ಚಾಲನಾ ಪರವಾನಗಿಯನ್ನು ಹೊಂದಿ ನಾಲ್ಕು ವರ್ಷಗಳಾಗಿರಬೇಕು.<br>• ಚಾಲಕನ ಮೇಲೆ ಸಂಚಾರ ನಿಯಮಗಳನ್ನು ಉಲ್ಲಂಘಿಸಿರುವ ಅಪರಾಧಗಳು ವರದಿಯಾಗಿರಬಾರದು.<br>• ಚಾಲಕನ ಹಿನ್ನೆಲೆಯನ್ನು ಪರಿಶೀಲನೆ ಮಾಡಲಾಗಿದೆ. | | RTO ನಿಯಮಗಳಿಗೆ ಅನುಗುಣವಾಗಿ ಚಾಲಕನು ಚಾಲನೆಯಲ್ಲಿ ಕನಿಷ್ಠ 05 ವರ್ಷಗಳ ಅನುಭವಹೊಂದಿರುವುದು | M |

| | | | | |
|---|---|---|---|---|
| | • ಶಾಲಾ ಕರ್ತವ್ಯದಲ್ಲಿರುವಾಗ ಚಾಲಕ ಮಧ್ಯಸೇವನೆಮಾಡಿಲ್ಲ ಎಂಬುದನ್ನು ಖಾತರಿಪಡಿಸಲು ನಿಯಮಿತವಾಗಿ ತಪಾಸಣೆಯನ್ನು ನಡೆಸುವುದು.<br>• ಚಾಲಕರು ಮತ್ತು ಸಹಾಯಕರಿಗೆ ಶಾಲೆಯಲ್ಲಿ ಮಕ್ಕಳ ರಕ್ಷಣೆ ಮತ್ತು ಕಿರುಕುಳ ನೀತಿಯ ಬಗ್ಗೆ ಜಾಗೃತಿ ಮೂಡಿಸುವುದು.<br>• ಚಾಲಕ ವಾನವನ್ನು ಉತ್ತಮ ಮತ್ತು ಸುರಕ್ಷಿತವಾಗಿ ನಿರ್ವಹಿಸುವುದು. | | | |
| 4 | **ಪರಿಚಾರಕರು/ಸಹಾಯಕರು:**<br>• ಶಾಲಾ ವಾಹನದ ಕೊನೆಯ ನಿಲ್ದಾಣದವರೆಗೆ ವಾಹನದಲ್ಲಿ ಒಬ್ಬ ಶಿಕ್ಷಕ ಅಥವಾ ಪರಿಚಾರಕ (ಹೆಣ್ಣು ಮಕ್ಕಳಿರುವಲ್ಲಿ ಮಹಿಳಾ ಪರಿಚಾರಕರನ್ನು ನೇಮಿಸುವುದು) ರನ್ನು ನೇಮಿಸುವುದು.<br>• ಮಕ್ಕಳನ್ನು ಕರೆತರುವ ಮತ್ತು ಕೊಂಡೊಯ್ಯುವ ಶಾಲಾ ವಾಹಗಳ ಚಲನ–ವಲನಗಳ ಮೇಲ್ವಿಚಾರಣೆಯನ್ನು ಒಬ್ಬ ವ್ಯಕ್ತಿ/ಭದ್ರತಾ ಸಿಬ್ಬಂದಿ ನೋಡಿಕೊಳ್ಳುವುದು. | | ಮಕ್ಕಳ ಸುರಕ್ಷತೆಗಾಗಿ ಶಾಲಾ ವಾಹನದಲ್ಲಿ ಒಬ್ಬ ಸಿಬ್ಬಂದಿಯನ್ನು ನೇಮಿಸುವುದು. | M |
| 5 | **ಆಂತರಿಕ ಕ್ರಮಗಳು:**<br>• ಶಾಲಾ ಬಸ್ಸಿನ ಕಿಟಕಿಗಳಿಗೆ ಸಮತಲ ಕಂಬಿಗಳನ್ನು ಹಾಕಿಸುವುದು.<br>• ಶಾಲಾ ಬಸ್ಸುಗಳು ಪ್ರಥಮ ಚಿಕಿತ್ಸಾ ಪೆಟ್ಟಿಗೆ ಮತ್ತು ಅಗ್ನಿ ಶಾಮಕ ಉಪಕರಣಗಳನ್ನು ಹೊಂದಿರಬೇಕು. | | | M |

| | | | | |
|---|---|---|---|---|
| | • ವಾಹನದ ಬಾಗಿಲುಗಳಿಗೆ ಬೀಗವನ್ನು ಹಾಕುವುದು ಮತ್ತು ಬೀಗವನ್ನು ಸುರಕ್ಷಿತವಾಗಿಡುವುದು.<br>• ವಾಹನದ ತುರ್ತು ನಿರ್ಗಮನಗಳು ಉತ್ತಮವಾಗಿ ಕಾರ್ಯನಿರ್ವಹಿಸುವ ಸ್ಥಿತಿಯಲ್ಲಿರಬೇಕು ಮತ್ತು ತುರ್ತು ಸಂದರ್ಭಗಳಲ್ಲಿ ಯಾವುದೇ ಅಡೆತಡೆಗಳಿರದೇ, ಮಕ್ಕಳು ಸುಲಭವಾಗಿ ಚಲಿಸುವಂತಿರಬೇಕು. ತುರ್ತು ನಿರ್ಗಮನವೆಂದು ಎರಡೂ ಕಡೆ ಕೆಂಪು ಬಣ್ಣದಲ್ಲಿ ಬರೆಯುವುದು.<br>• ಶಾಲಾ ಬ್ಯಾಗ್‌ಗಳನ್ನು ಸುರಕ್ಷಿತವಾಗಿಡಲು ಆಸನಗಳ ಕೆಳಗೆ ಸಾಕಷ್ಟು ಸ್ಥಳಾವಕಾಶವಿರಬೇಕು<br>• ಪ್ರತಿ ಘಂಟೆಗೆ 40 ಕಿ.ಮಿ.ಗಳ ವೇಗ ನಿಯಂತ್ರಣವನ್ನು ಅಳವಡಿಸುವುದು.<br>• ಬಸ್ಸಿನಲ್ಲಿ ಎಲ್‌ಪಿಜಿ ಸೌಲಭ್ಯವಿದ್ದಲ್ಲಿ, ಅದನ್ನು ಅಧಿಕೃತ ಪೂರೈಕೆದಾರರಿಂದ ಪಡೆದಿರಬೇಕು ಮತ್ತು ಅಧಿಕೃತ ಪ್ರಾಧಿಕಾರದಿಂದ ಪ್ರಮಾಣ ಪತ್ರ ಪಡೆದಿರಬೇಕು. ಎಲ್‌ಪಿಜಿಯನ್ನು ಆಸನಗಳ ಸಮೀಪ ಇರಿಸಬಾರದು.<br>• ಶಾಲಾ ಮಕ್ಕಳ ವಾಹನದಲ್ಲಿ ಬಣ್ಣದ ಗಾಜುಗಳನ್ನು ಹಾಕಿಸಬಾರದು. | | | |
| 6 | **ಆಸನ ವ್ಯವಸ್ಥೆ:**<br>• ಚಾಲಕನು ವಾಹನದಲ್ಲಿ ನಿಗಧಿತ ಮಕ್ಕಳ ಸಂಖ್ಯೆಯೂ ಸೇರಿದಂತೆ, | | ಶಾಲಾ ವಾಹನವು ನಿಗಧಿತ ಸಂಖ್ಯೆಗಿಂತ ಹೆಚ್ಚಿನ ಮಕ್ಕಳನ್ನು ಕರೆದೊಯ್ಯುವಂತಿಲ್ಲ. | M |

| | | | | |
|---|---|---|---|---|
| | RTO ನಎಲ್ಲಾ ನಿಯಮಗಳನ್ನು ಪಾಲಿಸುವುದು. | | | |
| 7 | ಸುರಕ್ಷತೆಗೆ ಸಂಬಂಧಿಸಿದ ಸೂಚನೆಗಳನ್ನು ಬಸ್ಸಿನ ಒಳಗೆ ಪ್ರದರ್ಶಿಸುವುದು. | | | M |
| 8 | ಮಕ್ಕಳ ಸುರಕ್ಷತೆಯನ್ನು ಖಾತರಿ ಪಡಿಸಲು ಶಾಲೆಯ ಎರಡೂ ಮುಖ್ಯದ್ವಾರಗಳ ಸಮೀಪ ವೇಗ ನಿಯಂತ್ರಕಗಳನ್ನು ಅಳವಡಿಸುವುದು. ಸಂಚಾರ ದಟ್ಟಣೆ ಇರುವ ರಸ್ತೆಗಳಲ್ಲಿ, ಮುಖ್ಯ ರಸ್ತೆಗಳಲ್ಲಿ ಸಂಚಾರ ಚಿನ್ಹೆಗಳನ್ನು ಬಳಸುವುದು. | | | M |
| 9 | ಆಟೋರಿಕ್ಷಾಗಳು:<br>• ಸಂಬಂಧಿಸಿದ ಅಧಿಕಾರಿಗಳು ಆಟೋಗಳಲ್ಲಿ ಬರುವ ಮಕ್ಕಳ ಸುರಕ್ಷತೆಯನ್ನು ಖಾತರಿಪಡಿಸುವುದು.<br>• ಆಟೋಗಳಲ್ಲಿ ಮಕ್ಕಳನ್ನು ಕಳುಹಿಸುವ ಪೋಷಕರು ಮಕ್ಕಳ ಸಂಖ್ಯೆಗೆ ಸಂಬಂಧಿಸಿದಂತೆ RTO ನಿಯಮಗಳನ್ನು ಪಾಲಿಸುವುದು.<br>• ಆಟೋಗಳನ್ನು ನೊಂದಾಯಿಸಿರಬೇಕು ಮತ್ತು ಚಾಲಕನ ಮಾಹಿತಿಯನ್ನು ಸಮರ್ಪಕವಾಗಿ ನಿರ್ವಹಿಸುವುದು. | | ಶಾಲೆಗೆ ಮಕ್ಕಳನ್ನು ಕರೆತರುವ ಮತ್ತು ಕೊಂಡೊಯ್ಯುವ ಜವಾಬ್ದಾರಿಯು ಚಾಲಕರದಾಗಿದೆ ಎಂಬುದಾಗಿ ಅವರಿಗೆ ಪೋಷಕರು ಮತ್ತು ಶಾಲೆ ಮನವರಿಕೆ ಮಾಡಿಕೊಡುವುದು.<br><br>ಕರ್ನಾಟಕ ಮೋಟಾರು ವಾಹನ ಕಾಯ್ದೆಯ ಪ್ರಕಾರ 12 ವರ್ಷಕ್ಕೆ ಮೇಲ್ಪಟ್ಟ ಮಕ್ಕಳನ್ನು ಒಂದು ಸೀಟು ಎಂದೂ, 12 ವರ್ಷದೊಳಗಿನ ಮಕ್ಕಳನ್ನು ಅರ್ಧ ಸೀಟು ಎಂದೂ ಮತ್ತು 3 ವರ್ಷದೊಳಗಿನ ಮಕ್ಕಳನ್ನು ಸೀಟಿಗೆ ಪರಿಗಣಿಸಬಾರದು. ಸೀಟಿನ ಹಿಂಬಾಗದಲ್ಲಿ ಚಾಲಕನ ಮಾಹಿತಿಯನ್ನು ಪ್ರದರ್ಶಿಸುವುದು. | M<br><br>**M** |

| ವಿಭಾಗ: 2 – ವೈಯಕ್ತಿಕ ಮತ್ತು ಲೈಂಗಿಕ ಸುರಕ್ಷತೆ | | | | |
|---|---|---|---|---|
| ಕ್ರ. ಸಂ. | ಸೂಚಕಗಳು | ಹೌದು / ಇಲ್ಲ | ಷರಾ | ಕಡ್ಡಾಯ/ ಶಿಫಾರಸ್ಸು ಮಾಡಲಾದುದು |
| 1 | ಮಕ್ಕಳ ಮೇಲಿನ ಯಾವುದೇ ಹಲ್ಲೆ ಮತ್ತು ಸುರಕ್ಷತಾ ಉಲ್ಲಂಘನೆಗೆ, ಶಾಲೆಯು ಕಟ್ಟುನಿಟ್ಟಿನ ಮಕ್ಕಳ ರಕ್ಷಣಾ ನೀತಿಯನ್ನು ಹೊಂದುವುದು.<br>ಎಲ್ಲಾ ಮಕ್ಕಳಿಗೆ ಒಳ್ಳೆಯ ಮತ್ತು ಕೆಟ್ಟ ಸ್ಪರ್ಷ ಹಾಗೂ ನಡತೆಗಳು ಹಾಗೂ ಒಂದು ವೇಳೆ ಯಾವುದೇ ವ್ಯಕ್ತಿ ವೈಯಕ್ತಿಕ ಸುರಕ್ಷತೆ ನಿಯಮಗಳನ್ನು ಉಲ್ಲಂಸಿದ್ದಲ್ಲಿ ಅದನ್ನು ಯಾರಿಗೆ ವರದಿಮಾಡಬೇಕು ಎಂಬ ಅಂಶಗಳ ಬಗ್ಗೆ ನಿಯಮಿತವಾಗಿ ತಿಳುವಳಿಕೆ ನೀಡುವುದು.<br>ಮಕ್ಕಳ ಮೇಲಿನ ಹಲ್ಲೆ, ಅದನ್ನು ಗುರುತಿಸುವ ವಿಧಾನ, ವಿರೋಧಿಸುವ ಮತ್ತು ದುಷ್ಕರ್ಮಿಗಳ ಕುರಿತು ವರದಿಮಾಡುವ ವಿಧಾನಗಳ ಬಗ್ಗೆ ಪೋಷಕರು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು ಮತ್ತು ಮಕ್ಕಳಿಗೆ ವಯಸ್ಸಿಗೆ ಅನುಗುಣವಾಗಿ ಅರಿವು–ಜಾಗೃತಿ ಮೂಡಿಸುವುದು.<br>ಶಾಲೆಗಳು ತರಬೇತಿ, ದಿನಾಂಕ, ಸಂಪನ್ಮೂಲ ವ್ಯಕ್ತಿಗಳ ಸಂಪರ್ಕ ವಿವರಗಳ ದಾಖಲೆಯನ್ನು ನಿರ್ವಹಿಸುವುದು. | | ಇದು ಶಾಲೆಯ ಮಕ್ಕಳ ರಕ್ಷಣಾ ನೀತಿಯ ಭಾಗವಾಗಿದೆ.<br>ತರಬೇತಿಯನ್ನು ನೀಡಲು ಶಾಲೆಗಳು ಸ್ವ ಸಹಾಯ ಸಂಸ್ಥೆಗಳು ಅಥವಾ ತಜ್ಞರ ಸಹಾಯವನ್ನು ಪಡೆಯುವುದು. | **M** |
| 2 | ಶಾಲೆಯು 1–12 ನೇ ತರಗತಿಯ ಮಕ್ಕಳಿಗೆ ಲಿಂಗ ಸೂಕ್ಷ್ಮತೆ, ಸಹಪಾಠಿಗಳೊಂದಿಗೆ ಗೌರವ ಮತ್ತು ಘನತೆಯಿಂದ ನಡೆದುಕೊಳ್ಳುವುದು, ವಸ್ತುಗಳಿಂದ ಹೊಡೆಯುವುದರಿಂದಾಗುವ ಹಾನಿಕಾರಕ ಪರಿಣಾಮಗಳು, ಕಾನೂನುಬಾಹೀರ ನಡತೆ ಅಥವಾ ಕ್ರಿಯೆ, ಬಾಲ ನ್ಯಾಯ ಮತ್ತು POCSO | | ತರಬೇತಿಯನ್ನು ನೀಡಲು ಶಿಕ್ಷಣ ಇಲಾಖೆಯು ಅಥವಾ ತಜ್ಞರ ಸಹಾಯದಿಂದ ಯಾವುದೇ ಸಂಸ್ಥೆ ಅಭಿವೃದ್ಧಿ ಪಡಿಸಿರುವ ಪಠ್ಯಕ್ರಮವನ್ನು ಬಳಸುವುದು. | **M** |

| | | | | |
|---|---|---|---|---|
| | ಕಾಯ್ದೆಗಳಡಿ ಕೈಗೊಳ್ಳುವ ದಂಢನೆಗಳ ಬಗ್ಗೆ ತರಗತಿ ಮತ್ತು ವಯಸ್ಸಿಗೆ ಅನುಗುಣವಾಗಿ ತರಬೇತಿಯನ್ನು ನಡೆಸುವುದು. | | | |
| 3 | ಶಾಖೆಯು, ಮಕ್ಕಳ ಹಕ್ಕುಗಳ ರಕ್ಷಣೆ, ಮಕ್ಕಳ ಸುರಕ್ಷತೆ ಮತ್ತು ಮಕ್ಕಳ ಅಭಿವೃದ್ಧಿ, ಮಕ್ಕಳ ದುರಪಯೋಗ ಮತ್ತು ಅದಕ್ಕೆ ಸಂಬಂಧಿಸಿದ ಸಮಸ್ಯೆ/ವಿಷಯಗಳ ಬಗ್ಗೆ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗಕ್ಕೆ ತರಬೇತಿ ನೀಡುವ ವ್ಯವಸ್ಥೆಯನ್ನು ಕೈಗೊಂಡಿದೆ.<br>ಮಕ್ಕಳ ಮೇಲಿನ ಹಲ್ಲೆ ಪ್ರಕರಣಗಳು ವರದಿಯಾದಾಗ, ಹಲ್ಲೆಯ ಚಿಹ್ನೆಗಳನ್ನು ಗುರುತಿಸಲು ಮತ್ತು ಸಂಬಂಧಿಸಿದ ಕಾನೂನುಗಳನ್ವಯ ಸೂಕ್ತ ಕ್ರಮಕೈಗೊಳ್ಳಲು ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳಿಗೆ ತರಬೇತಿಯನ್ನು ನೀಡುವುದು. | | ಪ್ರತಿಕ್ರಿಯೆ ಮತ್ತು ಚಿಕಿತ್ಸೆಗಳಿಗೆ ಆರಂಭಿಕ ಹಂತದಲ್ಲಿ ಪತ್ತೆಹಚ್ಚುವುದು ವಿಮರ್ಶಾತ್ಮಕವಾಗಿದೆ | **M** |
| 4 | ಮಕ್ಕಳು ಪೂರಕ ಮತ್ತು ಅನುಕೂಲಕರ ಪರಿಸರವನ್ನು ಹೊಂದಿದ್ದಾರೆ ಮತ್ತು ಶಿಕ್ಷಕರೊಂದಿಗೆ ತಮ್ಮ ವೈಯುಕ್ತಿಕ ಸಮಸ್ಯೆಗಳನ್ನು ಗೌಪ್ಯವಾಗಿ ಹಂಚಿಕೊಳ್ಳಲು ಅವರಿಗೆ ಉತ್ತೇಜನ ನೀಡಲಾಗಿದೆ. | | | **R** |
| 5 | ವಾಕ್–ಶ್ರವಣ, ವಿಕಲಚೇತನ ಮಕ್ಕಳೂ ಕೂಡ ತಮ್ಮ ಭಾವನೆಗಳನ್ನು ಹಂಚಿಕೊಳ್ಳಲು ಶಿಕ್ಷಕರಿಗೆ ಸಂಕೇತ ಭಾಷೆ ಮತ್ತು ಬ್ರೈಲ್ ಲಿಪಿಯ ಬಗ್ಗೆ ತರಬೇತಿ ನೀಡುವುದು. | | | **R** |

ವಿಭಾಗ IV A, B ಮತ್ತು C ಯಲ್ಲಿ ರಕ್ಷಣೆಯ ಕಾರ್ಯತಂತ್ರಗಳು, ಅಪರಾಧ ಅಥವಾ ಉಲ್ಲಂಘನೆಯ ವರದಿ ಮತ್ತು ವೈಯುಕ್ತಿಕ ಹಾಗೂ ಲೈಂಗಿಕ ವಿಧಾನಗಳನ್ನು ಒದಗಿಸಲಾಗಿದೆ.

| ವಿಭಾಗ III - ಸಾಮಾಜಿಕ ಮತ್ತು ಭಾವನಾತ್ಮಕ ಸುರಕ್ಷತೆ | | | | |
|---|---|---|---|---|
| ಕ್ರ. ಸಂ. | ಸೂಚಕಗಳು | ಹೌದು/ ಇಲ್ಲ | ಷರಾ | ಕಡ್ಡಾಯ/ಶಿಫಾರಸ್ಸು ಮಾಡಲಾದುದು |
| 1 | ಮಕ್ಕಳು ತಮ್ಮ ಭಾವನೆಗಳನ್ನು ಸಮರ್ಪಕವಾಗಿ ನಿರ್ವಹಿಸಲು ಮತ್ತು ಸಮಾನ ವಯಸ್ಕರೊಂದಿಗೆ ಆರೋಗ್ಯಕರ ಸಂಬಂಧಗಳನ್ನು ಬೆಳೆಸಿಕೊಳ್ಳಲು ಅನುಕೂಲವಾಗುವಂತೆ, ವಯಸ್ಸಿಗೆ ಅನುಗುಣವಾದ ಸಾಮಾಜಿಕ ಕೌಶಲ್ಯಗಳ ಬಗ್ಗೆ ಮಕ್ಕಳಿಗೆ ಮಾರ್ಗದರ್ಶನ ಮತ್ತು ತರಬೇತಿಯನ್ನು ನೀಡುವುದು.<br>ತರಬೇತಿಯು ವಿಶೇಷ ಅಗತ್ಯವುಳ್ಳ/ವಿಕಲಚೇತನ ಮಕ್ಕಳ ಅಗತ್ಯತೆಗಳನ್ನೂ ಒಳಗೊಂಡಿರುವಂತಿರಬೇಕು. | | | **R** |
| 2 | ವಿದ್ಯಾರ್ಥಿಗಳಿಗೆ ಆತ್ಮಾಭಿಮಾನ ಮತ್ತು ಆತ್ಮವಿಶ್ವಾಸವನ್ನು ಬೆಳೆಸುವ, ನಕಾರಾತ್ಮಕ ಒತ್ತಡಗಳನ್ನು ಗುರುತಿಸಲು, ಜೀವನ ಕೌಶಲ್ಯಗಳನ್ನು ಬೆಳೆಸಿಕೊಳ್ಳಲು, ಪರೀಕ್ಷೆಗಳಿಗೆ ಸನ್ನದ್ಧರಾಗಲು ಅನುಕೂಲವಾಗುವಂತೆ ತರಬೇತಿಗಳನ್ನು ನೀಡುವ ಮೂಲಕ ಮಕ್ಕಳಲ್ಲಿರುವ ಭಯ, ಸಿಟ್ಟು ಮತ್ತು ಒತ್ತಡವನ್ನು ನಿರ್ವಹಿಸಲು ಹಾಗೂ ತಮ್ಮ ಅಥವಾ ಇತರರ ಮೇಲಾಗುವ ಹಲ್ಲೆ ಮುಂತಾದವುಗಳನ್ನು ತಡೆಯಲು ಅವರನ್ನು ಸಂವೇದನಾಶೀಲನ್ನಾಗಿಸುವುದು. | | | **R** |
| 3 | ಕಳ್ಳತನ, ಗೋಡೆಯ ಮೇಲೆ ಅನಾವಶ್ಯಕವಾಗಿ ಬರೆಯುವುದು, ದೈಹಿಕವಾಗಿ ಅಥವಾ ಭಾವನಾತ್ಮಕವಾಗಿ ಇನ್ನೊಬ್ಬ ವಿದ್ಯಾರ್ಥಿ ಅಥವಾ ವಯಸ್ಕರಿಗೆ ಹಾನಿ ಮಾಡುವುದು ಮತ್ತು ಯಾವುದೇ ಸಮಾಜ ವಿರೋಧಿ ನಡತೆಯನ್ನು | | ಬೆದರಿಕೆ ವಿಚಾರಗಳಿಗೆ ಸಂಬಂಧಿಸಿದಂತೆ ಎನ್‌ಸಿಪಿಸಿಆರ್ ರವರು ಹೊರಡಿಸಿರುವ ಮಾರ್ಗಸೂಚಿಯನ್ನು ಶಾಲೆಗಳು | M |

| | | | | |
|---|---|---|---|---|
| | ಪ್ರದರ್ಶಿಸುವಂತಹ ದುರ್ವರ್ತನೆಗಳನ್ನು ಮತ್ತು ಅನುಚಿತವಲ್ಲದ ಸಾಮಾಜಿಕ ವರ್ತನೆಯನ್ನು ಕಟ್ಟುನಿಟ್ಟಾಗಿ ಮೇಲ್ವಿಚಾರಣೆಮಾಡುವುದು ಮತ್ತು ಅವುಗಳನ್ನು ಪರಿಹರಿಸಲಾಗಿದೆ. | | ಜಾರಿಗೊಳಿಸುವುದು: http://www.ncpcr.gov.in/view_file.php?fid=108 | |
| 4 | ಆಪ್ತಸಮಾಲೋಚನೆ ಹಾಗೂ ಉಲ್ಲೇಖನ ವ್ಯವಸ್ಥೆಯನ್ನು ರೂಪಿಸುವುದು ಮತ್ತು ಅದರ ಬಗ್ಗೆ ಮಕ್ಕಳಿಗೆ ಅರಿವು ಮೂಡಿಸುವುದು. | | | M |
| 5 | ಮಕ್ಕಳು ಇತರ ಮಕ್ಕಳೊಂದಿಗೆ ಸಂವಾದ ನಡೆಸಲು ಮತ್ತು ಇತರ ಮಕ್ಕಳ ಮೇಲಾಗುವ ಹಲ್ಲೆ/ನಿಂದನೆಗಳನ್ನು ತಡೆಯುವ ಉದ್ದೇಶದಿಂದ ನೀತಿ ಸಂಹಿತೆ (ನಡತೆಯ ಮಾರ್ಗಸೂಚಿ) ಯನ್ನು ಹೊಂದುವುದು ಮತ್ತು ಮಕ್ಕಳಿಗೆ ಅದರ ಬಗ್ಗೆ ಅರಿವು ಮೂಡಿಸುವುದು. | | ಕೆಲವೊಮ್ಮೆ ಹಿರಿಯ ಮಕ್ಕಳು, ಕಿರಿಯ ಮಕ್ಕಳ ಮೇಲೆ ಜಾತಿ, ವರ್ಗ, ವಿಕಲತೆ, ಲಿಂಗತ್ವ ಮುಂತಾದವುಗಳ ಆಧಾರದ ಮೇಲೆ ಹಲ್ಲೆ ನಡೆಸುವರು | M |
| 6 | ವಿದ್ಯಾರ್ಥಿಗಳು ತಮ್ಮ ಅಥವಾ ಇತರರ ಮೇಲಾಗುವ ಹಲ್ಲೆಯ ಬಗ್ಗೆ ವರದಿ ಮಾಡುವಲ್ಲಿ ಸುರಕ್ಷತಾ ಭಾವವನ್ನು ಉಂಟುಮಾಡುವಂತಹ, ಕಾರ್ಯತಂತ್ರಗಳನ್ನು ರೂಪಿಸುವುದು.<br>ಶಾಲೆಯು ಶಿಸ್ತು ಪಾಲನೆ ಮತ್ತು ಸುರಕ್ಷತೆಗೆ ಸಂಬಂಧಿಸಿದ ಸಮಸ್ಯೆಗಳನ್ನು ನಿಶ್ಪಕ್ಷಪಾತವಾಗಿ ಬಗೆಹರಿಸುವುದು. | | ಮಾರ್ಗಸೂಚಿಗಳಲ್ಲಿ ಶಿಫಾರಸ್ಸು ಮಾಡಿರುವಂತೆ ಕಾರ್ಯತಂತ್ರಗಳನ್ನು ರೂಪಿಸುವುದು. | M |
| 7 | ವಿದ್ಯಾರ್ಥಿಗಳಿಗೆ ಯೋಗ, ಧ್ಯಾನ ಮತ್ತು ಸ್ವ-ರಕ್ಷಣೆ ಕಾರ್ಯಕ್ರಮಗಳನ್ನು ನಡೆಸುವುದು. | | | R |
| 8 | ಶಾಲೆಯಲ್ಲಿ ಸಕಾರಾತ್ಮಕ ಶಿಸ್ತುಪಾಲನಾ ಮಾರ್ಗ ಮತ್ತು ಕ್ರಮಗಳನ್ನು[4] ಅಳವಡಿಸಿಸುವುದು ಹಾಗೂ ಶಿಕ್ಷಕರು ಮತ್ತು ಶಾಲಾ ಆಡಳಿತ ಅದನ್ನು ಅನುಸರಿಸುವುದು. | | | **R** |
| 9 | ಶಾಲೆಯು ವಿದ್ಯಾರ್ಥಿಗಳ ಗೈರು ಹಾಜರಿಯನ್ನು ತಡೆಗಟ್ಟಲು ಮತ್ತು ಹಾಜರಾತಿ ಪ್ರಮಾಣವನ್ನು ಹೆಚ್ಚಿಸಲು | | ಶಾಲೆಯು ವಿಶೇಷ ಕಲಿಕೆಯ ಅಗತ್ಯವಿರುವ ವಿದ್ಯಾರ್ಥಿಗಳ | **R** |

| | | | | |
|---|---|---|---|---|
| | ನಿಯಮಿತ ಪರಿಶೀಲನೆ ನಡೆಸುವುದು ಮತ್ತು ಸೂಕ್ತ ಕ್ರಮ ಕೈಗೊಳ್ಳುವುದು.<br>ಓದಿನಲ್ಲಿ ಹಿಂದಿರುವ, ವಿಶೇಷ ಅಗತ್ಯವಿರುವ, ಸಂಕಷ್ಟದಲ್ಲಿರುವ ಮತ್ತು ಶಾಲೆ ಬಿಡುವ ಮಕ್ಕಳಿಗೆ ವಿಶೇಷ ಬೆಂಬಲ ವ್ಯವಸ್ಥೆಯನ್ನು ರೂಪಿಸುವುದು ಹಾಗೂ ಅಂಥಹ ಮಕ್ಕಳನ್ನು ಗುರುತಿಸಿ, ಸೌಲಭ್ಯಗಳನ್ನು ಕಲ್ಪಿಸುವ ಮೂಲಕ ಶಾಲೆಯಲ್ಲಿ ತಮ್ಮ ವಿದ್ಯಾಭ್ಯಾಸವನ್ನು ಮುಂದುವರೆಸಲು ಅವಕಾಶ ನೀಡುವುದು.<br>ರಕ್ಷಣೆ ಮತ್ತು ಸುರಕ್ಷತೆಯನ್ನು ಖಚಿತಪಡಿಸಲು ಬೆಂಬಲ ವ್ಯವಸ್ಥೆಗೆ ಸೂಕ್ತ ಉಲ್ಲೇಖವನ್ನು ಕಲ್ಪಿಸುವುದು. | | ಪಟ್ಟಿಯನ್ನು ತಯಾರಿಸುವುದು ಮತ್ತು ನಿಯಮಿತವಾಗಿ ಅಪ್‌ಡೇಟ್ ಮಾಡುವುದು.<br>ಶಾಲೆಯು ಬಂಬೆಲ ಸೌಲಭ್ಯಗಳಿಗೆ ಉಲ್ಲೇಖಿಸಲಾದ ವಿದ್ಯಾರ್ಥಿಗಳ ಮಾಹಿತಿಯನ್ನು ನಿರ್ವಹಿಸುವುದು. | |

[4] ಮಕ್ಕಳ ರಕ್ಷಣಾ ನೀತಿಯ ವಿಭಾಗ 2ರಲ್ಲಿ ಸಕಾರಾತ್ಮಕ ಶಿಸ್ತಿನ ಕಾರ್ಯವಿಧಾನಗಳ ಬಗ್ಗೆ ವಿವರಿಸಿದೆ.

IV A, B ಮತ್ತು C ವಿಭಾಗವು ಒದಗಿಸುವಂತೆ ಯಾಂತ್ರಿಕ ರಕ್ಷಣೆ, ಅಪರಾದ ಅಥವಾ ಉಲ್ಲಂಘನೆಯ ವರದಿ ಮತ್ತು ಸಾಮಾಜಿಕ ಮತ್ತು ಭಾವನಾತ್ಮಕ ಸುರಕ್ಷತೆ ಇತರೇ ವಿಧಾನಗಳನ್ನು ಖಚಿತಪಡಿಸಿಕೊಳ್ಳುವುದು.

| ವಿಭಾಗ IV – ವೈಯುಕ್ತಿಕ, ಲೈಂಗಿಕ, ಸಾಮಾಜಿಕ ಮತ್ತು ಭಾವನಾತ್ಮಕ ರಕ್ಷಣೆಯ ಕಾರ್ಯವಿಧಾನ ಮತ್ತು ಶಿಷ್ಠಾಚಾರಗಳು | | | | |
|---|---|---|---|---|
| ವಿಭಾಗ IV A- ಮಕ್ಕಳ ರಕ್ಷಣಾ ಕಾರ್ಯತಂತ್ರಗಳು | | | | |
| ಕ್ರ. ಸಂ. | ಸೂಚಕಗಳು | ಹೌದು/ ಇಲ್ಲ | ಷರಾ | ಕಡ್ಡಾಯ/ ಶಿಫಾರಸ್ಸು ಮಾಡಲಾದುದು |
| 1 | ಮಕ್ಕಳಿಗೆ ಸುರಕ್ಷಿತ ವಾತಾವರಣ ಕಲ್ಪಿಸಲು, ಹಲ್ಲೆ, ಹಾನಿ ಅಥವಾ ಶೋಷಣೆಗಳಿಂದ ರಕ್ಷಣೆಯನ್ನು ನೀಡಲು ಶಾಲೆಯಲ್ಲಿ ಸೂಕ್ತ ಮಾರ್ಗಸೂಚಿಗಳು ಮತ್ತು ವರದಿಯ ಕಾರ್ಯತಂತ್ರಗಳನ್ನೊಳಗೊಂಡ ಮಕ್ಕಳ ರಕ್ಷಣಾ ನೀತಿಯನ್ನು ಹೊಂದುವುದು. | | ಶಿಕ್ಷಣ ಸಂಸ್ಥೆಗಳಿಗಾಗಿ ರಾಜ್ಯ ಸರ್ಕಾರದ ಮಕ್ಕಳ ರಕ್ಷಣಾ ನೀತಿಯಲ್ಲಿ ನೀಡಿರುವ ಅನುಬಂಧವನ್ನು ಶಾಲೆಗಳು ಅಳವಡಿಸಿಕೊಳ್ಳುವುದು. | M |
| 2 | ಶಾಲೆಯ ಮಕ್ಕಳ ರಕ್ಷಣಾ ನೀತಿಯು ಕೆಳಕಂಡ ಅಂಶಗಳನ್ನು ದೃಢವಾಗಿ ತಿಳಿಸುತ್ತದೆ.<br>ಬೋಧಕ ಮತ್ತು ಬೋಧಕೇತರ ಸಿಬ್ಬಂಧಿಗಳಿಂದ ವಿಧ್ಯಾರ್ಥಿಗಳಿಗೆ ಆಗುವ ಕಠಿಣ ದೈಹಿಕ ಶಿಕ್ಷೆ ಮತ್ತು ಮಾನಸಿಕ ಶೋಷಣೆಯನ್ನು ನಿಷೇಧಿಸುವುದು.<br>ಶಾಲಾ ಆವರಣದಲ್ಲಿ ಎಲ್ಲಾ ಸ್ವರೂಪದ ಬೆದರಿಕೆ ಹಾಕುವ ಕೃತ್ಯಗಳಾದ ಬೆದರಿಕೆ ಹಾಕುವಿಕೆ, ರ್‍ಯಾಗಿಂಗ್, ಟೀಕೆ, ಒರಟು ಭಾಷೆ ಮತ್ತು ದುರುದ್ದೇಶದಿಂದ ಗಾಳಿಮಾತುಗಳನ್ನು ಹರಡುವುದರಿಂದ ಮಕ್ಕಳು ದೂರವಿರುವಂತೆ ತಡೆಯುವುದು.<br>ಶಾಲೆಗಳು ಮಕ್ಕಳನ್ನು ಧರ್ಮ, ಜಾತಿ, ಲಿಂಗ, ಭಾಷೆ, ಆರ್ಥಿಕ ಸ್ಥಿತಿಗತಿಗಳು, ಅಥವಾ ಅಸಾಮಾರ್ಥ್ಯ ಅಥವಾ ಯಾವುದೇ ಇತರ ಅಂಶದ ಆಧಾರದ ಮೇಲೆ ವಿಧ್ಯಾರ್ಥಿಗಳನ್ನು ಮತ್ತು ತಾರತಮ್ಯ/ಪೂರ್ವಾಗ್ರಹಗಳನ್ನು ಮಾಡುವುದನ್ನು ಶಾಲೆಯು ಸಹಿಸುವುದಿಲ್ಲ. | | ಶಾಲೆಗಳಲ್ಲಿ ಕಠಿಣ ದೈಹಿಕ ಶಿಕ್ಷೆಗಳನ್ನು ನಿಷೇಧಿಸುವ ಎನ್‌ಪಿಸಿಆರ್ ಮಾರ್ಗಸೂಚಿಗಳು: http://ncpcr.gov.in/showfile.php?lang=1&level=1&&sublinkid=234&lid=153<br>ವರದಿಯಾದ ಪ್ರಕರಣ ಮತ್ತು ಕೈಗೊಂಡ ಕ್ರಮಗಳ ಬಗ್ಗೆ ದಾಖಲೆ ನಿರ್ವಹಿಸುವುದು. | M |

| | | | | |
|---|---|---|---|---|
| 3 | ಶಾಲೆಯು ಸಂವೇದನಾಶೀಲ ಸಿಬ್ಬಂದಿಯನ್ನು ಮಕ್ಕಳ ರಕ್ಷಣಾಧಿಕಾರಿಯಾಗಿ ನೇಮಿಸುವುದು. ಸದರಿಯವರು ಈ ನಿಟ್ಟಿನಲ್ಲಿ ಸೂಕ್ತ ತರಬೇತಿಯನ್ನು ಹೊಂದಿದ್ದು, ಎಲ್ಲಾ ಜವಾಬ್ದಾರಿಗಳನ್ನು ನಿರ್ವಹಿಸುವುದು. | | ನೇಮಕಗೊಂಡ ದಿನಾಂಕ ಹಾಗೂ ತರಬೇತಿ ಹೊಂದಿದ ಬಗ್ಗೆ ದಾಖಲೆ ನಿರ್ವಹಣೆ | M |
| 4 | ಕರ್ನಾಟಕ ರಾಜ್ಯ ಶಿಕ್ಷಣ ಸಂಸ್ಥೆಗಳ ಮಕ್ಕಳ ರಕ್ಷಣಾ ನೀತಿಯ ಶಿಫಾರಸ್ಸಿನಂತೆ ಶಾಲೆಯಲ್ಲಿ ಮಕ್ಕಳ ರಕ್ಷಣಾ ಸಮಿತಿ[5]ಯನ್ನು ರಚಿಸುವುದು. ಸಮಿತಿಯ ಎಲ್ಲಾ ಸದಸ್ಯರಿಗೆ ಮಕ್ಕಳ ರಕ್ಷಣಾ ನೀತಿ, ಅವರ ಪಾತ್ರ ಮತ್ತು ಜವಾಬ್ದಾರಿಗಳು, ವರದಿಮಾಡುವ ಹಾಗೂ ಪರಿಹಾರ ಕಾರ್ಯತಂತ್ರಗಳ ಬಗ್ಗೆ ತಿಳಿಸುವುದು.<br>ಸದಸ್ಯರುಗಳು ಸಭೆಗಳಲ್ಲಿ ಕ್ರಿಯಾಶೀಲರಾಗಿ ಭಾಗವಹಿಸುವುದು ಮತ್ತು ಸುರಕ್ಷತಾ ಉಲ್ಲಂಘನೆ ಅಥವಾ ಮಕ್ಕಳ ಮೇಲಿನ ಹಲ್ಲೆ ಪ್ರಕರಣಗಳ ಬಗ್ಗೆ ಪ್ರಸ್ತುತ ಜಾರಿಯಲ್ಲಿರುವ ಕಾನೂನುಗಳಿಗನುಗುಣವಾಗಿ ಸಂವೇಧನಾಶೀಲತೆಯಿಂದ ಪ್ರತಿಕ್ರಿಯಿಸುವುದು.<br>ಮಕ್ಕಳ ರಕ್ಷಣಾ ಸಮಿತಿಯಲ್ಲಿ ನೋಂದಾಯಿತ ಪ್ರಕರಣಗಳು ಮತ್ತು ಕೈಗೊಂಡ ಕ್ರಮಗಳ ಬಗ್ಗೆ ಶಾಲೆಗಳು ಮಾಸಿಕ ವರದಿಯನ್ನು ತಯಾರಿಸುವುದು.<br>ಶಾಲೆಗಳು ಬಾಹ್ಯ ಸಮಿತಿಗಳು ಮತ್ತು ಮಂಡಳಿಗಳಿಗೆ ಸಲ್ಲಿಸುವ ಎಲ್ಲಾ ವರದಿಗಳಲ್ಲಿ ನೋಂದಾಯಿತ ಪ್ರಕರಣಗಳು ಮತ್ತು ಕೈಗೊಂಡ ಕ್ರಮಗಳ ಬಗ್ಗೆ ಮಾಹಿತಿಯನ್ನು ನೀಡುವುದು. | | ಶಾಲೆಯು ಸ್ವಯಂ ಸೇವಾ ಸಂಸ್ಥೆಗಳ ಹಾಗೂ ಸದರಿ ವಿಷಯದಲ್ಲಿ ನುರಿತ ವ್ಯಕ್ತಿಗಳ ಸಹಾಯವನ್ನು ಪಡೆಯುವುದು.<br>ಮಕ್ಕಳ ರಕ್ಷಣಾ ಸಮಿತಿಯು ಎರಡು ವಾರಕ್ಕೊಮ್ಮೆ ಅಥವಾ ಶಾಲಾ ಮಕ್ಕಳ ರಕ್ಷಣಾ ನೀತಿಯಲ್ಲಿ ನಿರ್ದೇಶಿಸಿದಂತೆ ಸಭೆ ಸೇರುವುದು ಮತ್ತು ಅನುಸರಣೆಯ ಮೂಲಕ ನಡವಳಿಯನ್ನು ದಾಖಲಿಸುವುದು.<br>ಶಾಲಾ ಮಕ್ಕಳ ಮೇಲಿನ ಲೈಂಗಿಕ ಕಿರುಕುಳ ಹಾಗೂ ಇತರೆ ದೌರ್ಜನ್ಯಗಳನ್ನು ನಿಯಂತ್ರಿಸಲು, ಸಾರ್ವಜನಿಕ ಶಿಕ್ಷಣ ಇಲಾಖೆಯು ಹೊರಡಿಸಿರುವ ಸುತ್ತೋಲೆಯನ್ವಯ ಮಕ್ಕಳ ರಕ್ಷಣಾ ಸಮಿತಿಯನ್ನು ಶಾಲೆಯಲ್ಲಿ ರಚಿಸುವುದು: http://www.schooleducation.kar.nic.in/pdffiles/ChildSafetyEng260714.pdf | **M** |

[5] ಮಕ್ಕಳ ರಕ್ಷಣಾ ಸಮಿತಿಯನ್ನು ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರದ ಸುತ್ತೋಲೆ ಸಂಖ್ಯೆ C7 pra.shi.a/sha.ma.ly.ki/2014-15, ರನ್ವಯ ರಚಿಸಲಾಗಿದೆ. ಅನುಬಂಧದಲ್ಲಿ ನೀಡಿದೆ.

| ಕ್ರ. ಸಂ. | ಸೂಚಕಗಳು | ಹೌದು/ ಇಲ್ಲ | ಷರಾ | ಕಡ್ಡಾಯ/ ಶಿಫಾರಸ್ಸು ಮಾಡಲಾದುದು |
|---|---|---|---|---|
| 5 | ಎಲ್ಲಾ ಬೋಧಕ, ಬೋಧಕೇತರ ಮತ್ತು ಗುತ್ತಿಗೆ ಸಿಬ್ಬಂದಿಗಳು ಹಾಗೂ ಇತರೆ ಸಿಬ್ಬಂದಿಗಳಿಗೆ ಮಕ್ಕಳ ರಕ್ಷಣಾ ನೀತಿ ಮತ್ತು ಮಾರ್ಗಸೂಚಿಗಳು ಹಾಗೂ ಮಕ್ಕಳಿಗೆ ಸಂಬಂಧಿಸಿದ ಕಾನೂನುಗಳ ಬಗ್ಗೆ ಜಾಗೃತಿ ಮೂಡಿಸುವುದು.<br>ಶಾಲೆಯು ತನ್ನ ಎಲ್ಲಾ ಮಾರಾಟಗಾರರು ಮತ್ತು ಗುತ್ತಿಗೆ ಸಂಸ್ಥೆಗಳಿಗೆ ಶಾಲೆಯ ಮಕ್ಕಳ ರಕ್ಷಣಾ ನೀತಿಯ ಬಗ್ಗೆ ತಿಳಿಸಿ, ಅವರಿಂದ ಲಿಖಿತವಾಗಿ ತಮ್ಮ ಸಂಸ್ಥೆಗಳಿಂದ ಶಾಲೆಯಲ್ಲಿ ಕೆಲಸಮಾಡುತ್ತಿರುವ ಸಿಬ್ಬಂದಿಗಳು ಶಾಲಾ ಮಕ್ಕಳ ರಕ್ಷಣಾ ನೀತಿಯನ್ನು ಓದಿ, ಅರ್ಥೈಸಿ ಕೊಂಡಿದ್ದಾರೆ, ಮತ್ತು ಅದಕ್ಕೆ ಬದ್ಧರಾಗಿರುತ್ತಾರೆ ಎಂಬ ಒಪ್ಪಿಗೆ ಪತ್ರವನ್ನು ಪಡೆಯುವುದು. | | ಆರಂಭದಲ್ಲಿ ಪ್ರಕ್ರಿಯೆಯನ್ನು ಬಾಹ್ಯ ತಜ್ಞರ ಸಹಾಯದಿಂದ ನಡೆಸುವುದು.<br>ಮಕ್ಕಳ ಸುರಕ್ಷತೆ ಮತ್ತು ಭದ್ರತೆ ಹಾಗೂ ಶಿಕ್ಷಕರಿಗೆ ತರಬೇತಿ ನೀಡುವ ಕುರಿತು ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯದ ಮಾರ್ಗಸೂಚಿಗಳು: http://mhrd.gov.in/sites/upload_files/mhrd/files/upload_document/20141014_131513.pdf | M |
| 6 | ಮಕ್ಕಳ ರಕ್ಷಣಾ ನೀತಿ/ ಮಾರ್ಗಸೂಚಿಗಳು/ ಮಕ್ಕಳ ಕಾನೂನುಗಳು ಮತ್ತು ವರದಿ ಮಾಡುವ ಕಾರ್ಯತಂತ್ರಗಳ ಬಗ್ಗೆ ಎಲ್ಲಾ ಪೋಷಕರು ಮತ್ತು ವಿದ್ಯಾರ್ಥಿಗಳಿಗೆ ಅರಿವು ನೀಡುವುದು.<br>ಮಕ್ಕಳ ರಕ್ಷಣಾ ನೀತಿಯ ಪ್ರಮುಖ ಅಂಶಗಳನ್ನು ವಿದ್ಯಾರ್ಥಿಗಳು, ಪೋಷಕರು ಮತ್ತು ಶಾಲೆಗೆ ಭೇಟಿ ನೀಡುವವರು ನೋಡುವಂತೆ ಶಾಲೆಯಲ್ಲಿ ಪ್ರದರ್ಶಿಸುವುದು. | | ಶಾಲೆಯು ಪಾಲಕರು/ಪೋಷಕರಿಗೆ ಗಮನಿಸಿ, ಓದಿ, ಸಹಿ ಮಾಡಲು ತಿಳಿಸುವುದು. | M |

| | | | | |
|---|---|---|---|---|
| 7 | ಮಕ್ಕಳ ಜೊತೆ ಕೆಲಸ ನಿರ್ವಹಿಸಲು ಅವಕಾಶ ನೀಡುವ ಮೊದಲು ಭೋಧಕ, ಭೋಧಕೇತರ ಗುತ್ತಿಗೆ, ಸ್ವಯಂ ಸೇವಕರು ಮತ್ತು ಇತರೆ ಸಿಬ್ಬಂದಿಗಳನ್ನು ಪರಿಶೀಲಿಸಿ ನೇಮಕಾತಿ ಮಾಡುವುದು. | | ಸರ್ಕಾರದ ಮಾರ್ಗಸೂಚಿಗಳನ್ವಯ ಪೋಲಿಸ್ ಪರಿಶೀಲನೆಯನ್ನು ನಡೆಸುವುದು. http://www.schooleducation.kar.nic.in/pdffiles/ChildSafetyEng260714.pdf ಅಪರಾಧ ಪ್ರಕರಣಗಳ ಹಿನ್ನೆಲೆಯುಳ್ಳ ಯಾವುದೇ ಸಿಬ್ಬಂದಿಗಳನ್ನು ನೇಮಿಸಿಕೊಳ್ಳದಿರುವುದು. | M |
| 8 | ಶಾಲೆಯು ಸಿಬ್ಬಂದಿಗಳನ್ನು ನೇಮಕಾತಿ ಮಾಡಿಕೊಳ್ಳವಾಗ, ಮಕ್ಕಳ ಸುರಕ್ಷತೆ ಕುರಿತ ಅವರ ಮನೋಭಾವ, ಮಕ್ಕಳ ಮೇಲಿನ ಹಲ್ಲೆ, ಮಕ್ಕಳು ಮತ್ತು ಅವರ ಹಕ್ಕುಗಳ ಬಗ್ಗೆ ಸಂವೇದನೆ ಮತ್ತು ಮಕ್ಕಳ ಸಮಸ್ಯೆಗಳನ್ನು ಮಾಪನ ಮಾಡುವ ವ್ಯವಸ್ಥೆಯನ್ನು ಹೊಂದುವುದು. | | | R |
| 9 | ಶಾಲೆಯ ಮಕ್ಕಳ ರಕ್ಷಣಾ ನೀತಿಗೆ ಅನುಗುಣವಾಗಿ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು ಹಾಗೂ ಮಕ್ಕಳಿಗೆ ನೀತಿ ಸಂಹಿತೆ (ನಡವಳಿಕೆಯ ಮಾರ್ಗಸೂಚಿ) ಯನ್ನು ಹೊಂದುವುದು. | | ಮಕ್ಕಳ ರಕ್ಷಣಾ ನೀತಿಗೆ ಅನುಗುಣವಾಗಿ ನೀತಿ ಸಂಹಿತೆಯನ್ನು ಹೊಂದುವುದು. | M |
| 10 | ಶಾಲೆಯಲ್ಲಿ ಶಾಲಾ ಮೇಲ್ವಿಚಾರಣಾ ಸಮಿತಿ ಅಥವಾ ಪೋಷಕ-ಶಿಕ್ಷಕರ ಸಂಘವನ್ನು ರಚಿಸುವುದು ಮತ್ತು ನಿಯಮಿತವಾಗಿ ಸಭೆ ನಡೆಸುವುದು. ಸಭೆಯ ಕಾರ್ಯಸೂಚಿಯಲ್ಲಿ ಮಕ್ಕಳ ರಕ್ಷಣೆ ಮತ್ತು ಸುರಕ್ಷತೆಯ ಅಂಶಗಳನ್ನು ಸೇರಿಸಬೇಕು. ಮಕ್ಕಳ ರಕ್ಷಣಾ ವಿಚಾರಗಳಿಗೆ ಸಂಬಂಧಿಸಿದಂತೆ ಪೋಷಕರೊಂದಿಗೆ ಚರ್ಚೆ ನಡೆಸುವುದು ಮತ್ತು ಅವರ ಸಹಭಾಗತ್ವವನ್ನು ಪ್ರೋತ್ಸಾಹಿಸುವುದು. ಹಲ್ಲೆ ಮತ್ತು ಸುರಕ್ಷತಾ ಉಲ್ಲಂಘನೆ | | ಶಾಲೆಗಳು ಮಕ್ಕಳ ರಕ್ಷಣಾ ಸಮಿತಿ, ಶಾಲಾ ಮೇಲ್ವಿಚಾರಣಾ ಸಮಿತಿ ಅಥವಾ ಪೋಷಕ-ಶಿಕ್ಷಕರ ಸಂಘಗಳು ಮತ್ತು ಜಂಟಿ ಸಮಿತಿಗಳ ಸಭೆಗಳ ದಾಖಲೆಗಳನ್ನು ನಿರ್ವಹಿಸುವುದು. | M |

| | | | | |
|---|---|---|---|---|
| | ಪ್ರಕರಣಗಳನ್ನು ಸಮಿತಿಗೆ ವರದಿಮಾಡುವುದು. | | | |
| 11 | ಶಾಲಾ ಆಡಳಿತವು ಮಕ್ಕಳ ವಿಶೇಷ ಪೊಲೀಸ್ ಘಟಕ, ಮಕ್ಕಳ ಸಹಾಯವಾಣಿ (1098), ಮಕ್ಕಳ ಕಲ್ಯಾಣ ಸಮಿತಿ (CWC)/ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ (KSCPCR) ಗಳಂಥ ಮಕ್ಕಳ ರಕ್ಷಣಾ ಕಾರ್ಯತಂತ್ರ ವ್ಯವಸ್ಥೆಗಳ ಬಗ್ಗೆ ಅರಿವನ್ನು ಹೊಂದುವುದು.<br>ಶಾಲೆಯ ನಿಯೋಜಿತ ಮಕ್ಕಳ ರಕ್ಷಣಾ ಅಧಿಕಾರಿ, ಮಕ್ಕಳ ವಿಶೇಷ ಪೊಲೀಸ್ ಘಟಕ (ಎಸ್‌ಜೆಪಿಯು)ದ ಮಕ್ಕಳ ಕಲ್ಯಾಣಾಧಿಕಾರಿ, ಜಿಲ್ಲಾ ಮಕ್ಕಳ ರಕ್ಷಣಾ ಅಧಿಕಾರಿ (ಡಿಸಿಪಿಒ), ಮಕ್ಕಳ ಸಹಾಯವಾಣಿಗಳ ದೂರವಾಣಿ ಸಂಖ್ಯೆಗಳನ್ನು ಪ್ರದರ್ಶಿಸುವಂಥಹ ಪ್ರತ್ಯೇಕ ಮಕ್ಕಳ ಸುರಕ್ಷತಾ ಸೂಚನಾ ಫಲಕವನ್ನು ಹೊಂದುವುದು. | | ಸದರಿ ಮಾಹಿತಿಯನ್ನು ಪೂರ್ವಭಾವಿ ತರಬೇತಿಯ ಭಾಗವಾಗಿ ನೀಡಬೇಕು.<br>ದೂರವಾಣಿ ಸಂಖ್ಯೆಗಳನ್ನು ನಿಯಮಿತವಾ ಪರಿಶೀಲಿಸಿ ಹಾಕುವುದು. ಸಾರ್ವಜನಿಕ ಶಿಕ್ಷಣ ಇಲಾಖೆಯ ಸುತ್ತೋಲೆಯನ್ನು ಗಮನಿಸುವುದು:<br>http://www.schooleducation.kar.nic.in/pdffiles/ChildSafetyEng260714.pdf | M |
| 12 | ಶಾಲೆಯು ತುರ್ತು ಸಂದರ್ಭಗಳಲ್ಲಿ ಅಥವಾ ಅವಶ್ಯವಿದ್ದಲ್ಲಿ ಅರೆಕಾಲಿಕ ಅಥವಾ ಪೂರ್ಣಕಾಲಿಕ ಅಥವಾ ಕರೆಯ ಮೇರೆಗೆ ಬರುವ ಆಪ್ತಸಮಾಲೋಚಕರು ಅಥವಾ ಮನ:ಶಾಸ್ತ್ರಜ್ಞರನ್ನು ನೇಮಕ ಮಾಡಿಕೊಳ್ಳುವುದು<br>ಒಬ್ಬ ಹಿರಿಯ ಶಿಕ್ಷಕರನ್ನು ಸಹ ಆಪ್ತಸಮಾಲೋಚನೆ ನಡೆಸಲು ನೇಮಿಸುವುದು ಮತ್ತು ಅವಶ್ಯವಿದ್ದಲ್ಲಿ ಅವರನ್ನು ಬಳಸಿಕೊಳ್ಳುವುದು. | | ನೇಮಕಾತಿ ಪತ್ರವನ್ನು ಪರಿಶೀಲಿಸುವುದು. ಒಂದು ವೇಳೆ ಶಾಲೆಯು ಅರೆಕಾಲಿಕ ಆಪ್ತಸಮಾಲೋಚಕರನ್ನು ನೇಮಿಸಿಕೊಳ್ಳಲು ಸಾಧ್ಯವಾಗದಿದ್ದಲ್ಲಿ, ಹಿರಿಯ ಶಿಕ್ಷಕರನ್ನು ತರಬೇತಿಗೊಳಿಸುವುದು. | M |
| 13 | ಶಾಲೆಯು ಮಕ್ಕಳ ಸಹಭಾಗಿತ್ವವನ್ನು ಉತ್ತೇಜಿಸಲು, ಸುರಕ್ಷತೆ, ರಕ್ಷಣೆ ಮತ್ತು ಇತರ ವಿಷಯಗಳಿಗೆ ಸಂಬಂಧಿಸಿದ ವಿಚಾರಗಳನ್ನು ಶಿಕ್ಷಕರು ಮತ್ತು ಅಧಿಕಾರಿಗಳೊಂದಿಗೆ ಚರ್ಚಿಸಲು ಮತ್ತು | | | M |

| | | | | |
|---|---|---|---|---|
| | ಹಂಚಿಕೊಳ್ಳಲು ವೇದಿಕೆಯನ್ನು ಕಲ್ಪಿಸಿಕೊಡುವಂತಹ ಮಕ್ಕಳ ವೇಧಿಕೆಗಳನ್ನು ಅಥವಾ ಕ್ಲಬ್ಬುಗಳನ್ನು ಹೊಂದುವುದು.<br>ಈ ವೇದಿಕೆಗಳು ಎಲ್ಲಾ ರೀತಿಯ ಹಿನ್ನೆಲೆಗಳನ್ನು ಹೊಂದಿರುವ ವಿದ್ಯಾರ್ಥಿಗಳನ್ನು ಒಳಗೊಂಡಿರುತ್ತದೆ. | | | |
| 14 | ಶಾಲೆಯ ಪ್ರಮುಖ ಜಾಗಗಳಲ್ಲಿ ಮಕ್ಕಳ ಸುರಕ್ಷತೆಯನ್ನು ಕುರಿತ ಭಿತ್ತಿಪತ್ರಗಳನ್ನು ಪ್ರದರ್ಶಿಸುವುದು. | | ಇದರಿಂದ ಶಾಲೆಯ ಸಂಪರ್ಕದಲ್ಲಿರುವವರಿಗೆಲ್ಲಾ ಮಕ್ಕಳ ರಕ್ಷಣೆಯ ಬಗ್ಗೆ ಸಾಮಾನ್ಯ ಅರಿವು ಮೂಡಿಸುತ್ತದೆ | M |
| 15 | ಮಕ್ಕಳು ಮತ್ತು ಪೋಷಕರು ತಮ್ಮ ದೂರು/ಕುಂದುಕೊರತೆಗಳನ್ನು ಹೇಳಿಕೊಳ್ಳಲು ಶಾಲೆಯಲ್ಲಿ ಸಲಹಾ/ದೂರುಪೆಟ್ಟಿಗೆಯನ್ನು ಇಡುವುದು.<br>ಈ ಸಲಹೆ /ದೂರುಪೆಟ್ಟಿಗೆಗಳನ್ನು ಶಾಲೆಯ ಮಕ್ಕಳ ರಕ್ಷಣಾ ನೀತಿಯ ನಿಯಮಗಳಿಗನುಗುಣವಾಗಿ, ಶಾಲೆಯ ಮಕ್ಕಳ ರಕ್ಷಣಾ ಸಮಿತಿ[6]ಯು ತೆರೆಯುವುದು ಮತ್ತು ಪರಿಶೀಲಿಸುವುದು.<br>ದೂರು ಅಥವಾ ಸಲಹೆ ನೀಡಿದವರನ್ನು ಒಬ್ಬೊಂಟಿ ಮತ್ತು ಕಿರುಕುಳಕ್ಕಳಗಾಗದಂತೆ ಅಥವಾ ಬಲಿಪಶು ಆಗದಿರುವ ಬಗ್ಗೆ ಖಚಿತಪಡಿಸಿಕೊಳ್ಳುವುದು.<br>ಶಾಲೆಯು ಶಾಲಾ ಅಭಿವೃದ್ಧಿ ಮತ್ತು ನಿರ್ವಹಣಾ ಸಮಿತಿ ಅಥವಾ ಮಕ್ಕಳ ರಕ್ಷಣಾ ಸಮಿತಿಯ ಮುಂದೆ ಬಂದಂತಹ ದೂರುಗಳ ಬಗ್ಗೆ ದಾಖಲೆಯನ್ನು ನಿರ್ವಹಿಸುವುದು ಮತ್ತು ಸದರಿ ದಾಖಲೆಗಳು ಪರಿಶೀಲನೆಗೆ ಲಭ್ಯವಿರುವಂತೆ ನೋಡಿಕೊಳ್ಳುವುದು. | | ಸಾರ್ವಜನಿಕ ಶಿಕ್ಷಣ ಇಲಾಖೆಯು ಹೊರಡಿಸಿರುವ ಸುತ್ತೋಲೆಗೆ ಅನುಗುಣವಾಗಿ ಕ್ರಮ ಕೈಗೊಳ್ಳುವುದು ಮತ್ತು ಸಲಹೆ /ದೂರುಪೆಟ್ಟಿಗೆಗಳನ್ನು ಶಾಲೆಯಲ್ಲಿಡುವುದು:<br>http://www.schooleducation.kar.nic.in/pdffiles/ChildSafetyEng260714.pdf | M |
| 16 | ಸುರಕ್ಷಾ ಆಚರಣೆಗಳು ಮತ್ತು ರಕ್ಷಣಾ ಮಾನದಂಡಗಳನ್ನು ಶಾಲೆಯು ಪಾಲಿಸುವ | | ಶಾಲೆಯನ್ನು ಸುರಕ್ಷಿತ ಮತ್ತು ಮಕ್ಕಳ ಸಂವೇಧಿಯನ್ನಾಗಿಸಲು | M |

| | | | | |
|---|---|---|---|---|
| | ಬಗ್ಗೆ ಮಕ್ಕಳ ಸುರಕ್ಷಾ ಗಮನಿಕೆ ಪಟ್ಟಿಯನ್ನು ನಿಯಮಿತವಾಗಿ ಮಾಪನ ಮಾಡುವುದು. | | ಮತ್ತು ಮಾನದಂಡಗಳನ್ನು ಸುಧಾರಿಸಲು ವಾರ್ಷಿಕ ಮಾಪನವನ್ನು ಮಾಡುವುದು. | |
| 17 | ಯೋಜನೆ ಮತ್ತು ಹೊಸ ಸೌಲಭ್ಯ ಅಥವಾ ಅಸ್ತಿತ್ವದಲ್ಲಿರುವುದನ್ನು ಮಾಪನ ಮಾಡಲು ಮಕ್ಕಳ ಸುರಕ್ಷಾ ಗಮನಿಕೆ ಪಟ್ಟಿ (Check list) ಯನ್ನು ಉಪಯೋಗಿಸುವುದು. | | ಈ ನಿರಂತರ ಪ್ರಕ್ರಿಯೆಯು ಶಾಲೆಯು ಮಕ್ಕಳಿಗೆ ನೀಡುವ ಆರೈಕೆಯ ಗುಣಮಟ್ಟವನ್ನು ಹೆಚ್ಚಿಸುತ್ತದೆ. | M |

[6] ಮಕ್ಕಳ ರಕ್ಷಣಾ ಸಮಿತಿಯ ಸದಸ್ಯರನ್ನು ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರದ ಸುತ್ತೋಲೆ ಸಂಖ್ಯೆ C7 pra.shi.a/sha.ma.ly.ki/2014-15, ರನ್ವಯ ನಾಮಕರಣ ಮಾಡಲಾಗುತ್ತದೆ. ಅನುಬಂಧದಲ್ಲಿ ನೀಡಿದೆ.

| ವಿಭಾಗ IV – ವೈಯಕ್ತಿಕ ಮತ್ತು ಲೈಂಗಿಕ, ಸಾಮಾಜಿಕ ಮತ್ತು ಭಾವನಾತ್ಮಕ ರಕ್ಷಣೆಯ ವಿಧಾನ ಮತ್ತು ಶಿಷ್ಟಾಚಾರಗಳು | | | | |
|---|---|---|---|---|
| ವಿಭಾಗ IV B- ಹಲ್ಲೆ ಅಥವಾ ಸುರಕ್ಷತಾ ಉಲ್ಲಂಘನೆ ಕುರಿತು ವರದಿಯ ವಿಧಾನ | | | | |
| **ಕ್ರ ಸಂ** | **ಸೂಚಕಗಳು** | **ಹೌದು /ಇಲ್ಲ** | **ಷರಾ** | **ಕಡ್ಡಾಯ/ ಶಿಫಾರಸ್ಸು ಮಾಡ ಲಾದುದ್ದು** |
| 1 | ಶಾಲೆಗೆ ಸಂಬಂಧಿಸಿದ ಬೋಧಕ ಅಥವಾ ಬೋಧಕೇತರ ಅಥವಾ ಇತರೆಯವರಿಂದ ಮಕ್ಕಳ ಮೇಲಿನ ಹಲ್ಲೆ ಅಥವಾ ಸುರಕ್ಷತೆಯ ಉಲ್ಲಂಘನೆಯಾದಲ್ಲಿ, ಶಿಕ್ಷಕರು ಮತ್ತು ಇತರೆ ಸಿಬ್ಬಂದಿಗಳು ಮತ್ತು ಆಡಳಿತ ಮಂಡಳಿಯವರು ಪಾಲಿಸಬೇಕಾದ ಮಾರ್ಗಸೂಚಿಗಳು ಮತ್ತು ವರದಿಯ ವಿಧಾನಗಳನ್ನು ಸ್ಪಷ್ಟವಾಗಿ ರೂಪಿಸಲಾಗಿದೆ.<br>ಸಂಬಂಧಪಟ್ಟ ಮಕ್ಕಳ ರಕ್ಷಣಾಧಿಕಾರಿ, ಮಕ್ಕಳ ರಕ್ಷಣಾ ಸಮಿತಿ ಸದಸ್ಯರು, ಮುಖ್ಯ ಶಿಕ್ಷಕರು/ಮುಖ್ಯಸ್ಥರಿಗೆ ವಿಧಾನಗಳ ಬಗ್ಗೆ ಅರಿವು ಮೂಡಿಸುವುದು. | | ವರದಿಯ ಕಾರ್ಯವಿಧಾನವನ್ನು ರಾಜ್ಯ ಶಿಕ್ಷಣ ಸಂಸ್ಥೆಗಳ ಮಕ್ಕಳ ರಕ್ಷಣಾ ನೀತಿಯ ಅನುಸಾರವಾಗಿ ರೂಪಿಸುವುದು.<br>ಇದು ಶಾಲಾ ಮಕ್ಕಳ ರಕ್ಷಣಾ ನೀತಿಯ ಒಂದು ಭಾಗವಾಗಿದೆ. | M |

| | | | | |
|---|---|---|---|---|
| 2 | ಮಗುವಿನ ಮೇಲಿನ ಹಲ್ಲೆ ಸಂದರ್ಭದಲ್ಲಿ, ವರದಿ ಮಾಡುವ ಮತ್ತು ವಿಚಾರಣೆ ನಡೆಸುವಾಗ ಶಾಲಾ ಆಡಳಿತ ವರ್ಗವು ಅಗತ್ಯವಿರುವೆಡೆಗಳಲ್ಲಿ ಮಗುವಿನ ಪರವಾದ ಸಂವೇದನಾಶೀಲ ಪ್ರಕ್ರಿಯೆಯನ್ನು ಕಾನೂನಿಗೆ ಅನುಸಾರವಾಗಿ ಪಾಲಿಸುತ್ತದೆ<br>ವರದಿ ಮತ್ತು ಪರಿಶೀಲನಾ ಪ್ರಕ್ರಿಯೆಯ ಹಂತಗಳಲ್ಲಿ ಮಗು ಯಾವುದೇ ರೀತಿಯಲ್ಲಿ ಆಘಾತಕ್ಕೊಳಗಾಗದ ರೀತಿಯಲ್ಲಿ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುವುದು ಮತ್ತು ಪ್ರಕರಣದ ಗೌಪ್ಯತೆಯನ್ನು ಕಾಪಾಡಿಕೊಳ್ಳುವುದು. | | ಕಾರ್ಯವಿಧಾನಗಳನ್ನು ಶಿಕ್ಷಣ ಸಂಸ್ಥೆಗಳ ಮಕ್ಕಳ ರಕ್ಷಣಾ ನೀತಿಯಲ್ಲಿ ವಿವರಿಸಿದೆ.<br><br>ಎಲ್ಲಾ ಪ್ರಕರಣಗಳನ್ನು ದಾಖಲಿಸುವುದು ಮತ್ತು ನಿಯಮಿತವಾಗಿ ಅಪ್‌ಡೇಟ್ ಮಾಡುವುದು. | M |
| 3 | ಲೈಂಗಿಕ ಅಪರಾಧ ಪ್ರಕರಣಗಳಲ್ಲಿ, ಆಪಾದಿತನು ಮಗುವನ್ನು ಬೇಟಿಮಾಡದಂತೆ ಸೂಕ್ತ ಕ್ರಮಗಳನ್ನು ಕೈಗೊಳ್ಳುವುದು. | | ಆಪಾದಿತನ ವಿರುದ್ಧ ತುರ್ತು ಮತ್ತು ಸೂಕ್ತ ಕ್ರಮ ಕೈಗೊಳ್ಳುವುದು. | M |
| 4 | ಹಲ್ಲೆ/ಉಲ್ಲಂಘನೆ ಬಗ್ಗೆ ಮಕ್ಕಳ ಸುರಕ್ಷಾ ಸಮಿತಿಗೆ ತಿಳಿಸುವುದು ಮತ್ತು ಸಮಿತಿಯ ಸದಸ್ಯರು ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುವುದು | | ಎಲ್ಲಾ ಪ್ರಕರಣಗಳನ್ನು ದಾಖಲಿಸುವುದು ಮತ್ತು ಕೈಗೊಂಡ ಕ್ರಮದ ಬಗ್ಗೆ ನಿಯಮಿತವಾಗಿ ಅಪ್‌ಡೇಟ್ ಮಾಡುವುದು. | M |
| 5 | ಮಕ್ಕಳ ರಕ್ಷಣಾಧಿಕಾರಿ/ಮುಖ್ಯಸ್ಥರು ಎಲ್ಲಾ ಕಾರ್ಯವಿಧಾನಗಳನ್ನು ಅನುಸರಿಸುವುದು ಮತ್ತು ಅಗತ್ಯವಿರುವಾಗ ಪೊಲೀಸ್/ಎಸ್‌ಜೆಪಿಯು/ಮಕ್ಕಳ ಕಲ್ಯಾಣ ಸಮಿತಿಗೆ ತಿಳಿಸುವುದು. | | | M |
| 6. | ಲೈಂಗಿಕ ಅಪರಾಧವು ಸಂಭವಿಸಿದ ಸಂದರ್ಭದಲ್ಲಿ ಶಾಲಾ ಆಡಳಿತ ವರ್ಗವು ಬಾಧಿತ ಮಗುವಿನ/ಮಕ್ಕಳ ಮತ್ತು ಅದರ ಕುಟುಂಬದ ಪುನರ್ವಸತಿಗೆ ಸಹಾಯ/ನೆರವು ನೀಡುತ್ತದೆ ಮಗು ಮತ್ತು ಕುಟುಂಬವನ್ನು ಗೌರವಯುತವಾಗಿ ಮತ್ತು ಸೂಕ್ಷ್ಮವಾಗಿ ನೋಡಿಕೊಳ್ಳುವುದನ್ನು ಖಚಿತಪಡಿಸಿಕೊಳ್ಳುವುದು. ಶಿಕ್ಷಕರು, ಸಿಬ್ಬಂದಿಗಳು ಮತ್ತು ವಿದ್ಯಾರ್ಥಿಗಳಿಗೆ ಜಾಗೃತಿ ಮೂಡಿಸುವ ಮೂಲಕ, ಹಲ್ಲೆಗೊಳಗಾದ ಮಗುವಿನ ಹಿತಕರವಾದ ವಾತಾವರಣವನ್ನು ಕಲ್ಪಿಸಲು ಮತ್ತು ಶಾಲೆಯಲ್ಲಿ ವ್ಯಾಸಂಗವನ್ನು ಮುಂದುವರೆಸಲು ಅನುಕೂಲ ಕಲ್ಪಿಸುವುದು. | | | M<br><br>R |

| | | | | |
|---|---|---|---|---|
| | ಹಲ್ಲೆ ಪ್ರಕರಣವು ಶಾಲೆಯಿಂದ ಹೊರಗಡೆ ಸಂಭವಿಸಿದಾಗಲೂ ಶಾಲೆ ಇದೇ ಬಗೆಯ ಬೆಂಬಲವನ್ನು ನೀಡುವುದು<br>ಕಾನೂನು ಅವಶ್ಯಕತೆಗಳನ್ನು ಪೂರೈಸಲು ಸಹಕಾರವನ್ನು ನೀಡಲಾಗುತ್ತದೆ | | | M |
| 7 | ಹಲ್ಲೆ ಅಥವಾ ಸುರಕ್ಷತಾ ಉಲ್ಲಂಘನೆಯು ಸಂಜ್ಞಾತ್ಮಕ ಸ್ವರೂಪದ್ದಾಗಿರದಿದ್ದಲ್ಲಿ, ಮಕ್ಕಳ ರಕ್ಷಣಾ ಸಮಿತಿ ಮತ್ತು ಶಾಲೆಯ ಆಡಳಿತ ವರ್ಗವು ಶಾಲೆಯ ಮಕ್ಕಳ ರಕ್ಷಣಾ ನೀತಿ ಅಥವಾ ರಾಜ್ಯದ ಶಿಫಾರಸ್ಸಿನಂತೆ ಕೈಗೊಳ್ಳಬಹುದಾದ ಕ್ರಮ ಮತ್ತು ದಂಡನಾತ್ಮಕ ಪರಿಹಾರದ ಕ್ರಮಗಳನ್ನು ನಿರ್ಧರಿಸುವುದು. | | ಪ್ರಕರಣ ಮತ್ತು ಕೈಗೊಂಡ ಕ್ರಮದ ಬಗ್ಗೆ ದಾಖಲಿಸುವುದು | M |
| 8 | ಲೈಂಗಿಕ ಅಪರಾಧದ ಆರೋಪಿಯನ್ನು ಕೋರ್ಟ್‌ನ ವಿಚಾರಣೆ ಮುಗಿಯುವವರೆಗೂ ಅಮಾನತ್ತಿನಲ್ಲಿಡುವುದು ಮತ್ತು ಅಪರಾಧಿ ಎಂದು ಸಾಭೀತಾದಲ್ಲಿ ಸೇವೆಯಿಂದ ವಿಮುಕ್ತಿಗೊಳಿಸುವುದು. | | ಪ್ರಕರಣ ಮತ್ತು ಕೈಗೊಂಡ ಕ್ರಮದ ಬಗ್ಗೆ ದಾಖಲಿಸುವುದು | M |
| 9 | ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯಿಂದ ಅಥವಾ ಶಾಲೆಗೆ ಸಂಬಂಧಿಸಿದ ಇತರೆಯವರಿಂದ ಹಲ್ಲೆ ಸಂಭವಿಸಿದ ಸಂದರ್ಭದಲ್ಲಿ, ಶಾಲೆಯು ಇತರೇ ಮಕ್ಕಳಿಗೆ ಆಪ್ತಸಮಾಲೋಚನೆ ನೀಡುವ ಕಾರ್ಯವಿಧಾನಗಳನ್ನು ಹೊಂದಿರುವುದು. | | ಹೇಳಿಕೆ ಮತ್ತು ಕೈಗೊಂಡ ಕ್ರಮಗಳನ್ನು ದಾಖಲಿಸುವುದು | M |
| 10 | ಶಾಲೆಯು ಮಾಧ್ಯಮದವರಿಗೆ ಮಾಹಿತಿ ನೀಡುವಾಗ ಎಚ್ಚರಿಕೆ ಮತ್ತು ಸೂಕ್ಷ್ಮತೆಯಿಂದ ಮಗು ಮತ್ತು ಕುಟುಂಬದ ಖಾಸಗೀತನ ಹಾಗೂ ಗೌಪ್ಯತೆಯ ಹಕ್ಕನ್ನು ಎತ್ತಿಹಿಡಿಯುವುದು. | | ಬಲಿಪಶುವಾಗಿರುವ ಮಗುವಿನ ಕುರಿತು ವರದಿ ಮಾಡುವಾಗ ನಿಯಮಗಳನ್ನು ಉಲ್ಲಂಘಿಸುವ ಮಾಧ್ಯಮಗಳ ಮೇಲೆ ಕೈಗೊಳ್ಳಬಹುದಾದ ಕ್ರಮಗಳನ್ನು POCSO ಕಾಯ್ದೆಯಲ್ಲಿ ವಿವರಿಸಿದೆ:<br>http://wcd.nic.in/sites/default/files/childprotection31072012.pdf | M |
| 11 | ರಾಜ್ಯ ಮಕ್ಕಳ ರಕ್ಷಣಾ ನೀತಿಯಲ್ಲಿ ಒದಗಿಸಿರವ ಕ್ರಮಗಳನ್ನು ಶಿಕ್ಷಣ ಸಂಸ್ಥೆಗಳು ಅನುಸರಿಸುವುದು. | | | M |

| ವಿಭಾಗ IV – ವೈಯಕ್ತಿಕ ಮತ್ತು ಲೈಂಗಿಕ, ಸಾಮಾಜಿಕ ಮತ್ತು ಭಾವನಾತ್ಮಕ ರಕ್ಷಣೆಯ ವಿಧಾನ ಮತ್ತು ಶಿಷ್ಟಾಚಾರ | | | | |
|---|---|---|---|---|
| ವಿಭಾಗ IV C–ಮಕ್ಕಳ ಸುರಕ್ಷತೆ ಮತ್ತು ರಕ್ಷಣೆಯ ಇತರೆ ಕಾರ್ಯವಿಧಾನಗಳು | | | | |
| ಕ್ರ.ಸಂ | ಸೂಚಕಗಳು | ಹೌದು/ ಇಲ್ಲ | ಷರಾ | ಕಡ್ಡಾಯ/ ಶಿಫಾರಸ್ಸು ಮಾಡಲಾದುದು |
| 1 | ಶಾಲೆಯ ಆವರಣ ಮತ್ತು ತರಗತಿಗಳನ್ನು ಶಿಕ್ಷಣ ಮತ್ತು ಸಂಬಂಧಿಸಿದ ಚಟುವಟಿಕೆಗಳ ಹೊರತಾಗಿ, ಕಟ್ಟಡ ನಿರ್ಮಾಣ ಅಥವಾ ಇತರೆ ವಸ್ತುಗಳನ್ನು ಸಂಗ್ರಹಿಸಲು ಬಳಸುವಂತಿಲ್ಲ.<br><br>ಶಾಲೆಯ ಆರವಣದಲ್ಲಿ ಯಾವುದೇ ಸಮಾಜ ಘಾತುಕ ಚಟುವಟಿಕೆಗಳು ಉದಾರಣೆಗೆ; ಮದ್ಯಪಾನ ಮಾಡುವುದು, ಜೂಜಾಡುವುದನ್ನು ನಿಷೇಧಿಸಿದೆ. ಒಂದುವೇಳೆ ಶಾಲೆಯಲ್ಲಿ ಅಥವಾ ಸಮೀಪದಲ್ಲಿ ಯಾವುದೇ ಸಮಾಜ ಘಾತುಕ ಸಭೆಗಳು ನಡೆದಲ್ಲಿ ಅದನ್ನು ಪೋಲಿಸರಿಗೆ ವರದಿಮಾಡುವುದು. | | ಮಾಹಿತಿಯನ್ನು ಸಮುದಾಯ/ ನೆರೆಹೊರೆಯವರಿಂದ ಸಹ ಪಡೆಯುವುದು. | R<br><br>M |
| 2 | ಶಾಲಾ ಸಿಬ್ಬಂದಿಗಳು ವಿದ್ಯಾರ್ಥಿಗಳನ್ನು ತರಗತಿಯ ಒಳಗೆ ಮತ್ತು ಹೊರಗೆ ಸಕ್ರಿಯವಾಗಿ ಮೇಲ್ವಿಚಾರಣೆ ನಡೆಸುವುದು. | | | M |
| 3 | ಮಟ್ಟಿಲುಗಳ ಕೆಳಗೆ, ಏಕಾಂತದ ಸಂದಿ–ಮೂಲೆಗಳು, ಕಾರಿಡಾರ್‌ಗಳನ್ನು ಶಾಲಾ ಸಿಬ್ಬಂದಿಯು ಮಕ್ಕಳು ಶಾಲೆಗೆ ಬರುವಾಗ ಮತ್ತು ಶಾಲೆಯಿಂದ ತೆರಳಿದ ನಂತರ ಪರೀಕ್ಷಿಸುವುದು. | | ಅಪಾಯದ ಮನೋಭಾವವನ್ನು ಹೊಂದದಂತೆ ಮಕ್ಕಳಿಗೆ ಅರಿವು ಮೂಡಿಸುವುದು. | M |
| 4 | ಎಲ್ಲಾ ತರಗತಿಗಳು, ಪ್ರಯೋಗಾಲಯಗಳು, ಶೌಚಾಲಯ, | | | M |

| | | | | |
|---|---|---|---|---|
| | ಗ್ರಂಥಾಲಯ, ಸಿಬ್ಬಂದಿ ಕೊಠಡಿ, ಅಡುಗೆ ಮನೆ, ಕ್ರೀಡಾ ಕೊಠಡಿ, ಸಭಾಂಗಣ ಮತ್ತು ಇತರೆ ಸ್ಥಳಗಳನ್ನು ದಿನದ ಅಂತ್ಯದಲ್ಲಿ ಬೀಗ ಹಾಕುವ ಮುನ್ನ ಶಾಲೆಯ ಸಿಬ್ಬಂದಿಯು ಸರಿಯಾಗಿ ಪರಿಶೀಲಿಸುವುದು | | | |
| 5 | ಶಾಲೆಗೆ ಭೇಟಿ ನೀಡುವ ಹೊರಗಿನವರು, ಶಾಲೆಯ ಕಟ್ಟಡವನ್ನು ಪ್ರವೇಶಿಸುವಲ್ಲಿ ನಿಯಂತ್ರಣ ಮತ್ತು ಮೇಲ್ವಿಚಾರಣಾ ವ್ಯವಸ್ಥೆಯನ್ನು ಹೊಂದುವುದು ಮತ್ತು ಸಂದರ್ಶಕರ ನೋಂದಣಿ ಪುಸ್ತಕವನ್ನು ಆಡಳಿತ ಸಿಬ್ಬಂದಿ/ಭದ್ರತಾ ಸಿಬ್ಬಂದಿ ಕಟ್ಟುನಿಟ್ಟಾಗಿ ಮತ್ತು ಶ್ರದ್ಧೆಯಿಂದ ನಿರ್ವಹಿಸುವುದು. | | ಶಾಲೆಯಲ್ಲಿ ಗೊತ್ತುಪಡಿಸಿದ ಸಂದರ್ಶಕರ ಕೊಠಡಿ ಇರತಕ್ಕದ್ದು. ಸಾರ್ವಜನಿಕ ಶಿಕ್ಷಣ ಇಲಾಖೆ ಹೊರಡಿಸಿರುವ ಸುತ್ತೋಲೆ: http://www.school education.kar.nic.in/ pdffiles/ChildSafety Eng260714.pdf | M |
| 6 | ಕುಟುಂಬದ ತುರ್ತು ಸಂದರ್ಭ ಅಥವಾ ಇತರೆ ಅನಿರೀಕ್ಷಿತ ಬಂದ್‌ಗಳ ಸಂದರ್ಭದಲ್ಲಿ, ಮಗುವನ್ನು ಶಾಲೆಯಿಂದ ಕರೆದುಕೊಂಡು ಹೋಗಲು ಪೋಷಕರು/ ಪಾಲಕರು ಖುದ್ದಾಗಿ ಬಂದಿಲ್ಲದಿದ್ದರೆ ಅಥವಾ ಪೋಷಕರು/ಪಾಲಕರು ಮಗುವನ್ನು ಕರೆದೊಯ್ಯಲು ನೀಡಿರುವ ಅಧಿಕೃತ ಪತ್ರ ಇಲ್ಲದಿದ್ದರೆ ಶಾಲೆಯಿಂದ ಹೊರಹೋಗಲು ಯಾವುದೇ ಮಗುವಿಗೆ ಅವಕಾಶ ನೀಡಲಾಗುವುದಿಲ್ಲ.<br>ಸದರಿ ಮಾಹಿತಿಯನ್ನು ಪಾಲಕರು/ ಪೋಷಕರಿಗೆ ತಿಳಿಸುವುದು. | | ಸಂಸ್ಥೆಯ ಮುಖ್ಯಸ್ಥರ ಜವಾಬ್ದಾರಿಗಳ ಬಗ್ಗೆ ಸಾರ್ವಜನಿಕ ಶಿಕ್ಷಣ ಇಲಾಖೆ ಹೊರಡಿಸಿರುವ ಸುತ್ತೋಲೆ: http://www.school education.kar.nic.in/ pdffiles/ChildSafety Eng260714.pdf | **M** |
| 7 | ಶಾಲೆಯು, ಪೋಷಕರ/ ಪಾಲಕರ ದೂರವಾಣಿ ಸಂಪರ್ಕಗಳು, ವಿಳಾಸದ ಬದಲಾವಣೆ ಮತ್ತು ಶಾಲೆಯ ಪ್ರತಿಯೊಬ್ಬ ವಿದ್ಯಾರ್ಥಿಗಳಿಗೆ ಸಂಬಂಧಿಸಿದ ತುರ್ತು ಸಂಪರ್ಕ | | | M |

| | | | | |
|---|---|---|---|---|
| | ಸಂಖ್ಯೆಗಳ ಅಪ್‌ಡೇಟ್ ಮಾಡಲಾದ ಪಟ್ಟಿಯನ್ನು ನಿರ್ವಹಿಸುತ್ತದೆ.<br><br>ಈ ಕುರಿತು ಪೋಷಕರು ಮತ್ತು ಪಾಲಕರಿಗೆ ಮೊಬೈಲ್ ಫೋನ್ ಮೆಸೇಜ್‌ಗಳ ಮೂಲಕ ಮತ್ತು ಇತರೆಗಳ ಮೂಲಕ ನಿಯಮಿತವಾಗಿ ಮಾಹಿತಿಯನ್ನು ಕಳುಹಿಸಲಾಗುವುದು. | | | R |
| 8 | ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳಾದ ಚಾಲಕರು, ಭದ್ರತಾ ಸಿಬ್ಬಂದಿ ಮತ್ತು ಪರಿಚಾರಕರುಗಳಿಗೆ ವಿಶೇಷ ಅಗತ್ಯೆಯುಳ್ಳ ಮಕ್ಕಳ ಉದಾಹರಣೆಗೆ: ಗಾಲಿಕುರ್ಚಿಗಳನ್ನು ಬಳಸುವ, ದೃಷ್ಠಿ ದೋಷವುಳ್ಳ, ವಾಕ್–ಶ್ರವಣ ವಿಕಲಚೇತನ ಮಕ್ಕಳ ಜೊತೆ ಸಂವಹನ ನಡೆಸುವುದಕ್ಕೆ ತರಬೇತಿ ನೀಡುವುದು | | ಕೊನೆಯ ಪಕ್ಷ 50% ಸಿಬ್ಬಂದಿಗಳಿಗೆ ಈ ನಿಟ್ಟಿನಲ್ಲಿ ತರಬೇತಿ ನೀಡುವುದು | R |
| 9 | ಶೌಚಾಲಯ ಬಳಸುವ ಸಂದರ್ಭದಲ್ಲಿ, ವಿಶೇಷ ಅಗತ್ಯತೆವುಳ್ಳ ವಿದ್ಯಾರ್ಥಿಗಳ ಸುರಕ್ಷತೆಯ ದೃಷ್ಠಿಯಿಂದ ಶಿಕ್ಷಕರು ಅಥವಾ ಪರಿಚಾರಕರು ಅವರ ಜೊತೆಯಲ್ಲಿರುವುದು | | | M |
| 10 | ದೈಹಿಕ ಶಿಕ್ಷಕರು ವಿದ್ಯಾರ್ಥಿಗಳನ್ನು ಕ್ರೀಡೆಗಳಲ್ಲಿ ಅವರ ದೈಹಿಕ ಸಾಮರ್ಥ್ಯ ಮತ್ತು ಆರೋಗ್ಯ ಸಮಸ್ಯೆಗಳನ್ನು ಗಮನಿಸಿ ತೊಡಗಿಸುವುದು.<br><br>ಶಾಲಾ ಪ್ರಾಧಿಕಾರ ಅಥವಾ ತಂದೆತಾಯಿ/ ಪೋಷಕರ ಅನುಮತಿಯಿಲ್ಲದೆ ಶಾಲೆ ಅವಧಿಯಲ್ಲಿ ಅಥವಾ ಮುಗಿದ ನಂತರ ಅಥವಾ ರಜಾ ದಿನಗಳಲ್ಲಿ ಯಾವುದೇ ದೈಹಿಕ ಶಿಕ್ಷಕರು ಅಥವಾ ಇತರೆ ತರಬೇತುದಾರರುಗಳಿಗೆ ಯಾವುದೇ | | ಪಾಲಕರು ಮತ್ತು ಮಕ್ಕಳಿಗೆ ಸದರಿ ವಿಷಯ ಕುರಿತು ಮಾಹಿತಿ/ ಅರಿವು ಮೂಡಿಸುವುದು.<br><br>ಮಕ್ಕಳ ಆರೋಗ್ಯ ಸಮಸ್ಯೆಗಳ ಬಗ್ಗೆ ಪೋಷಕರು ಶಾಲಾ ಆಡಳಿತಕ್ಕೆ ತಿಳಿಸುವುದು. | M |

| | | | | |
|---|---|---|---|---|
| | ಬಾಲಕಿ ಅಥವಾ ಬಾಲಕರಿಗೆ ಒಂಟಿಯಾಗಿ ಕ್ರೀಡಾ ಕೊಠಡಿಯಲ್ಲಿ ತರಬೇತಿ ನೀಡಲು ಅವಕಾಶ ನೀಡತಕ್ಕದಲ್ಲ. | | | |
| 11 | ಶಾಲೆಯು ತನ್ನ ಎಲ್ಲಾ ಮಕ್ಕಳು ತಮ್ಮ ವೈಯಕ್ತಿಕ ಸಮಸ್ಯೆಗಳನ್ನು ನಂಬಿಕೆಯಿಂದ ಹಂಚಿಕೊಳ್ಳಲು ಅವಕಾಶ ನೀಡುತ್ತದೆ. | | ಮಕ್ಕಳು ಶಿಕ್ಷಕರ ಗಮನಕ್ಕೆ ತಂದಿರುವ ತಮ್ಮ ವೈಯಕ್ತಿಕ ಮತ್ತು ಗೌಪ್ಯ ಸ್ವರೂಪದ ಸಮಸ್ಯೆಗಳ ಸಂಖ್ಯೆ ಮತ್ತು ಅವುಗಳನ್ನು ಪರಿಹರಿಸಲು ಕೈಗೊಂಡ ಕ್ರಮಗಳು. | R |

**ವಿಭಾಗ IV–ಡಿ ತುರ್ತು ಸನ್ನದ್ಧತೆ ಮತ್ತು ವಿಪತ್ತು ನಿರ್ವಹಣೆ**

| ಕ್ರ.ಸಂ | ಸೂಚಕಗಳು | ಹೌದು/ ಇಲ್ಲ | ಷರಾ | ಕಡ್ಡಾಯ/ ಶಿಫಾರಸ್ಸು ಮಾಡಲಾದುದು |
|---|---|---|---|---|
| 1 | ತುರ್ತು ಸಂದರ್ಭಗಳಲ್ಲಿ ಪರಿಣಾಮಕಾರಿ ಮತ್ತು ಸ್ಪಷ್ಟ ಸಂವಹನವನ್ನು ಖಚಿತಪಡಿಸಿಕೊಳ್ಳಲು, ಎಲ್ಲಾ ಮಕ್ಕಳು ಸುಲಭವಾಗಿ ಅರ್ಥಮಾಡಿಕೊಳ್ಳುವ ಶಬ್ದಕೋಶವನ್ನು ಶಾಲೆ ಅಭಿವೃದ್ಧಿ ಪಡಿಸುವುದು ಮತ್ತು ಅದನ್ನು ನಿಯಮಿತವಾಗಿ ನಡೆಯು ತುರ್ತು ಡ್ರಿಲ್‌ಗಳಲ್ಲಿ ಬಳಸುವುದು. | | | R |
| 2 | ಅಪಾಯದ ಸಂದರ್ಭದಲ್ಲಿ ಜನರನ್ನು ತೆರವುಗೊಳಿಸುವ ಯೋಜನೆಯ ರೇಖಾ ಚಿತ್ರವನ್ನು (evacuation plan) ಶಾಲಾ ಕಟ್ಟಡದಲ್ಲಿರುವ ಪ್ರಮುಖ ಸ್ಥಳಗಳಲ್ಲಿ ಪ್ರದರ್ಶಿಸಲಾಗಿದೆ. | | | M |

| | | | | |
|---|---|---|---|---|
| | ವಿಪತ್ತಿನ ಸಂದರ್ಭದಲ್ಲಿ ವಿಕಲಚೇತನ ಮಕ್ಕಳನ್ನು ತೆರವುಗೊಳಿಸಲು ಮತ್ತು ನೂಕುನುಗ್ಗಲನ್ನು ತಡೆಯಲು ಶಿಕ್ಷಕರು ಮತ್ತು ವಿದ್ಯಾರ್ಥಿಗಳು ತುರ್ತು ತೆರವು ಕವಾಯತು (evacuation drill) ತರಬೇತಿ ಪಡೆದಿದ್ದಾರೆ.<br><br>ವಿಪತ್ತು/ತುರ್ತು ಸಂದರ್ಭಗಳಲ್ಲಿ ಸೇರಬೇಕಾದ ಸ್ಥಳದ (assembly point) ಬಗ್ಗೆ ಸಿಬ್ಬಂದಿ ವರ್ಗದವರು ಮತ್ತು ವಿದ್ಯಾರ್ಥಿಗಳಿಗೆ ಅರಿವು ಮೂಡಿಸುವುದು. | | | |
| 3 | ಅಗ್ನಿ ದುರಂತ, ಕಟ್ಟಡ ಅಥವಾ ಗೋಡೆ ಕುಸಿತ, ಪ್ರವಾಹ, ವಿದ್ಯುತ್ ಅಪಘಾತ ಇತ್ಯಾದಿ ತುರ್ತು ಸಂದರ್ಭಗಳನ್ನು ಎದುರಿಸಲು ಸಿಬ್ಬಂದಿ ವರ್ಗದವರು ತರಬೇತಿಯನ್ನು ಪಡೆದಿದ್ದಾರೆ. | | ರಾಷ್ಟ್ರೀಯ ವಿಪತ್ತು ನಿರ್ವಹಣಾ ನೀತಿ, 2009ರ ವಿಭಾಗ 10.2.2: ಶಾಲೆಗಳಲ್ಲಿ ವಿಪತ್ತು ನಿರ್ವಹಣಾ ತರಬೇತಿಯನ್ನು ನೀಡಲು ಮಹತ್ವ ನೀಡುವುದು: http://www.ndma.gov.in/images/guidelines/national-dm-policy2009.pdf | M |
| 4 | ನಿಯಮಗಳಿಗೆ ಅನುಸಾರವಾಗಿ, ಸೂಕ್ತ ಸ್ಥಳಗಳಲ್ಲಿ ಸಾಕಷ್ಟು ಅಗ್ನಿಶಾಮಕ ಸಾಧನಗಳನ್ನು ಅಳವಡಿಸಲಾಗಿದೆ ಮತ್ತು ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿ ಅವುಗಳನ್ನು ಬಳಸುವ ವಿಧಾನಗಳನ್ನು ಅರಿತಿದ್ದಾರೆ | | ಅಗ್ನಿಶಾಮಕ ಸಾಧನವು ಬಳಸುವ ಸ್ಥಿತಿಯಲ್ಲಿರಬೇಕು ಅಗ್ನಿಶಾಮಕ ಸಾಧನವನ್ನು ನಿಯತಕಾಲಿಕವಾಗಿ ನಿರ್ವಹಣೆ ಮಾಡುವುದರ ಜೊತೆಗೆ ಈ ಹಿಂದೆ ನಿರ್ವಹಣೆ ಮಾಡಿದ ದಿನಾಂಕವನ್ನು ಭಾರತೀಯ ಗುಣಮಟ್ಟ ದಳದ ನಿರ್ದೇಶನ– ಶಾಲೆಗಳಲ್ಲಿ ಅಗ್ನಿ ದುರಂತದ ಸುರಕ್ಷಾ ನೀತಿ ಸಂಹಿತೆಗೆ ಅನುಗುಣವಾಗಿ ನಮೂದಿಸಿರಬೇಕು : https://law.resource.org/pub/in/bis/S03/is.14435.1997.pdf | M |

| | | | | |
|---|---|---|---|---|
| 5 | ಆಡಳಿತ ವರ್ಗದ ಸದಸ್ಯರು, ಶಿಕ್ಷಕರು ಮತ್ತು ಹಿರಿಯ ವಿದ್ಯಾರ್ಥಿಗಳನ್ನು ಒಳಗೊಂಡಿರುವ ಒಂದು **ಶಾಲಾ ವಿಪತ್ತು ಪ್ರತಿಕ್ರಿಯಾ ತಂಡ**ವನ್ನು ಶಾಲೆಯು ಹೊಂದಿದೆ ಮತ್ತು ವಿಪತ್ತು ನಿರ್ವಹಣೆ ಯೋಜನೆಗಳ ಬಗ್ಗೆ ಅವರಿಗೆ ಅರಿವು ನೀಡಲಾಗಿದೆ. | | ಶಾಲಾ ಸುರಕ್ಷತೆಗಾಗಿ ವಿಪತ್ತು ನಿರ್ವಹಣಾ ಸಚಿವಾಲಯವು ಹೊರಡಿಸಿರುವ ಮಾರ್ಗಸೂಚಿಗಳನ್ನು ಶಾಲೆಗಳು ಪಾಲಿಸುವುದು: http://www.ndma.gov.in/images/pdf/SchoolSafety.pdf | R |
| 6 | ಸಿಬ್ಬಂದಿ ವರ್ಗ ಮತ್ತು ವಿದ್ಯಾರ್ಥಿಗಳಿಗೆ ನಿಯಮಿತವಾಗಿ ಸಿಪಿಆರ್ (cardio pulmonary resuscilation) ಮತ್ತು ಪ್ರಥಮ ಚಿಕಿತ್ಸಾ ತರಗತಿಗಳನ್ನು ನಡೆಸಲಾಗಿದೆ.<br><br>ತುರ್ತು ದೂರವಾಣಿ ಸಂಖ್ಯೆಗಳಾದ ಪೊಲೀಸ್–100, ಅಗ್ನಿ–101, ಆಂಬುಲೆನ್ಸ್–108 ಗಳನ್ನು ಶಾಲೆಯ ಪ್ರಮುಖ ಸ್ಥಳಗಳಲ್ಲಿ ಪ್ರದರ್ಶಿಸುವುದು.<br><br>ಶಾಲಾ ಸಿಬ್ಬಂದಿಗಳು ಆಘಾತ/ವಿಪತ್ತಿನ ನಂತರದಲ್ಲಿ ವಹಿಸಬೇಕಾದ ಮಧ್ಯಸ್ಥಿಕೆ ಕ್ರಮಗಳು ಮತ್ತು ಉಲ್ಲೇಖ ವ್ಯವಸ್ಥೆಗಳ ಬಗ್ಗೆ ತರಬೇತಿಯನ್ನು ಹೊಂದಿದ್ದಾರೆ. | | | M<br><br>M<br><br>R |

| ವಿಭಾಗ V–ಸೈಬರ್ ಸುರಕ್ಷತೆ | | | | |
|---|---|---|---|---|
| ಕ್ರ ಸಂ | ಸೂಚಕಗಳು | ಹೌದು/ ಇಲ್ಲ | ಷರಾ | ಕಡ್ಡಾಯ/ ಶಿಫಾರಸ್ಸು ಮಾಡಲಾದುದು |
| 1 | ಮಕ್ಕಳು ಕಂಪ್ಯೂಟರ್ ಕೊಠಡಿಗಳನ್ನು ಮತ್ತು ವಿದ್ಯುನ್ಮಾನ ಹಾಗೂ ತಾಂತ್ರಿಕ ಸಾಧನಗಳನ್ನು ಬಳಸುವಾಗ ಶಿಕ್ಷಕರು ಯಾವಾಗಲೂ ಮೇಲ್ವಿಚಾರಣೆ ನಡೆಸುವರು | | ಮಕ್ಕಳ ವಿರುದ್ಧದ ಸೈಬರ್ ಅಪರಾಧಗಳನ್ನು ನಿಯಂತ್ರಿಸುವಲ್ಲಿ ಮತ್ತು ಅವುಗಳ ವಿರುದ್ಧ ಹೋರಾಡಲು ಗೃಹ ಸಚಿವಾಲಯದ ಸಲಹಾ ಮಂಡಳಿಯ ನಿರ್ದೇಶನಗಳು. ಸೈಬರ್ ಅಪರಾಧಗಳ ವಿರುದ್ಧದ ಹೋರಾಟದಲ್ಲಿ ಪೋಷಕರು ಮತ್ತು ಶಿಕ್ಷಕರ ಪಾತ್ರ ಕ್ರಿಯಾಶೀಲವಾದುದು. *http://www.mha.nic.in/ sites/upload files/mha /files/CS-Adv-160112.pdf* | M |
| 2 | ವಯಸ್ಕರು ಬಳಸುವ ಅಂತರ್ಜಾಲ ಸೈಟ್‌ಗಳನ್ನು ಮಕ್ಕಳು ಬಳಸುವುದನ್ನು ನಿರ್ಬಂಧಿಸುವ ಇಂಟರ್‌ನೆಟ್ ಭದ್ರತಾ ವ್ಯವಸ್ಥೆ ಜಾರಿಯಲ್ಲಿದೆ. ಶಾಲೆಯಲ್ಲಿ ಸಾಮಾಜಿಕ ಜಾಲತಾಣಗಳನ್ನು ಯಾವಾಗಲೂ ನಿರ್ಬಂಧಿಸಲಾಗಿದೆ. | | ಶಾಲೆಯಲ್ಲಿ ಮೊಬೈಲ್ ಫೋನ್ ನಲ್ಲಿ ಅಂತರ್ಜಾಲ ಬಳಸುವುದನ್ನು ನಿಷೇಧಿಸಿರುವ ಬಗ್ಗೆ ಸಿಬ್ಬಂದಿಗೆ ಸೂಚನೆ ನೀಡಿದೆ. | M |
| 3 | ತಂತ್ರಜ್ಞಾನದ ಸುರಕ್ಷಿತ ಬಳಕೆ ಬಗ್ಗೆ ಮತ್ತು ಡಿಜಿಟಲ್ ನಾಗರಿಕ–ಮೊಬೈಲ್, ಎಸ್ಎಂಎಸ್, ಇಂಟರ್‌ನೆಟ್, ಇ–ಮೇಲ್ ಅಥವಾ ನೆಟ್ ಚ್ಯಾಟ್‌ಗಳ ಬಳಕೆ, ಅಶ್ಲೀಲ ಚಿತ್ರಗಳ ಬಳಕೆಯ ಪರಿಣಾಮ ಮತ್ತು ಅಸುರಕ್ಷಿತ ಮತ್ತು ಅಪಾಯಕಾರಿ ವರ್ತನೆಗಳನ್ನು ಮಾಡುವಾಗ ಇರಬೇಕಾದ ಜವಾಬ್ದಾರಿ ಮತ್ತು ಸಂವೇಧನಾ ಶೀಲತೆಗಳ ಬಗ್ಗೆ ವಿದ್ಯಾರ್ಥಿಗಳಿಗೆ ನಿಯಮಿತವಾಗಿ ಶಿಕ್ಷಣ ನೀಡಲಾಗಿದೆ. | | ಆರಂಭಿಕ ಹಂತದಲ್ಲಿ ತರಬೇತಿಯನ್ನು ನೀಡಲು ತಜ್ಞರನ್ನು ಸಂಪರ್ಕಿಸುವುದು ಮತ್ತು ತರಬೇತಿ ದಿನಾಂಕದ ದಾಖಲೆಯನ್ನು ನಿರ್ವಹಿಸುವುದು.<br><br>ಶಾಲೆಯಲ್ಲಿ ಬೆದರಿಕೆ ಹಾಕುವುದು ಮತ್ತು ರ್‍ಯಾಗಿಂಗ್ ಕುರಿತ CBSE ಮಾರ್ಗಸೂಚಿಗಳು (ಸೈಬರ್ ಬೆದರಿಕೆಯನ್ನು, ಬೆದರಿಕೆ ಹಾಕುವುದರ ಅಡಿಯಲ್ಲಿ ಪರಿಗಣಿಸಲಾಗುತ್ತದೆ.) http://ptlb.in/ccici/wp-content/uploads/2015/03/CBSE-Guidelines-For-Prevention-Of- | M |

| | | | | |
|---|---|---|---|---|
| 4 | ವಿದ್ಯಾರ್ಥಿಗಳಿಂದ ಇತರ ವಿದ್ಯಾರ್ಥಿಗಳ ಮೇಲೆ ಅಥವಾ ವಯಸ್ಕರ ಮೇಲೆ ಆಗುವ ಸೈಬರ್ ದುರುಪಯೋಗ, ಬೆದರಿಕೆ ಹಾಕುವುದು, ಕಿರುಕುಳಗಳ ಪರಿಣಾಮ ಮತ್ತು ಇವುಗಳನ್ನು ತಡೆಯಲು ಮಾಹಿತಿ ತಂತ್ರಜ್ಞಾನ ಕಾಯ್ದೆ, ಬಾಲ ನ್ಯಾಯ ಕಾಯ್ದೆ, ಐಪಿಸಿ ಸೆಕ್ಷನ್ಸ್ ಗಳಡಿ ವಿಧಿಸಲಾಗುವ ದಂಢನೆಗಳ ಬಗ್ಗೆ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡಲಾಗಿದೆ | | Bullying-And-Ragging-In-Schools-9th-March-2015-Circular-No.-Acad.-17-2015.pdf | M |
| 5 | ಶಾಲೆಯಲ್ಲಿ ಸೈಬರ್ ಹಲ್ಲೆ ಅಥವಾ ಅಪರಾಧ ಪ್ರಕರಣಗಳನ್ನು ನಿರ್ವಹಿಸುವ ಕಾರ್ಯವಿಧಾನಗಳ ಬಗ್ಗೆ ಆಡಳಿತ ಮಂಡಳಿ, ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಗೆ ತರಬೇತಿ ನೀಡುವುದು. | | ಶಾಲೆಯು ಕರ್ನಾಟಕ ರಾಜ್ಯ ಪೋಲೀಸ್ ಇಲಾಖೆ ಸೈಬರ್ ಅಪರಾಧ ವಿಭಾಗವನ್ನು ಸಂಪರ್ಕಿಸುವುದು (ಮಾಹಿತಿ ಮತ್ತು ತಂತ್ರಜ್ಞಾನ ಕಾಯ್ದೆ 2000 ಹಾಗೂ ಅದರ ತಿದ್ದುಪಡಿ ಕಾಯ್ದೆ 2008 ರಲ್ಲಿನ ಅವಕಾಶಗಳ ಬಗ್ಗೆ ಅರಿವನ್ನು ಹೊಂದುವುದು ಸೂಕ್ತ) | M |
| 6 | ತಂತ್ರಜ್ಞಾನ, ಅಂತರ್ಜಾಲ, ವಿದ್ಯಾರ್ಥಿಗಳ ಅಪಾಯಕಾರಿ ವರ್ತನೆಗಳ ನಿಯಂತ್ರಣ ಮತ್ತು ಪರಿಹಾರಕ್ಕೆ ಕಾರ್ಯತಂತ್ರಗಳು, ಮುಂತಾದವುಗಳ ಬಗ್ಗೆ ಪೋಷಕರಿಗೆ ಅರಿವು ಮೂಡಿಸುವುದು. | | ಈ ಮಾಹಿತಿಯನ್ನು ಪೋಷಕರಿಗೆ ಕರಪತ್ರದ ಮೂಲಕ ನೀಡಿ ಸಹಿ ಪಡೆಯುವುದು. | R |
| 7 | ಸೈಬರ್ ಅಪರಾಧ/ಕಿರುಕುಳ ಪ್ರಕರಣಗಳನ್ನು ಸೂಕ್ಷ್ಮಸಂವೇದನೆ ಮತ್ತು ಗೌಪ್ಯತೆಯಿಂದ ನಿರ್ವಹಿಸುವುದು.<br>ಶಾಲೆಯು ಇಂತಹ ಪ್ರಕರಣಗಳ ದಾಖಲಾತಿಯನ್ನು ನಿರ್ವಹಿಸುವುದು. | | ಮಕ್ಕಳು, ಶಾಲೆ ಮತ್ತು ಕುಟುಂಬಗಳಿಗೆ ಆಗುವ ಹಾನಿಯನ್ನು ಕಡಿಮೆ ಮಾಡಲು ಇದು ಮುಖ್ಯವಾಗಿದೆ. | M |
| 8 | ಶಾಲೆಯು ಇ–ತ್ಯಾಜ್ಯವನ್ನು ಸರಿಯಾಗಿ ನಿರ್ವಹಿಸುತ್ತಿದೆ ಮತ್ತು ವಿದ್ಯಾರ್ಥಿಗಳಿಗೆ ಈ ಕುರಿತು ತರಬೇತಿಯನ್ನು ನೀಡಲಾಗಿದೆ | | ಇ–ತ್ಯಾಜ್ಯ ನಿರ್ವಹಣೆ ನಿಯಮಗಳು 2011ರ ಪ್ರಕಾರ ಶಾಲೆಗಳು ಇ–ತ್ಯಾಜ್ಯವೂ ಸೇರಿದಂತೆ ಇತರೆ ತ್ಯಾಜ್ಯಗಳ ನಿರ್ವಹಣೆಗೆ ಬದ್ಧವಾಗಿವೆ. ಈ ಕುರಿತು ಕಾರ್ಯನಿರ್ವಹಿಸುತ್ತಿರುವ ಸ್ವಸಹಾಯ | M |

| | | | | |
|---|---|---|---|---|
| | | | ಸಂಸ್ಥೆಗಳು ಹಾಗೂ ಇತರೆ ಸಂಸ್ಥೆಗಳ ಸಹಾಯವನ್ನು ಪಡೆಯುವುದು. ಈ ಕುರಿತ ಮಾಹಿತಿ: http://www.moef.nic.in/downloads/rules-and-regulations/1035e_eng.pdf ರಲ್ಲಿ ಲಭ್ಯವಿದೆ. | |

ಆನ್‌ಲೈನ್ ಶೋಷಣೆಯ ಬಗ್ಗೆ ಹೇಗೆ ವ್ಯವಸಹರಿಸಬೇಕೆಂಬುದರ ಬಗ್ಗೆ ಹೆಚ್ಚಿನ ವಿವರಗಳಿಗಾಗಿ ಕೆಳಗೆ ಒದಗಿಸಲಾದ ಸಂಪರ್ಕಕೊಂಡಿಯ ವಿಳಾಸವನ್ನು ದಯವಿಟ್ಟು ನೋಡಿ

**"ಆನ್‌ಲೈನ್ ಶೋಷಣೆಯಿಂದ ಸುರಕ್ಷಿತವಾಗಿರಿ" (ಮಕ್ಕಳಿಗಾಗಿ)**

**ECPAT** ಅವರಿಂದ http://ecpat.net/sites/default/files/Guide%20protectiononline layout%203 home 2014Oct31 ONLINE.pdf








ಕಾರ್ಯಕ್ರಮ





